ಸಂಪುಟ-1 ಸಂಚಿಕೆ-2

ಜುಲೈ, 2015-ಡಿಸೆಂಬರ್, 2016

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ-ಬೆಂಗಳೂರು

ಮಗು ಮತ್ತು ಕಾನೂನು ಕೇಂದ್ರದ ಆಂತರಿಕ ವಾರ್ತಾಪತ್ರ

# ಬಾಲನ್ಯಾಯ

ಇಂದಿನ ಮಕ್ಕಳು ಇಂದಿನ ಪ್ರಜೆಗಳು



# ಕರ್ನಾಟಕದಲ್ಲಿ ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮದ ಅನುಷ್ಠಾನ

ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮವನ್ನು 2013ರಲ್ಲಿ ಶಾಸನಗೊಳಿಸಿದ ನಂತರ 2014ರ ಜನವರಿಯಲ್ಲಿ ಅದನ್ನು ಕರ್ನಾಟಕದಲ್ಲಿ ಜಾರಿಗೊಳಿಸಲಾಯಿತು. ಅದು ಅನುಷ್ಠಾನಗೊಂಡಂದಿನಿಂದ ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮದ ಜಾರಿಯ ವ್ಯವಸ್ಥೆಗಳಲ್ಲಿ ನಿರಂತರ ನವೀಕರಣ ಮಾಡುತ್ತಿರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ವರ್ಷವು ಕೊನೆಗೊಳ್ಳುತ್ತಿರುವ ಹಂತದಲ್ಲಿ 2016ರಲ್ಲಿ ಸರಕಾರದ ವಿವಿಧ ಇಲಾಖೆಗಳು NFSA ನ್ನು ಅನುಷ್ಠಾನಗೊಳಿಸುವಲ್ಲಿ ಕೈಗೊಂಡ ಕ್ರಮಗಳ ಕುರಿತು ಅವಲೋಕನ ಮಾಡಲು ಇದು ಸರಿಯಾದ ಸಮಯವಾಗಿದೆ. NFSA ನಾಲ್ಕು ಯೋಜನೆಗಳನ್ನು ಕಾನೂನಾತ್ಮಕ ಅಧಿಕಾರಗಳನ್ನಾಗಿ ಪರಿವರ್ತಿಸಿದೆ: ಸಾರ್ವಜನಿಕ ವಿತರಣಾ ವ್ಯವಸ್ಥೆ(PDS), ಮಧ್ಯಾಹ್ನದ ಊಟದ ಯೋಜನೆ(MDMS), ಸಮಗ್ರ ಶಿಶು ಕಲ್ಯಾಣ ಸೇವೆಗಳು(ICDS) ಮತ್ತು ನಾಲ್ಕನೆಯದಾಗಿ ಹೆರಿಗೆ ಲಾಭ ಯೋಜನೆ(MBS). ಈ ಲೇಖನದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು ಮಧ್ಯಾಹ್ನದ ಊಟದ ಯೋಜನೆ ಅನುಷ್ಠಾನದಲ್ಲಿ ತೆಗೆದುಕೊಂಡಿರುವ ಇತ್ತೀಚಿನ ಕ್ರಮಗಳನ್ನು ಎತ್ತಿ ತೋರಿಸುತ್ತದೆ. ಸಮಗ್ರ ಶಿಶು ಕಲ್ಯಾಣ ಸೇವೆಗಳು ಮತ್ತು ಹೆರಿಗೆ ಲಾಭ ಯೋಜನೆಗಳು NFSAನ ಒಂದು ಭಾಗವಾಗಿದ್ದರೂ ಹಾಲಿ ವರ್ಷದ ಕ್ರಮಗಳ ಕುರಿತು ಗಣನೀಯವಾದ ದತ್ತಾಂಶಗಳ ಕೊರತೆಯಿಂದಾಗಿ ಅವುಗಳನ್ನು ಈ ಕೆಳಗೆ ಚರ್ಚಿಸಲಾಗಿಲ್ಲ. ಕರ್ನಾಟಕ ಸರಕಾರವು 2016ರಲ್ಲಿ ಆಹಾರ ಭದ್ರತೆಯನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಕೆಳಗಿನ ಕ್ರಮಗಳನ್ನು ಕೈಗೊಂಡಿದೆ:

### ಗುರುತಿಸುವಿಕೆಯ ಹೊಸ ಮಾನದಂಡಗಳು

ಸಾರ್ವಜನಿಕ ವಿತರಣಾ ವ್ಯವಸ್ಥೆ ಪಡಿತರ ಅಂಗಡಿಗಳ ಮೂಲಕ ಕೆಲಸ ಮಾಡುತ್ತದೆ. ಸೂಕ್ತವಾದ ಪಡಿತರ ಚೀಟಿಗಳನ್ನು ಹೊಂದಿರುವ ಆದ್ಯತಾ ಕುಟುಂಬಗಳು (PHH) ಈ ಅಂಗಡಿಗಳಲ್ಲಿ ಆಹಾರ ಧಾನ್ಯಗಳು ಅತ್ಯಂತ ಕಡಿಮೆ ಬೆಲೆ ಕೊಂಡುಕೊಳ್ಳುತ್ತವೆ. NFSA ನ ಕಲಮು 10ರ ಪ್ರಕಾರ ಆದ್ಯತಾ ಕುಟುಂಬಗಳನ್ನು ಗುರುತಿಸಲು ಮಾರ್ಗಸೂಚಿಗಳನ್ನು ರೂಪಿಸುವುದು ರಾಜ್ಯ ಸರಕಾರದ ಕರ್ತವ್ಯವಾಗಿದೆ. 2016ರಲ್ಲಿ ಕರ್ನಾಟಕ ಸರಕಾರವು ಗುರುತಿಸುವಿಕೆಯ ಹೊಸ ಮಾನದಂಡಗಳ ಸೂಚನೆಯನ್ನು ಜಾರಿಗೊಳಿಸಿತು[1]. ಈ ಹೊಸ ಅಧಿಸೂಚನೆಯ ಪ್ರಕಾರ ಆದ್ಯತಾ ಕುಟುಂಬಗಳನ್ನು ಗುರುತಿಸುವ ಮಾನದಂಡಗಳು ಯಾರನ್ನು ಸೇರಿಸಿಕೊಳ್ಳಬಾರದು ಎನ್ನುವ ನಾಲ್ಕು ಅಂಶಗಳನ್ನು ಒಳಗೊಂಡಿದ್ದವು. ಅವೆಂದರೆ:

1. ಸರಕಾರದ/ಸರಕಾರದ ಅನುದಾನ ಪಡೆದ ಸಂಸ್ಥೆಗಳ ಅಥವಾ ಸರಕಾರಿ ಸ್ವಾಮ್ಯದ ಸಂಸ್ಥೆಗಳು, ಮಂಡಳಿಗಳು, ನಿಗಮಗಳು, ಸ್ವಾಯತ್ತ ಸಂಸ್ಥೆಗಳು ಇತ್ಯಾದಿಗಳ ನೌಕರರು, ಆದಾಯ ತೆರಿಗೆ, ಸೇವಾ ತೆರಿಗೆ, ವ್ಯಾಟ್, ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳನ್ನು ಹೊರತುಪಡಿಸಿ;

2. ಮೂರು ಹೆಕ್ಟೇರಿನವರೆಗೆ ಒಣ ಬೇಸಾಯದ ಕೃಷಿ ಭೂಮಿಯನ್ನು ಅಥವಾ ಅದಕ್ಕೆ ಸಮನಾದ ನೀರಾವರಿ ಜಮೀನನ್ನು ಹೊಂದಿರುವ ಎಲ್ಲಾ ಗ್ರಾಮೀಣ ಕುಟುಂಬಗಳು ಮತ್ತು 1000 ಚದರ ಅಡಿ ಪಕ್ಕಾ ಮನೆಗಳನ್ನು ಹೊಂದಿರುವ ನಗರ ಕುಟುಂಬಗಳನ್ನು ಹೊರತುಪಡಿಸಿ;

3. ಸ್ವಾವಲಂಬನೆಗಾಗಿ ಟ್ರ್ಯಾಕ್ಟರ್, ಮಾಕ್ಸಿ ಕ್ಯಾಬ್, ಟ್ಯಾಕ್ಸಿ ಇತ್ಯಾದಿ ವಾಣಿಜ್ಯ ವಾಹನಗಳನ್ನು ಬಳಸುವ ವ್ಯಕ್ತಿಗಳು ಮತ್ತು ನಾಲ್ಕು ಚಕ್ರಗಳ ವಾಹನಗಳ ಮಾಲೀಕರನ್ನು ಹೊರತುಪಡಿಸಿ;

4. ತಿಂಗಳಿಗೆ 150 ಯುನಿಟ್‌ಗಿಂತ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಬಳಸುತ್ತಿರುವ ಎಲ್ಲಾ ಕುಟುಂಬಗಳನ್ನು ಹೊರತುಪಡಿಸಿ.

ಮೇಲಿನ ನಾಲ್ಕು ವರ್ಗಗಳಲ್ಲಿ ಬರುವ ಕುಟುಂಬಗಳನ್ನು ಹೊರತುಪಡಿಸಿ ಉಳಿದೆಲ್ಲಾ ಕುಟುಂಬಗಳನ್ನು NFSA ಯ ಫಲಾನುಭವಿಗಳೆಂದು ಗುರುತಿಸಲಾಗುತ್ತದೆ.

### ರಾಜ್ಯ ಆಹಾರ ಆಯೋಗ (SFC)

ರಾಜ್ಯ ಅಹಾರ ಆಯೋಗವು ರಾಜ್ಯದಲ್ಲಿ NFSA ಅಡಿಯಲ್ಲಿನ ಎಲ್ಲ ಯೋಜನೆಗಳ ಉಸ್ತುವಾರಿಯನ್ನು ನೋಡಿಕೊಳ್ಳುವ ನಿಕಾಯವಾಗಿದೆ. ಆಯೋಗವು ದೂರುಗಳನ್ನು ಸ್ವಯಂ ಆಗಿ ಪರಿಶೀಲಿಸಿ ಎತ್ತಿಕೊಂಡು ಅನುಷ್ಠಾನದಲ್ಲಿ ಆಗಿರುವ ಉಲ್ಲಂಘನೆಗಳ ವಿಚಾರಣೆಯನ್ನು ಮಾಡಬಲ್ಲುದು. ರಾಜ್ಯದ ಒಳಗೆ NFSA ಅನುಷ್ಠಾನದ ಕುರಿತು ಸರಕಾರ ಮತ್ತು ಅದರ ಪೂರಕ ಸಂಸ್ಥೆಗಳಿಗೆ ಸಲಹೆ ನೀಡುವ ಪ್ರಮುಖ ಅಧಿಕಾರವನ್ನು ಹೊಂದಿದೆ.

ಸರಕಾರ ತನ್ನದೊಂದು ಆದೇಶದ[2] ಪ್ರಕಾರ 2016 ಜೂನ್ ತಿಂಗಳಲ್ಲಿ ರಾಜ್ಯ ಆಹಾರ ಆಯೋಗವನ್ನು ಸ್ಥಾಪಿಸಿದೆ. ಈ ಆದೇಶವು ರಾಜ್ಯಪಾಲರ ಅನುಮೋದನೆಯನ್ನು ಪಡೆದಿದೆ; ಆದರೆ ಅದನ್ನಿನ್ನೂ ಅಧಿಸೂಚಿಸಲಾಗಿಲ್ಲ. ಈ ಆದೇಶದ ಅಡಿಯಲ್ಲಿ ಸ್ವತಂತ್ರವಾದ ರಾಜ್ಯ ಆಹಾರ ಆಯೋಗವನ್ನು ಸ್ಥಾಪಿಸಲಾಗಿದೆ. ಸದಸ್ಯರ ಸಂಖ್ಯೆ, ಅವರ ಅರ್ಹತೆ ಮತ್ತು ಸೇವಾವಧಿ, ಅವರನ್ನು ತೆಗೆದುಹಾಕುವ ವಿಧಾನ, ಅಧಿಕಾರಗಳು ಮತ್ತು ಕರ್ತವ್ಯಗಳು ಎಲ್ಲವೂ NFSA ಯ ಕಲಮು 16ರ ಪ್ರಕಾರ ಇರುತ್ತವೆ.



ಸದಸ್ಯರ ನೇಮಕಾತಿಯನ್ನು ಮುಖ್ಯ ಮಂತ್ರಿಗಳು, ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ಸೇವೆಗಳ ಮಂತ್ರಿಗಳು, ವಿಧಾನ ಮಂಡಳ ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನು ಒಳಗೊಂಡ ಆಯ್ಕೆ ಸಮಿತಿಯ ಶಿಫಾರಸ್ಸಿನ ಅನ್ವಯ ಮಾಡಲಾಗುತ್ತದೆ. SFCಯ ಕಾರ್ಯದರ್ಶಿ ಕೆಎಎಸ್ ಅಥವಾ ರಾಜ್ಯ ಕೇಡರಿನ ಐಎಎಸ್ ಅಧಿಕಾರಿಯಾಗಿರುತ್ತಾರೆ.

**ಜಿಲ್ಲಾ ದೂರು ನಿರ್ವಹಣಾ ಅಧಿಕಾರಿಗೆ (DGRO) ದೂರು ಸಲ್ಲಿಸುವ ವಿಧಾನ**

ಜಿಲ್ಲಾ ದೂರು ನಿರ್ವಹಣಾ ಅಧಿಕಾರಿಯನ್ನು NFSA ಅಡಿಯಲ್ಲಿ ಬರುವ ಎಲ್ಲಾ ಯೋಜನೆಗಳ ಪ್ರಾಥಮಿಕ ಉಸ್ತುವಾರಿ ಅಧಿಕಾರಿಯೆಂಬುದಾಗಿ ಪರಿಗಣಿಸಲಾಗಿದೆ. ಆಹಾರ ಧಾನ್ಯಗಳ ವಿತರಣೆ ಮತ್ತು ಅಧಿನಿಯಮದ ಅಧ್ಯಾಯ 2ರಲ್ಲಿ ಬರುವ ಎಲ್ಲಾ ಅಧಿಕಾರಗಳಿಗೆ (ಕೇವಲ TPDS ಗೆ ಮಾತ್ರ ಸೀಮಿತಗೊಳಿಸಿ ಅಲ್ಲ) ಸಂಬಂಧಿಸಿದಂತೆ ಬರುವ ದೂರುಗಳಿಗೆ ಪರಿಹಾರ ಒದಗಿಸುವುದು ಅವರ ಕರ್ತವ್ಯ. ನೋಡಲ್ ಅಧಿಕಾರಿಗಳಿಂದ ಬರುವ ಎಲ್ಲಾ ಮನವಿಗಳು DGRO ಎದುರು ಬರುತ್ತವೆ. ಸರಕಾರದ 2016ರ[3] ಇತ್ತೀಚಿನ ಆದೇಶದಲ್ಲಿ, ಅಧಿನಿಯಮದ ಕಲಮು 15(5)ರಲ್ಲಿ ತಿಳಿಸಿರುವಂತೆ, ದೂರುಗಳನ್ನು ಪರಿಹರಿಸುವ ವಿಧಾನ, ಗಡವು ಅವಧಿಯನ್ನು ಸರಕಾರವು ನಿಗದಿಪಡಿಸಿದೆ. ಯಾವುದೇ ವ್ಯಕ್ತಿ ಅಥವಾ ಅವರ ಪ್ರತಿನಿಧಿ ಲಿಖಿತದಲ್ಲಿ ಅಥವಾ ಇಲೆಕ್ಟ್ರಾನಿಕವಾಗಿ DGRO ಎದುರು ದೂರನ್ನು ಸಲ್ಲಿಸುವ ಅವಕಾಶವನ್ನು ಕಲ್ಪಿಸುತ್ತದೆ. ಅಲ್ಲದೇ, ವಿಚಾರಣೆಯು ಸಂಕ್ಷಿಪ್ತ ಮತ್ತು ಶೀಘ್ರವಾಗಿರಬೇಕು ಮತ್ತು ದೂರುಗಳನ್ನು ಅವುಗಳನ್ನು ಸ್ವೀಕರಿಸಿದ 30 ದಿನಗಳ ಒಳಗಾಗಿ ವಿಲೇವಾರಿ ಮಾಡಬೇಕು ಎಂದೂ ವಿಧಿಸಲಾಗಿದೆ, DGRO ಆದೇಶದ ಮೇಲಿನ ಮೇಲ್ಮನವಿಯು SFC ಎದುರು ಇದೆ.

**ಕರ್ನಾಟಕ ಜಾಗೃತ ಸಮಿತಿಯ ಹೊಸ ನಿಯಮಗಳು– 2016**

NFSAನ S.29 ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು "ಕರ್ನಾಟಕ ಜಾಗೃತ ಸಮಿತಿ (ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಮಾವಳಿ, 2016"ನ್ನು ರೂಪಿಸಿದೆ. ಈ ನಿಮಯಗಳ ಪ್ರಕಾರ ವಿವಿಧ ಮಟ್ಟಗಳಲ್ಲಿ ಜಾಗೃತ ಸಮಿತಿಗಳನ್ನು ನೇಮಿಸಬಹುದಾಗಿದೆ ಮತ್ತು ಅಧಿನಿಯಮದ ಅಡಿಯಲ್ಲಿ ಬರುವ ಎಲ್ಲಾ ಯೋಜನೆಗಳ ಅನುಷ್ಠಾನದ ಮೇಲುಸ್ತುವಾರಿ ನೋಡಿಕೊಳ್ಳುವುದು; ಯಾವುದೇ ದುರಾಚಾರ ಅಥವಾ ದುರುಪಯೋಗದ ಅಥವಾ ಉಲ್ಲಂಘನೆಯ ಪ್ರಕರಣಗಳು ಕಂಡುಬಂದಲ್ಲಿ ಅದನ್ನು DGRO ಗಮನಕ್ಕೆ ತರುವುದು ಇಂಥ ಸಮಿತಿಗಳ ಕೆಲಸವಾಗಿದೆ. ಕರ್ನಾಟಕ ಜಾಗೃತ ಸಮಿತಿ ನಿಯಮಾವಳಿ ಉತ್ತರದಾಯಿತ್ವದ ಎಲ್ಲಾ ಅಂಶಗಳ ಕುರಿತು ಸವಿವರವಾಗಿ ಹೇಳುತ್ತವೆ. ರಾಜ್ಯ ಸರಕಾರದ ಅಧಿಕಾರದಲ್ಲಿ ನಾಲ್ಕು ಮಟ್ಟಗಳಲ್ಲಿ ಜಾಗೃತ ಸಮಿತಿಗಳನ್ನು ಸ್ಥಾಪಿಸಲಾಗುತ್ತದೆ: ರಾಜ್ಯ, ಜಿಲ್ಲೆ, ತಾಲೂಕು ಮತ್ತು ನ್ಯಾಯ ಬೆಲೆ ಅಂಗಡಿ ಮಟ್ಟ. ನಿಯಮಗಳು ಸಮಿತಿ ಸದಸ್ಯರ ನೇಮಕಾತಿ, ಷರತ್ತುಗಳು, ಕೆಲಸಕಾರ್ಯಗಳ ವರದಿಗಾರಿಕೆ ಮತ್ತು ನಿಗಾವಣೆಗಳ ಕುರಿತು ವಿವರಗಳನ್ನು ನೀಡುತ್ತವೆ.

**ಬರಪೀಡಿತ ಪ್ರದೇಶಗಳಲ್ಲಿ ಬೇಸಿಗೆ ರಜೆಯಲ್ಲಿ ಮಧ್ಯಾಹ್ನದ ಊಟ**

ಬರಪೀಡಿತ ಪ್ರದೇಶಗಳಲ್ಲಿ ಶಾಲೆಗಳ ಬೇಸಿಗೆ ರಜೆಯ ಸಮಯದಲ್ಲಿಯು ಮಧ್ಯಾಹ್ನದ ಊಟವನ್ನು ನೀಡಬೇಕು ಎಂದು ರಾಜ್ಯ ಸರಕಾರಗಳಿಗೆ ಸರ್ವೋಚ್ಚ ನ್ಯಾಯಾಲಯವು ಆದೇಶವನ್ನು ನೀಡಿದೆ. ಆಗಾಗ ಬರಕ್ಕೆ ಬಲಿಯಾಗುವ ರಾಜ್ಯವಾಗಿರುವುದರಿಂದ ಸದರಿ ಆದೇಶದ ಹಿನ್ನೆಲೆಯಲ್ಲಿ, ಕರ್ನಾಟಕ ಸರಕಾರವು 27 ಜಿಲ್ಲೆಗಳಲ್ಲಿ 137 ತಾಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಗುರುತಿಸಿದೆ; ಅಲ್ಲಿ ಮಧ್ಯಾಹ್ನದ ಊಟವನ್ನು ಮುಂದುವರಿಸಲಾಗುವುದು. ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ವೆಚ್ಚವನ್ನು ಹಂಚಿಕೊಂಡಿವೆ. 2015–2016ರಲ್ಲಿ[4] ಮುಂದುವರಿಸಿದ ಈ ಸೌಕರ್ಯದಿಂದಾಗಿ 13,04,576 ಮಕ್ಕಳು ಪ್ರಯೋಜನವನ್ನು ಪಡೆದಿದ್ದಾರೆ.

**ಮಧ್ಯಾಹ್ನದ ಊಟ ಯೋಜನೆಯ ಅಡಿಯಲ್ಲಿ ದೂರುಗಳು ಮತ್ತು ನಿವಾರಣೆಯ ಘಟಕಗಳು**

ಮಧ್ಯಾಹ್ನದ ಊಟದ ಯೋಜನೆಯನ್ನು ಚೆನ್ನಾಗಿ ಅನುಷ್ಠಾನಗೊಳಿಸುವುದು ಮತ್ತು ಮಕ್ಕಳಿಗೆ ಅಥವಾ ಪೋಷಕರಿಗೆ ಇದರ ಕುರಿತು ಏನಾದರೂ ದೂರುಗಳಿದ್ದಲ್ಲಿ ಅವುಗಳನ್ನು ವಿಚಾರಿಸಿ

ಪರಿಹರಿಸುವ ಸಲುವಾಗಿ ದೂರುಗಳು ಮತ್ತು ನಿವಾರಣೆಯ ಘಟಕಗಳನ್ನು ಸ್ಥಾಪಿಸಲಾಗಿದೆ. ಈ ಘಟಕಗಳನ್ನು **ಶುಲ್ಕ ರಹಿತ 1800–425–20007 ನಂಬರ್ ಮೂಲಕ ಸಂಪರ್ಕಿಸಬಹುದಾಗಿದೆ.** MDMS ಕುರಿತು ಯಾವುದೇ ಮಾಹಿತಿ ಬೇಕಿದ್ದರೂ ಈ ಸಂಖ್ಯೆಯ ದೂರವಾಣಿಯ ಮೂಲಕ ಪಡೆಯಬಹುದಾಗಿದೆ. ಈ

ಸಂಪರ್ಕವನ್ನು ಇತ್ತೀಚೆಗೆ ಸಜೀವಗೊಳಿಸಲಾಗಿದೆ ಮತ್ತು ಇದು ಪರಿಪೂರ್ಣವಾಗಿ ಕೆಲಸ ಮಾಡುತ್ತಿದೆ.

ಖಚಿತಪಡಿಸಿಕೊಳ್ಳಲು ಮತ್ತು ಸ್ವಾವಲಂಬನೆಯನ್ನು ಉತ್ತೇಜಿಸಲು ಕರ್ನಾಟಕ ಸರಕಾರವು ತನ್ನ ತೋಟಗಾರಿಕೆ ಇಲಾಖೆಯ ಮೂಲಕ ಶಾಲೆಗಳಲ್ಲಿ ಜೈವಿಕ ಸಾಂದ್ರ ಶಾಲಾ ತೋಟಗಳನ್ನು ಬೆಳೆಸಲು ಶಾಲೆಗಳಿಗೆ ನೆರವಾಗುತ್ತಿದೆ. 19,375ಕ್ಕೂ ಹೆಚ್ಚು ಶಾಲೆಗಳಿಗೆ ತಲಾ 3,500 ರೂಪಾಯಿ ಜೊತೆಗೆ ಬೀಜ ಮತ್ತು ಸಸಿಗಳನ್ನು ನೀಡಲಾಗಿದೆ. ಶಾಲೆಯ ಆವರಣದ ಒಳಗೆಯೇ ಬೆಳೆದ ತರಕಾರಿಯನ್ನು ಮಧ್ಯಾಹ್ನದ ಊಟದ ಅಡುಗೆಗೆ ಬಳಸಬಹುದು ಎಂದು ನಿರೀಕ್ಷಿಸಲಾಗಿದೆ. ಉದ್ದೇಶವೇನೋ ಮೆಚ್ಚಬಹುದಾದರೂ, ಮಧ್ಯಾಹ್ನದ ಊಟಕ್ಕೆ ತರಕಾರಿಯನ್ನು ಒದಗಿಸುವಷ್ಟು ದೊಡ್ಡ ಪ್ರಮಾಣದಲ್ಲಿ ತೋಟಗಾರಿಯನ್ನು ಶಾಲೆಯಲ್ಲಿಯೇ ಮಾಡುವುದು ಆಗದ ಕೆಲಸ.

### ಮಧ್ಯಾಹ್ನದ ಊಟದ ಯೋಜನೆಯಡಿಯಲ್ಲಿ ಸ್ವಯಂಚಾಲಿತ ಎಸ್‌ಎಮ್‌ಎಸ್ ಜಾಡು ಕಂಡುಹಿಡಿಯುವ ವ್ಯವಸ್ಥೆ

ಮಧ್ಯಾಹ್ನದ ಊಟದ ವಿತರಣೆಯಲ್ಲಿ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಮತ್ತು ನಿಗಾವಣೆಯನ್ನು ಹೆಚ್ಚು ಸಮರ್ಥಗೊಳಿಸಲು ನ್ಯಾಷನಲ್ ಇನ್ಫಾರ್ಮೇಷನ್ ಸೆಂಟರ್ ಎಸ್‌ಎಮ್‌ಎಸ್ ಟ್ರ್ಯಾಕಿಂಗ್ ವ್ಯವಸ್ಥೆಯೊಂದನ್ನು ಅಭಿವೃದ್ಧಿಪಡಿಸಿದೆ. ಈ ವ್ಯವಸ್ಥೆಯಲ್ಲಿ ಪ್ರತಿ ಶಾಲೆಯ ಪ್ರಿನ್ಸಿಪಾಲರು, ಮುಖ್ಯಶಿಕ್ಷಕರು ಮತ್ತು ಮಧ್ಯಾಹ್ನದ ಊಟದ ಯೋಜನೆಯ ಪ್ರಭಾರಿಗಳ ಫೋನ್ ನಂಬರುಗಳನ್ನು ಯೋಜನೆಯ ದತ್ತಾಂಶಸಂಗ್ರಹದಲ್ಲಿ ಸೇರಿಸಲಾಗುವುದು ಮತ್ತು ಅವರಿಗೆ ಊಟವು ತಲುಪಿದಾಗ ಹಾಗೆಂದು ಪ್ರತಿಯೊಬ್ಬರೂ ಎಸ್‌ಎಮ್‌ಎಸ್ ಕಳಿಸಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಊಟ ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ಇದು ಸಹಾಯಕವಾಗಿದೆ. ಇದಲ್ಲದೆ, ತರಗತಿ ಶಿಕ್ಷಕರು ಪ್ರತಿ ತರಗತಿಯಲ್ಲಿಯೂ ಊಟವನ್ನು ಎಷ್ಟು ಜನ ವಿದ್ಯಾರ್ಥಿಗಳು ಆಯಾ ದಿನ ಸ್ವೀಕರಿಸಿದರು ಎಂಬುದರ ದಾಖಲೆಯನ್ನು ಇಡಬೇಕಾಗುತ್ತದೆ. ಇಂಥ ಮಾಹಿತಿಯನ್ನು ಶಾಲೆಯ ಪ್ರಿನ್ಸಿಪಾಲರು ಅದೇ ದಿನ ಸಂಜೆ 4 ಗಂಟೆಯ ಒಳಗಾಗಿ ರಾಜ್ಯ ದತ್ತಾಂಶಸಂಗ್ರಹಕ್ಕೆ ಕಳಿಸಬೇಕಾಗುತ್ತದೆ.

ಕರ್ನಾಟಕವು NFSAನ್ನು ಮೊದಲಿಗೆ ಅನುಷ್ಠಾನದಗೊಳಿಸಿದ ರಾಜ್ಯಗಳಲ್ಲೊಂದಾದರೂ ಈವರೆಗೆ ರಾಜ್ಯವು ರಾಜ್ಯ ಆಹಾರ ಭದ್ರತಾ ನಿಯಮಾವಳಿಗಳನ್ನು ರೂಪಿಸಿಲ್ಲ. ರಾಜ್ಯ ಆಹಾರ ಭದ್ರತಾ ನಿಯಮಾವಳಿ ನಲ್ಲಿ ಕೊಡಮಾಡಿರುವ ಎಲ್ಲಾ ಅಧಿಕಾರಗಳನ್ನು ಕುರಿತು ಸಮಗ್ರವಾದ ಚೌಕಟ್ಟನ್ನು ಒದಗಿಸುತ್ತದೆ. ಕರ್ನಾಟಕ ಸರಕಾರವು ಫಲಾನುಭವಿಗಳನ್ನು ಗುರುತಿಸುವುದು, ರಾಜ್ಯ ಆಹಾರ ಆಯೋಗವನ್ನು ರಚಿಸುವುದು, ಜಾಗೃತಿ ಸಮಿತಿಗಳಿಗಾಗಿ ನಿಯಮಗಳನ್ನು ರೂಪಿಸುವುದು ಹೀಗೆ NFSAನ ಆದೇಶಗಳ ಪಾಲನೆಯ ನಿಟ್ಟಿನಲ್ಲಿ ಹಲವಾರು ಅಧಿಸೂಚನೆಗಳನ್ನು ಹೊರಡಿಸಿದೆ, ನಿಯಮಗಳನ್ನು ರೂಪಿಸಿದೆ. ಆದರೆ, ಎಲ್ಲವನ್ನೂ ಸಮಗ್ರವಾಗಿ ಒಳಗೊಳ್ಳುವ ರಾಜ್ಯ ಆಹಾರ ಭದ್ರತೆ ನಿಯಮಾವಳಿಯ ಹೊರತಾಗಿ ವಿವಿಧ ಇಲಾಖೆಗಳ ಅಧಿನಿಯಮಗಳು ಛಿದ್ರಗೊಂಡಹಾಗೆ ತೋರುತ್ತವೆ. ಮುಂದಿನ ವರ್ಷದಲ್ಲಿ ಕರ್ನಾಟಕ ಆಹಾರ ಭದ್ರತಾ ನಿಯಮಾವಳಿಗಳು ರೂಪುಗೊಂಡು ಜಾರಿಗೆ ಬರುತ್ತವೆ ಮತ್ತು NFSAನ ಎಲ್ಲಾ ನಾಲ್ಕು ಯೋಜನೆಗಳು ಪರಸ್ಪರ ಪೂರಕವಾಗಿ ಕೆಲಸ ಮಾಡುವಲ್ಲಿ ಯಶಸ್ವಿಯಾಗುತ್ತವೆ ಎಂದು ನಿರೀಕ್ಷಿಸಲಾಗಿದೆ. ದೇಶದ ಆಹಾರ ಭದ್ರತೆಯ ಅಗತ್ಯಗಳನ್ನು ಪೂರೈಸುವಲ್ಲಿ ಮುಂದಿನ ಹೆಜ್ಜೆಗಳನ್ನು ಇನ್ನಷ್ಟು ಕಸುವಿನಿಂದ ಇಡಲಾಗುವುದು ಎಂದು ಆಶಿಸೋಣ.

–ಝೂರಾ ಫಾತಿಮಾ ಕೈಸರ್

1. ಸರಕಾರಿ ಆದೇಶ ಸಂ:ಅನಸ 116ಡಿಆರ್‌ಎ 2015, ದಿನಾಂಕ 16 ಆಗಸ್ಟ್ 2016
2. ಸರಕಾರಿ ಆದೇಶ ಸಂ: ಎಫ್‌ಸಿಎಸ್ 52 ಡಿಆರ್‌ಎ 2012, ದಿನಾಂಕ 10 ಜೂನ್ 2016
3. ಎಫ್.ಸಿ.ಎಸ್.52 ಡಿಆರ್‌ಎ 2012(1) ದಿನಾಂಕ:18–16–2016
4. ಕರ್ನಾಟಕ ಸರಕಾರ, “ಮಧ್ಯಾಹ್ನದ ಊಟ – ಸಂಕ್ಷಿಪ್ತ ಟಿಪ್ಪಣಿ”, 20–10–2016ರಂದು ಪ್ರಕಟಿತ

# ಮೂಲಭೂತ ಸೌಕರ್ಯಗಳು ಮತ್ತು ಶಿಕ್ಷಣದ ಗುಣಮಟ್ಟ*

ಭಾರತೀಯ ಸಂವಿಧಾನ ಅನುಚ್ಛೇದ 21 ಎ ಮೂಲಕ ದೇಶದ 6ರಿಂದ 14 ವರ್ಷ ವಯಸ್ಸಿನ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಪ್ರತಿಪಾದಿಸುತ್ತದೆ. ಮಕ್ಕಳ ಈ ಮೂಲಭೂತ ಹಕ್ಕು ಅವರಿಗೆ ಲಭಿಸುವುದನ್ನು ಖಚಿತಪಡಿಸಿಕೊಳ್ಳಲು ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಅಧಿನಿಯಮವನ್ನು 2010 ಏಪ್ರಿಲ್ 1ರಂದು ಜಾರಿಗೆ ತರಲಾಯಿತು. ತನ್ನ ಶಾಲೆಗಳಲ್ಲಿ ಸಾಧಿಸಲು ಸಾಧ್ಯವಾದ ಮಟ್ಟದ ಅತ್ಯುತ್ಕೃಷ್ಟ ಗುಣಮಟ್ಟದ ಶಿಕ್ಷಣಕ್ಕೆ ಎಲ್ಲ ಮಕ್ಕಳಿಗೆ ನ್ಯಾಯೋಚಿತವಾದ ಸಮಾನಾವಕಾಶವನ್ನು ಒದಗಿಸುವಲ್ಲಿ ಸಾರ್ಜಜನಿಕ ಶಿಕ್ಷಣ ವ್ಯವಸ್ಥೆಯು ಅಗ್ರಗಾಮಿಯಾಗಿರಬೇಕು ಎಂದು ನಿರೀಕ್ಷಿಸಲಾಗುತ್ತದೆ. ಇದನ್ನು ಸಾಧಿಸಲು ರಾಜ್ಯ ಸರಕಾರಕ್ಕೆ ಇರುವ ಒಂದು ಮಾರ್ಗವೆಂದರೆ ಎಲ್ಲಾ ಸರಕಾರಿ ಶಾಲೆಗಳಲ್ಲಿ ಸುರಕ್ಷಿತವಾದ ಮತ್ತು ಸದೃಢವಾದ ಮೂಲಭೂತ ಸೌಕರ್ಯವನ್ನು ನೀಡುವುದು ಮತ್ತು ಎಲ್ಲ ಮಕ್ಕಳಿಗೂ ಅದು ಲಭ್ಯವಾಗುವಂತೆ ಮಾಡುವುದಾಗಿದೆ. ಸರಕಾರಿ ಶಾಲೆಗಳಲ್ಲಿ ನೀಡಲಾಗುವ ಶಿಕ್ಷಣದ ಗುಣಮಟ್ಟವನ್ನು ಸಂವರ್ಧಿಸುವ ಮೂಲಕ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಸಶಕ್ತಗೊಳಿಸುವಲ್ಲಿ ಮೂಲಭೂತ ಸೌಕರ್ಯಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಒಂದು ಕೋಣೆಯಲ್ಲಿ ಒಂದು ತರಗತಿ ಇರುವಂತೆ ಸಾಕಷ್ಟು ಸಂಖ್ಯೆಯಲ್ಲಿ ತರಗತಿ ಕೋಣೆಗಳು ಇದ್ದಲ್ಲಿ ಶಿಕ್ಷಕರು ಆಯಾ ತರಗತಿಗೆ ತಕ್ಕ ವಿದ್ಯಾರ್ಥಿಗಳ ಕಲಿಕೆಯ ಕಡೆಗೆ ಗಮನವನ್ನು ಹರಿಸಬಹುದು. ಒಂದೇ ಕೋಣೆಯಲ್ಲಿ ಎರಡು ಮೂರು ತರಗತಿಗಳನ್ನು ತುಂಬುವುದರಿಂದ ತರಗತಿಗಳು ಇಕ್ಕಟ್ಟಾಗುತ್ತವೆ ಮತ್ತು ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಏಕಚಿತ್ತದ ಗಮನ ಇರುವುದಿಲ್ಲ, ವಾತಾವರಣವೆಲ್ಲ ಗೊಂದಲಮಯವಾಗುತ್ತದೆ, ಪಾಠಗಳು ಸರಿಯಾಗಿ ನಡೆಯುವುದಿಲ್ಲ, ಇವೆಲ್ಲದರ ಒಟ್ಟಾರೆ ಪರಿಣಾಮವಾಗಿ ಶಿಕ್ಷಣದ ಗುಣಮಟ್ಟ ಕುಸಿಯುತ್ತದೆ. ಅದೇ ರೀತಿ, ವಿಜ್ಞಾನ ಮತ್ತು ಕಂಪ್ಯೂಟರ್ ಪ್ರಯೋಗಾಲಯಗಳು ಇರುವುದರಿಂದ ಮಕ್ಕಳು ಕಲಿತ ಪರಿಕಲ್ಪನೆಗಳನ್ನು ಕೈಯಾರೆ ಮಾಡಿ ನೋಡಿ ಮನನ ಮಾಡಿಕೊಳ್ಳುವ ಅವಕಾಶವನ್ನು ಒದಗಿಸುತ್ತವೆ. ಇದರಿಂದಾಗಿ ಪ್ರಯೋಗಾಲಯಗಳ ಲಭ್ಯತೆಯೂ ಬಹಳ ಮಹತ್ವದ್ದಾಗಿದೆ. ಪ್ರಯೋಗಗಳನ್ನು ಮಾಡಿ ಕಲಿಯಲು ಒಂದು ಅಂಗಣವನ್ನು ಒದಗಿಸುವುದರ ಜೊತೆಯಲ್ಲಿ ಮಕ್ಕಳಿಗೆ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಲು ಮತ್ತು ಆ ಮೂಲಕ ತಮ್ಮ ಜ್ಞಾನದ ಪರಿಧಿಗಳು ಹಿಗ್ಗಿಸಿಕೊಳ್ಳಲು ಸೂಕ್ತ ಅವಕಾಶವನ್ನು ಕಲ್ಪಿಸಬೇಕಾಗುತ್ತದೆ. ಈ ದಿಕ್ಕಿನಲ್ಲಿ ಮಕ್ಕಳಿಗೆ ಸುಸಜ್ಜಿತವಾದ ಗ್ರಂಥಾಲಯಗಳು ಸಹಾಯಕವಾಗುತ್ತವೆ. ಆದ್ದರಿಂದ ಶಾಲೆಗಳಲ್ಲಿ ದೇಶವಿದೇಶದ ಲೇಖಕರು ರಚಿಸಿದ ವಿವಿಧ ವಿಷಯಗಳ ಕುರಿತಾದ ಆಕರ ಗ್ರಂಥಗಳಿರುವ ವ್ಯವಸ್ಥಿತ ಗ್ರಂಥಾಲಯ ಕಲಿಯಬೇಕಾದ ಪರಿಕಲ್ಪನೆಗಳಿಗೆ ವಿಶಾಲವಾದ ದೃಷ್ಟಿಕೋನವನ್ನು ಒದಗಿಸುತ್ತದೆ. ಗ್ರಂಥಾಲಯದಲ್ಲಿರುವ ದಿನ ಪತ್ರಿಕೆಗಳು, ಸಾಪ್ತಾಹಿಕ, ಮಾಸಿಕಗಳು, ವಿಶೇಷ ವಿಷಯಗಳ ಪತ್ರಿಕೆಗಳು ಮಕ್ಕಳಿಗೆ ಜಗತ್ತಿನ ಆಗುಹೋಗುಗಳ ಕುರಿತು ಸಕಾಲಿಕವಾದ ಅರಿವನ್ನು ನೀಡುತ್ತವೆ. ಯುನಿಸೆಫ್, ಶಾಲೆಗಳಲ್ಲಿ ಇರುವ ಮೂಲಭೂತ ಸೌಕರ್ಯಗಳು ಮತ್ತು ಶಿಕ್ಷಣದ ಗುಣಮಟ್ಟ ಹೇಗೆ ಪರಸ್ಪರ ಪರಿಣಾಮವನ್ನು ಬೀರುತ್ತದೆ ಎಂಬುದನ್ನು 'ಡಿಫೈನಿಂಗ್ ಕ್ವಾಲಿಟಿ ಇನ್ ಎಜುಕೇಷನ್' ಎಂಬ ಲೇಖನದಲ್ಲಿ ವಿಶ್ಲೇಷಿಸಿದೆ. ಲೇಖನವು ಈ ಸಂಪರ್ಕದಲ್ಲಿ ಲಭ್ಯವಿದೆ.

(https://www.unicef.org/education/files/QualityEducation.PDF).

ಮೂಲಭೂತ ಸೌಕರ್ಯಗಳು ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುವುದಲ್ಲದೇ ಮಕ್ಕಳ ಒಟ್ಟಾರೆ ಯೋಗಕ್ಷೇಮದ ಮೇಲೆ ಪ್ರಭಾವವನ್ನು ಬೀರುತ್ತದೆ. ಬಳಸಲು ಲಭ್ಯವಿರುವ ನಿರ್ಮಲವಾದ ಶೌಚಾಲಯಗಳು, ಸ್ವಚ್ಛವಾದ ಪರಿಸರ, ಕುಡಿಯುವ ನೀರು, ತರಗತಿ ಕೋಣೆಯಲ್ಲಿ ಸಾಕಷ್ಟು ಗಾಳಿ ಬೆಳಕು ಇತ್ಯಾದಿಗಳು ಮಕ್ಕಳ ಆರೋಗ್ಯದ ಮೇಲೆ ನೇರವಾದ ಪ್ರಭಾವವನ್ನು ಹೊಂದಿವೆ. ಇದೇ ರೀತಿಯಲ್ಲಿ, ಶಾಲೆಗಳಲ್ಲಿನ ಸುರಕ್ಷಿತವಾದ ಪರಿಸರವು ಮಕ್ಕಳ ಯೋಗಕ್ಷೇಮದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಸಾರ್ವಜನಿಕರು, ಗೊತ್ತುಗುರಿಯಿಲ್ಲದ ಮತ್ತು ಕ್ರೂರ ಪ್ರಾಣಿಗಳಿಂದ ಅನಪೇಕ್ಷಿತ ಅಡಚಣೆಯಾಗದಂತೆ ತಡೆಯಲು ಶಾಲೆಯ ಸುತ್ತ ಆವರಣ ಗೋಡೆಯಿರುವುದು ಅತ್ಯಾವಶ್ಯಕ. ಅದೇ ರೀತಿ, ಇಂಥ ಹಸ್ತಕ್ಷೇಪದಿಂದ ಮತ್ತು ತೀವ್ರ ಹವಾಮಾನ ವೈಪರೀತ್ಯಗಳಿಂದ ರಕ್ಷಿಸಿ ಭದ್ರತೆಯ ಭಾವವನ್ನು ಮಕ್ಕಳಲ್ಲಿ ತುಂಬಲು ಸುರಕ್ಷಿತವಾದ ಕಟ್ಟಡ ಇರಬೇಕಾಗುತ್ತದೆ. ಇಂಥ ಸೌಕರ್ಯಗಳಲ್ಲಿ ಉಂಟಾಗುವ ಯಾವುದೇ ವ್ಯತ್ಯಯ, ಎಂದರೆ ಅನ್ನೈರ್ಮಲ್ಯವಾದ ಶೌಚಾಲಯಗಳು, ಕುಡಿಯುವ ನೀರು ಇಲ್ಲದೇ ಇರುವುದು, ಬಿದ್ದು ಹಾಳಾಗಿರುವ ಕಟ್ಟಡಗಳು, ಪಾಳುಮನೆಯಂಥ ತರಗತಿ ಕೋಣೆಗಳು, ಬಿದ್ದು ಹೋಗಿರುವ ಅಥವಾ ಇಲ್ಲದೇನೇ ಇರುವ ಕಾಂಪೌಂಡ್ ಗೋಡೆಗಳು ಇವು ಮಕ್ಕಳ ಶಾರೀರಿಕ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರುವುದಷ್ಟೆ ಅಲ್ಲ, ಮಾನಸಿಕ ಒತ್ತಡಕ್ಕೂ ಕಾರಣವಾಗುತ್ತವೆ. ಇವು ಮಕ್ಕಳ ಯೋಗಕ್ಷೇಮಕ್ಕೆ ಮಾರಕವಾಗಿವೆ. ಶಾಲೆಗಳಲ್ಲಿ ಸುಸಜ್ಜಿತವಾದ ಮೂಲಭೂತ ಸೌಕರ್ಯಗಳಿರುವುದು ಅಗತ್ಯವಷ್ಟೇ ಅಲ್ಲ, ಅನಿವಾರ್ಯವು ಹೌದು.

ಈ ಹಿನ್ನೆಲೆಯಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು

ಅಧಿನಿಯಮ, 2009 ಪರಿಚ್ಛೇದ 19ರಲ್ಲಿ ಶಾಲೆಗಳು ಅನುಸರಿಸಬೇಕಾದ ವಿವಿಧ ಷರತ್ತುಗಳು ಮತ್ತು ಮಾನಕಗಳನ್ನು ವಿಧಿಸುತ್ತದೆ; ಇವುಗಳಲ್ಲಿ ಶಾಲೆಗಳಲ್ಲಿ ಇರಬೇಕಾದ ಮೂಲಭೂತ ಸೌಕರ್ಯಗಳೂ ಒಳಗೊಂಡಿವೆ. ಕಾನೂನಿನ ಅಡಿಯಲ್ಲಿ ಕಠಿಣವಾದ ಮಾನಕಗಳನ್ನು ನಿಗದಿ ಮಾಡಿದ್ದರೂ ಸರಕಾರ ಅವುಗಳನ್ನು ಪಾಲಿಸದೇ ಇರುವುದು ದೊಡ್ಡ ಲೋಪವಾಗಿದೆ. ಇದರ ಪರಿಣಾಮವಾಗಿ ಸರಕಾರಿ ಶಾಲೆಗಳಲ್ಲಿ ಕನಿಷ್ಠ ಅಗತ್ಯಗಳಾದ ತರಗತಿ ಕೋಣೆಗಳು, ಸುರಕ್ಷಿತವಾದ ಸದೃಢ ಶಾಲಾ ಕಟ್ಟಡ, ಕಾಂಪೌಂಡು, ಪ್ರತ್ಯೇಕವಾದ ಬಳಸಲು ಯೋಗ್ಯವಾದ ಶೌಚಾಲಯಗಳು, ಕುಡಿಯುವ ನೀರು ಇತ್ಯಾದಿಯೂ ಇಲ್ಲದಂತಾಗಿದೆ. ವಿಶೇಷ ಅಗತ್ಯವಿರುವ ಮಕ್ಕಳಿಗೆ ಅವಶ್ಯಕವಾದ ಸೌಕರ್ಯಗಳಂತೂ ಇಲ್ಲವೇ ಇಲ್ಲ ಎನ್ನಬಹುದು. ಇದರಿಂದ ಅಂಥ ಮಕ್ಕಳು ಶಾಲೆಗಳಿಂದ ದೂರ ಉಳಿಯುತ್ತವೆ; ಇತರ ಮಕ್ಕಳಿಗೆ ಸಮನಾಗಿ ಶಿಕ್ಷಣವನ್ನು ಪಡೆಯುವ ಹಕ್ಕಿನಿಂದ ಅವರು ವಂಚಿತರಾಗುತ್ತಾರೆ. ಇದಲ್ಲದೆ, ಗ್ರಂಥಾಲಯಗಳು, ಕಂಪ್ಯೂಟರ್ ಮತ್ತು ವಿಜ್ಞಾನ ಪ್ರಯೋಗಾಲಯಗಳು, ಬೋಧನಾ–ಕಲಿಕೆ ಸಾಮಗ್ರಿ ಸಾಧನಗಳು, ಆಟದ ಉಪಕರಣಗಳು ಇತ್ಯಾದಿಗಳ ಕೊರತೆಯೂ ಈ ಶಾಲೆಗಳಲ್ಲಿ ದೊರೆಯುವ ಶಿಕ್ಷಣದ ಗುಣಮಟ್ಟವನ್ನು ತಗ್ಗಿಸುತ್ತವೆ.

ರಾಮನಗರ ತಾಲೂಕು/ಜಿಲ್ಲೆಯ ಬಿಡದಿ ಹೋಬಳಿಯ ಬನ್ನಿಕುಪ್ಪೆ(ಬಿ) ಪಂಚಾಯತಿಯ ವ್ಯಾಪ್ತಿಯಲ್ಲಿನ 14 ಶಾಲೆಗಳಲ್ಲಿ ಒಂದು ಕಿರು ಸಮೀಕ್ಷೆಯನ್ನು ನಡೆಸಲಾಯಿತು. ಶಾಲೆಗಳಲ್ಲಿ ಅಗತ್ಯವಾಗಿ ಇರಬೇಕಾದ ಮೂಲಭೂತ ಸೌಕರ್ಯಗಳ ಸ್ಥಿತಿಗಳು ಮತ್ತು ಸರಕಾರಿ ಶಾಲೆಗಳಲ್ಲಿ ಇವೆಯೇ ಇಲ್ಲವೇ ಎನ್ನುವುದನ್ನು ಗುರುತಿಸುವುದು ಈ ಸಮೀಕ್ಷೆಯ ಉದ್ದೇಶವಾಗಿತ್ತು. ಈ ಸಮೀಕ್ಷೆಯ ಫಲವಾಗಿ ಕಂಡಿದ್ದು ಏನೆಂದರೆ, ಈ 14 ಶಾಲೆಗಳಲ್ಲಿ ಯಾವುದರಲ್ಲಿಯೂ ಅಧ್ಯಾಪಕರ ಕೋಣೆ, ಆಟದ ಉಪಕರಣಗಳ ಕೋಣೆ ಮತ್ತು ಸಮರ್ಪಕವಾದ ಆಟದ ಉಪಕರಣಗಳು, ಕಂಪ್ಯೂಟರ್ ಮತ್ತು ವಿಜ್ಞಾನ ಪ್ರಯೋಗಾಲಯ, ಗ್ರಂಥಾಲಯ, ಬೋಧನಾ–ಕಲಿಕೆ ಸಾಮಗ್ರಿ ಯಾವುದೂ ಇರಲಿಲ್ಲ. ಮುಖ್ಯ ಶಿಕ್ಷಕರ ಕೋಣೆ, ಉಗ್ರಾಣ, ಅಡುಗೆ ಮನೆ, ಆಟದ ಮೈದಾನ, ವಿಶೇಷ ಅಗತ್ಯದ ಮಕ್ಕಳಿಗೆ ಬೇಕಾದ ಸೌಕರ್ಯಗಳು ಕೆಲವು ಶಾಲೆಗಳಲ್ಲಿ ಇದ್ದರೂ ಅವು ನಿರೀಕ್ಷಿತ ಗುಣಮಟ್ಟದ್ದಾಗಿರಲಿಲ್ಲ. ಎಲ್ಲ ಶಾಲೆಗಳಲ್ಲಿ ಹುಡುಗರು ಮತ್ತು ಹುಡುಗಿಯರಿಗಾಗಿ ಪ್ರತ್ಯೇಕ ಟಾಯ್ಲೆಟುಗಳು ಇದ್ದರೂ ಹೆಚ್ಚಿನವುಗಳಲ್ಲಿ ಕೇವಲ ಮೂತ್ರಾಲಯಗಳಿದ್ದವು, ಶೌಚಾಲಯಗಳು ಇರಲಿಲ್ಲ. ಅಲ್ಲದೇ, ಈ ಶೌಚಾಲಯಗಳಲ್ಲಿ ವಿಶೇಷ ಅಗತ್ಯಗಳುಳ್ಳ ಮಕ್ಕಳಿಗೆ ಬೇಕಾದ ಸೌಕರ್ಯಗಳು ಇರಲಿಲ್ಲ. ಸಾಮಾನ್ಯವಾಗಿ ಗಮನಕ್ಕೆ ಬಂದ ಅಂಶವೆಂದರೆ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪೀಠೋಪಕರಣಗಳು ಇವೆ, ಆದರೆ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪೀಠೋಪಕರಣಗಳು ಇಲ್ಲ. ಸುದೀರ್ಘ ಕಾಲ ನೆಲದ ಮೇಲೆ ಕುಳಿತುಕೊಳ್ಳುವುದರ ಪರಿಣಾಮ ಕಿರಿಯ ಪ್ರಾಥಮಿಕ ತರಗತಿಗಳ ಎಳೆಯ ಮಕ್ಕಳ ಮೇಲೆಯೂ ಆಗುತ್ತದೆ ಎಂಬ ಅಂಶವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಹೆಚ್ಚಿನ ಶಾಲೆಗಳಲ್ಲಿ ಕುಡಿಯುವ ನೀರಿನ ಸೌಕರ್ಯ ಇಲ್ಲ, ಮಕ್ಕಳು ಕುಡಿಯುವ ನೀರಿಗಾಗಿ ಗ್ರಾಮದ ನೀರಿನ ಟ್ಯಾಂಕನ್ನು ಅವಲಂಬಿಸುತ್ತಾರೆ. ನೋಡುವುದಕ್ಕೇನೋ ಹೆಚ್ಚಿನ ಶಾಲೆಗಳಲ್ಲಿ ವಿದ್ಯುತ್ ಸಂಪರ್ಕ ಇದೆ; ಆದರೆ ಅದು ಎಲ್ಲ ತರಗತಿ ಕೋಣೆಗಳಿಗೆ ವಿದ್ಯುತ್ತನ್ನು ಒದಗಿಸುವಂತಿಲ್ಲ. ಅದೇ ರೀತಿ, ಕೆಲವು ಕಡೆ ಕಂಪ್ಯೂಟರುಗಳು ಇವೆ, ಆದರೆ ಹೆಚ್ಚಿನವು ರಿಪೇರಿಯಾಗಿವೆ ಅಥವಾ ಅನೇಕ ನೆಪಗಳಿಂದ ಅವುಗಳನ್ನು ಮಕ್ಕಳಿಗೆ ಸಿಗದ ಹಾಗೆ ಇರಿಸಲಾಗಿದೆ. ಇದಕ್ಕೆ ಒಂದು ಕಾರಣ ಕಂಪ್ಯೂಟರ್ ಶಿಕ್ಷಕರು ಇಲ್ಲ ಎನ್ನುವುದಾಗಿದೆ. ನೋಡುವುದಕ್ಕೆ ಶಾಲೆಗಳ ಕಟ್ಟಡಗಳು ಸುಭದ್ರ ಮತ್ತು ಸುರಕ್ಷಿತ ಎಂಬಂತೆ ಕಂಡರೂ ಕೆಲವು ಕೋಣೆಗಳು ಶಿಥಿಲ ಸ್ಥಿತಿಯಲ್ಲಿರುವುದು ಕಂಡುಬಂತು. ಇನ್ನು ಆವರಣದ ವಿಚಾರ ಹೇಳುವುದಾದರೆ, ಹೆಚ್ಚಿನವು ಅರೆಬರೆ ಆವರಣವನ್ನು ಹೊಂದಿದ್ದವು; ಇನ್ನು ಕೆಲವು ಮುಳ್ಳುತಂತಿಯ ಆವರಣವನ್ನು ಹೊಂದಿದ್ದವು. ಇನ್ನು ಕೆಲವಕ್ಕಂತೂ ಆವರಣವೇ ಇರಲಿಲ್ಲ. ಈ ಕಿರುಸಮೀಕ್ಷೆಯ ಫಲವಾಗಿ ಕಂಡುಬರುವ ಸತ್ಯ ಎಂದರೆ ಸಾಮಾನ್ಯವಾಗಿ ಸರಕಾರಿ ಶಾಲೆಗಳು ಮೂಲಭೂತ ಸೌಕರ್ಯಗಳ ತೀವ್ರ ಕೊರತೆಯನ್ನು ಅನುಭವಿಸುತ್ತಿವೆ.

ಸರಕಾರಿ ಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳ ಕೊರತೆ ಮತ್ತು ಶಿಕ್ಷಣದ ಗುಣಮಟ್ಟದಲ್ಲಿ ಕುಸಿತ ಇವುಗಳಿಂದಾಗಿ ಪೋಷಕರು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಿಂದ ದೂರ ಸರಿಯುತ್ತಿದ್ದಾರೆ; ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳಿಸುತ್ತಿದ್ದಾರೆ; ಖಾಸಗಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ಸಿಗುತ್ತದೆ, ಇಂಥ ಶಾಲೆಗಳಲ್ಲಿ ಓದಿದರೆ ತಮ್ಮ ಮಕ್ಕಳ ಭವಿಷ್ಯ ಸುರಕ್ಷಿತ ಎಂದು ಭಾವಿಸುತ್ತಾರೆ. ಇದರ ಪರಿಣಾಮದಿಂದಾಗಿ ಶೈಕ್ಷಣಿಕ ವ್ಯವಸ್ಥೆಯಲ್ಲಿ ಖಾಸಗೀಕರಣ ಹೆಚ್ಚಾಗಿದೆ, ಶಿಕ್ಷಣವು ಒಂದು ಗ್ರಾಹಕವಸ್ತುವಾಗಿ ಪರಿಣಮಿಸಿದೆ, ಹೀಗಾಗಿ ಶಿಕ್ಷಣ ಎನ್ನುವುದು ಆಯ್ದ ಕೆಲವರಿಗೆ ಲಭ್ಯವಿರುವ ಭಾಗ್ಯವಾಗಿದೆ.

**–ಶ್ರುತಿ ರಾಮನ್ ಮತ್ತು ಕೃತಿಕಾ ಬಿ.ಎಸ್**



# ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (POCSO) ಅಧಿನಿಯಮ, 2012 ಅಡಿಯಲ್ಲಿ ಪರಿಹಾರ: ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ವಿಶೇಷ ನ್ಯಾಯಲಯಗಳ ಕುರಿತು ನಡೆಸಿದ ಅಧ್ಯಯನದ ಶೋಧಗಳು

## ಕಾನೂನು ಚೌಕಟ್ಟು

ಪೋಸ್ಕೋ ಅಧಿನಿಯುಮ 2012ರ ಕಲಮು 33(8)ರ ಅಡಿಯಲ್ಲಿವಿಶೇಷ ನ್ಯಾಯಾಲಯುವು ಅಪರಾಧಿಗೆ ಶಿಕ್ಷೆಯನ್ನು ವಿಧಿಸುವುದಲ್ಲದೇ ಮಗುವಿಗೆ ಉಂಟಾಗಿರಬಹುದಾದ ಯಾವುದೇ ದೈಹಿಕ ಮತ್ತು ಮಾನಸಿಕ ಆಘಾತಕ್ಕೆ ಪರಿಹಾರಕ್ಕಾಗಿ ಅಥವಾ ಮಗುವಿನ ತಕ್ಷಣದ ಪುನರ್ವಸತಿಗಾಗಿ ಪಾವತಿಸಬೇಕು ಎನ್ನುವ ಆದೇಶವನ್ನು ನೀಡಬಹುದಾಗಿದೆ. ನಿಯಮ 7 (1)ರ ಪ್ರಕಾರ ವಿಶೇಷ ನ್ಯಾಯಾಲಯವು ತಾನಾಗಿಯೇ ಅಥವಾ ಮೊದಲ ಮಾಹಿತಿ ವರದಿ ದಾಖಲಾದ ನಂತರ ಯಾವುದೇ ಹಂತದಲ್ಲಿ ಮಗುವಿನ ಪರವಾಗಿ ನೀಡಲಾಗುವ ಅರ್ಜಿಯುನ್ನು ಆಧರಿಸಿ ಮಧ್ಯಂತರ ಪರಿಹಾರವನ್ನು ಘೋಷಿಸಬಹುದಾಗಿದೆ ಮತ್ತು ಈ ಮಧ್ಯಂತರ ಪರಿಹಾರವನ್ನು ಅಂತಿಮ ಪರಿಹಾರದೊಂದಿಗೆ ಸರಿಪಡಿಸಲಾಗುವುದು. ನಿಯಮ 7(2)ರ ಪ್ರಕಾರ ಪರಿಹಾರ ಘೋಷಣೆಯು ಪ್ರಕರಣದ ಫಲಿತಾಂಶವನ್ನು ಅವಲಂಬಿಸಿರುವುದಿಲ್ಲ ಮತ್ತು ಮಗು ಅಪರಾಧದ ಪರಿಣಾಮವಾಗಿ ಯಾವುದೇ ದೈಹಿಕ ಹಾನಿ ಅಥವಾ ಗಾಯವನ್ನು ಅನುಭವಿಸಿದೆ ಎಂದು ನ್ಯಾಯಾಲಯದ ಅಭಿಪ್ರಾಯವಾಗಿದ್ದರೆ ಸ್ವಯಂಪ್ರೇರಣೆಯಿಂದ ಅಥವಾ ಪೀಡಿತರು ಅಥವಾ ಅವರ ಪರವಾಗಿ ಸಲ್ಲಿಸಲಾದ ಅರ್ಜಿಯನ್ನು ಅನುಸರಿಸಿ ಪರಿಹಾರವನ್ನು ಘೋಷಿಸಬಹುದಾಗಿದೆ. ಪರಿಹಾರವನ್ನು ಘೋಷಿಸುವಾಗ ಪರಿಗಣಿಸಬೇಕಾದ ಕಿರುಕುಳದ ಸ್ವಭಾವ, ಪೀಡಿತರು ಮಾಡಿದ ವೆಚ್ಚ ಮತ್ತು ಇತರ ಪೀಡಿತರ ಮೇಲೆ ಅಪರಾಧದಿಂದಾಗಿ ಉಂಟಾದ ಮಾನಸಿಕ ಮತ್ತು ದೈಹಿಕ ಆಘಾತ ಮುಂತಾದ ಅಂಶಗಳನ್ನು ನಿಯಮ 7 (3) ನಿಗದಿಪಡಿಸುತ್ತದೆ. ನಿಯಮಗಳ ಪ್ರಕಾರ ರಾಜ್ಯ ಸರಕಾರವು ಪೀಡಿತರ ಪರಿಹಾರ ನಿಧಿಯಿಂದ ಅಥವಾ ದಂಡ ಪ್ರಕ್ರಿಯಾ ಸಂಹಿತೆ ಕಲಮು 357 ಎ ಅಡಿಯಲ್ಲಿ ಪೀಡಿತರಿಗೆ ಪರಿಹಾರ ಅಥವಾ ಪುನರ್ವಸತಿ ಒದಗಿಸುವ ಸಲುವಾಗಿ ಸ್ಥಾಪಿಸಲಾದ ಇನ್ನಾವುದೇ ನಿಧಿಯಿಂದ ಪರಿಹಾರವನ್ನು ಆದೇಶ ಸ್ವೀಕರಿಸಿದ 30 ದಿನಗಳ ಒಳಗಾಗಿ ನೀಡಬೇಕು.

ದಂಡ ಪ್ರಕ್ರಿಯಾ ಸಂಹಿತೆ ಕಲಮು ಎಸ್.357 ಎ ಪ್ರಕಾರ ಅಪರಾಧದ ಕುರಿತು ವಿಚಾರಣೆ ನಡೆಯದಿದ್ದರೂ ಅಥವಾ ಅಪರಾಧಿ ಸಿಗದಿದ್ದರೂ ಅಥವಾ ಗುರುತಿಸಲಾಗದಿದ್ದರೂ ಪೀಡಿತರು ಪರಿಹಾರವನ್ನು ಪಡೆಯಲು ಅರ್ಹರಾಗಿರುತ್ತಾರೆ. 2012 ಫೆಬ್ರವರಿ 22ರ ಅಧಿಸೂಚನೆಯ ಮೂಲಕ ಕರ್ನಾಟಕ ಸರಕಾರವು ದಂಡ ಪ್ರಕ್ರಿಯಾ ಸಂಹಿತೆ ಕಲಮು 357(ಎ) ಅಡಿಯಲ್ಲಿ ತನಗೆ ಪ್ರದತ್ತವಾಗಿರುವ ಅಧಿಕಾರವನ್ನು ಆಧರಿಸಿ ಕರ್ನಾಟಕ ಪೀಡಿತರ ಪರಿಹಾರ ಯೋಜನೆ 2011ನ್ನು ರೂಪಿಸಿದೆ. ಅಪರಾಧ ನಡೆದ 48 ಗಂಟೆಗಳ ಒಳಗಾಗಿ ಅದನ್ನು ಪೊಲೀಸ್ ಸ್ಟೇಷನ್ನಿನ ಪ್ರಭಾರಿ ಅಧಿಕಾರಿಗೆ ದೂರನ್ನು ಸಲ್ಲಿಸಬೇಕು, ಆದರೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ (DLSA) ಅಪರಾಧವನ್ನು ವರದಿ ಮಾಡುವುದರಲ್ಲಿ ಆದ ವಿಳಂಬಕ್ಕೆ ಸಕಾರಣ ಇದೆ ಎಂದು ಮನದಟ್ಟಾದರೆ, ಸಕಾರಣವನ್ನು ಬರಹದಲ್ಲಿ ದಾಖಲಿಸಿ ವಿಳಂಬವನ್ನು ಕ್ಷಮಿಸಬಹುದಾಗಿದೆ. ಪೀಡಿತರು ಪರಿಹಾರಕ್ಕೆ ಅರ್ಹರಾಗಬೇಕು ಎಂದರೆ ಅವರು ಪ್ರಕರಣದ ತನಿಖೆ ಮತ್ತು ವಿಚಾರಣೆಯ ವೇಳೆಯಲ್ಲಿ ಪೀಡಿತರು ಪೊಲೀಸರು ಮತ್ತು ಪ್ರಾಸಿಕ್ಯೂಷನ್ ಜೊತೆ ಸಹಕರಿಸಬೇಕು ಎಂದೂ ಹೇಳಲಾಗಿದೆ. ವಿಚಾರಣಾ ನ್ಯಾಯಾಲಯದ ಶಿಫಾರಸ್ಸಿನ ಮೇಲೆ ಅಥವಾ ಪೀಡಿತರು ಸಲ್ಲಿಸಿದ ಅರ್ಜಿಯನ್ನು ಆಧರಿಸಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಹಕ್ಕುಕೋರಿಕೆಯ ವಿವರಗಳು ಮತ್ತು ಅದರ ಪ್ರಾಮಾಣಿಕತನದ ಕುರಿತು ವಿಚಾರಣೆ ನಡೆಸಿ ಖಚಿತಪಡಿಸಿಕೊಳ್ಳಬಹುದು. ವಿಚಾರಣೆಯ ನಂತರ DLSA ಎರಡು ತಿಂಗಳ ಒಳಗೆ ಪರಿಹಾರವನ್ನು ಘೋಷಿಸಬೇಕು. ಪರಿಹಾರಕ್ಕಾಗಿ ಅರ್ಜಿಯನ್ನು ಪೀಡಿತರು ಅಥವ ಅವರ ಅವಲಂಬಿತರು ಸಲ್ಲಿಸಬಹುದು ಮತ್ತು ಪೀಡಿತರ ಪರವಾಗಿ ನ್ಯಾಯವಾದಿಗಳು, ಸಂಸ್ಥೆಗಳು ಅಥವಾ ಎನ್‌ಜಿಓಗಳು ಸಲ್ಲಿಸುವ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

DLSA ನೀಡುವ ಪರಿಹಾರವಲ್ಲದೆ, ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ವಿರುದ್ಧ ದೌರ್ಜನ್ಯ ತಡೆಗಟ್ಟುವಿಕೆ ಅಧಿನಿಯಮ, 1989ರ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಮೈನರ್ ಹುಡುಗಿಯರಿಗೆ ಮತ್ತು ಲೈಂಗಿಕ ಆಕ್ರಮಣದ ಆಧಾರದ ಮೇಲೆ ಪರಿಹಾರವನ್ನು ನೀಡುವ ಅವಕಾಶವಿದೆ. ಇದಲ್ಲದೆ, ಜಿಲ್ಲಾ ಮಕ್ಕಳ ರಕ್ಷಣೆ ಘಟಕವು ಪೀಡಿತ ಮಗುವಿನ ತಕ್ಷಣದ ವೈದ್ಯಕೀಯ ಆರೈಕೆಗಾಗಿ ರೂ.10,000ನ್ನು ಕೊಡಮಾಡುತ್ತದೆ.

CCL-NLSIU 2016ರಲ್ಲಿ ರಾಜ್ಯದ ಮೂರು ಜಿಲ್ಲೆಗಳಲ್ಲಿ POCSO ಅಧಿನಿಯಮ 2012ರ ಅಡಿಯಲ್ಲಿ ವಿಶೇಷ ನ್ಯಾಯಾಲಯಗಳ ಕಾರ್ಯಾಚರಣೆ ಕುರಿತು ನಡೆಸಿದ ಅಧ್ಯಯನದ ಪ್ರಕಾರ, ವಿಶ್ಲೇಷಣೆಗೆ ಒಳಪಡಿಸಲಾದ 110 ಪ್ರಕರಣಗಳಲ್ಲಿ ಒಂದರಲ್ಲಿಯೂ ವಿಶೇಷ ನ್ಯಾಯಾಲಯವು ಮಧ್ಯಂತರ ಪರಿಹಾರವನ್ನು ಘೋಷಿಸಿರಲಿಲ್ಲ. ಎರಡು ಪ್ರಕರಣಗಳಲ್ಲಿ, ವಿಶೇಷ ನ್ಯಾಯಾಲಯವು ಅಪರಾಧಿಯಿಂದ ದಂಡದ



ಮೊತ್ತವನ್ನು ವಸೂಲಿ ಮಾಡಿದ್ದಾದರೆ ಅದನ್ನು ಪರಿಹಾರದ ರೂಪದಲ್ಲಿ ಪೀಡಿತರಿಗೆ ಕೊಡಬೇಕು ಎಂದು ನಿರ್ದೇಶಿಸಿತ್ತು. ನ್ಯಾಯಾಧೀಶರು ಪರಿಹಾರದ ಘೋಷಣೆಯನ್ನು ಮಗುವಿನ ಸಾಕ್ಷ್ಯದೊಂದಿಗೆ ತಳಕು ಹಾಕಿದ್ದಾರೆ– ಮಗು ಅಪಾದಿತನ ವಿರುದ್ಧ ಸಾಕ್ಷ್ಯವನ್ನು ನುಡಿಯದಿದ್ದರೆ ಪರಿಹಾರದ ಘೋಷಣೆಯನ್ನು ಪರಿಗಣಿಸಲಾಗಿಲ್ಲ.

POCSO ಅಧಿನಿಯಮದ ಅಡಿಯಲ್ಲಿ ಪೀಡಿತ ಮಕ್ಕಳು ಮತ್ತು ಅವರ ಕುಟುಂಬದವರಿಗೆ ಬೆಂಬಲ ಸೇವೆಯನ್ನು ಒದಗಿಸುವ ವ್ಯಕ್ತಿಗಳು ಹೇಳುವ ಪ್ರಕಾರ ಪೊಲೀಸರು ಮತ್ತು ಬೆಂಗಳೂರಿನಲ್ಲಿರುವ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪರಿಹಾರದ ಯೋಜನೆಗಳು ಇರುವ ಕುರಿತು ಮಾತಾಡುವುದೇ ಇಲ್ಲ; ಇದರಿಂದಾಗಿ ಕುಟುಂಬಗಳಿಗೆ ಅಧಿನಿಯಮದ ಅಡಿಯಲ್ಲಿ ಸಿಗಬಹುದಾದ ಪರಿಹಾರಗಳ ಕುರಿತು ಅರಿವು ಇರುವುದೇ ಇಲ್ಲ. ಇಂಥ ಅವಕಾಶಗಳು ಇವೆ ಎಂಬ ಮೂಲ ಅರಿವು ಇರುವ ಕುಟುಂಬಗಳಿಗೂ ಅದನ್ನು ಪಡೆಯುವುದು ಹೇಗೆ ಎಂಬುದು ತಿಳಿದಿಲ್ಲ. ಕೆಲವು ಕುಟುಂಬಗಳಿಗೆ ಪರಿಹಾರದ ನೀಡಿಕೆಯು ಕಾನೂನು ಕ್ರಮದ ಒಂದು ಭಾಗ ಎಂದು ತಿಳಿದಿರುತ್ತದೆ; ಪ್ರತಿ ಸಲ ಸೂಚನೆ ಬಂದಾಗಲೂ ಅವರು ಮಗುವನ್ನು DLSA ಬಳಿ ಕರೆದುಕೊಂಡು ಬರುತ್ತಾರೆ. ಪರಿಹಾರವನ್ನು ಪಡೆಯುವುದರ ಕುರಿತು ಇರುವ ಕ್ರಮಗಳು ಗೊತ್ತಿರುವುದಿಲ್ಲ, ಅಥವಾ ಗೊಂದಲವಿರುತ್ತದೆ; ಹೀಗಿದ್ದಾಗ ಹಲವು ಕುಟುಂಬಗಳು ಪರಿಹಾರಕ್ಕಾಗಿ ಹಾಕಿರುವ ಅರ್ಜಿಗಳನ್ನು ಅನುಸರಿಸುವುದಿಲ್ಲ. ತರಬೇತಿಯನ್ನು ಹೊಂದಿದ ಮತ್ತು ಸೂಕ್ಷ್ಮ ಸಂವೇದನೆಯ ಸಿಬ್ಬಂದಿ ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದು, ಹಣಕಾಸಿನ ಕೊರತೆ ಮತ್ತು ಔಪಚಾರಿಕ ಕ್ರಮಗಳ ಕುರಿತು ಲಾಭಾಕಾಂಕ್ಷಿಗಳಿಗೆ ಮಾರ್ಗದರ್ಶನ ನೀಡುವ ವ್ಯವಸ್ಥೆಯಿಲ್ಲದಿರುವುದು ಇವೆಲ್ಲವುಗಳಿಂದಾಗಿ ಪ್ರಕರಣಗಳ ಇತ್ಯರ್ಥದಲ್ಲಿ ವಿಳಂಬವನ್ನು ಉಂಟು ಮಾಡುತ್ತವೆ. ವಿಳಂಬ ಮತ್ತು ಕ್ರಮಗಳ ಕಠಿಣತೆಯನ್ನು ಕಡಿಮೆ ಮಾಡುವ ಮೂಲಕ ನ್ಯಾಯವನ್ನು ಪಡೆಯುವ ಮಗುವಿನ ಮತ್ತು ಕುಟುಂಬದ ಪಯಣವು ಹೆಚ್ಚು ಸುಗಮವಾಗುತ್ತದೆ. ಶಿಫಾರಸ್ಸುಗಳು.

## ಶಿಫಾರಸ್ಸುಗಳು

ರಾಜ್ಯ ಸರಕಾರವು ಬೆಂಬಲದ ಸೇವೆಗಳನ್ನು ಸ್ಥಾಪಿಸುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಬೆಂಬಲ ನೀಡುವ ವ್ಯಕ್ತಿಗಳಿಗೆ ಪರಿಹಾರವನ್ನು ಒದಗಿಸುವ ಕ್ರಮಗಳ ಕುರಿತು ಸೂಕ್ತ ತರಬೇತಿಯನ್ನು ನೀಡಬೇಕು. ಬೆಂಬಲ ವ್ಯಕ್ತಿಗಳು ಮತ್ತು ಸ್ವಯಂಸೇವಕರು ಮಗುವಿನ ಕುಟುಂಬಕ್ಕೆ ಪರಿಹಾರವನ್ನು ಕೋರಿ ಸಲ್ಲಿಸುವ ಅರ್ಜಿಯನ್ನು ತುಂಬಲು ನೆರವನ್ನು ನೀಡಬೇಕು. DLSAನೊಂದಿಗೆ ಕೆಲಸ ಮಾಡುವ ಕಾನೂನು ನೆರವು ವಕೀಲರು ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು ನೆರವಾಗಬಹುದು. ಇದರಿಂದಾಗಿ ಅಗತ್ಯವಿರುವಷ್ಟು ದಸ್ತಾವೇಜುಗಳ ಮತ್ತು ವಿವರಗಳ ಲಭ್ಯವಾಗುತ್ತವೆ, ಕುಟುಂಬಗಳು ಮತ್ತೆ ಮತ್ತೆ ಬರುವುದನ್ನು ತಪ್ಪುತ್ತದೆ.

ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ವಿಶೇಷ ನ್ಯಾಯಾಲಯದಲ್ಲಿ ಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸಬೇಕು; ಇದರಿಂದಾಗಿ ಮಗುವಿನ ಕುಟುಂಬವು ಸಕಾಲಕ್ಕೆ ಪರಿಹಾರವನ್ನು ಪಡೆಯಲು ಸಹಾಯಕವಾಗುತ್ತದೆ. ಉಚ್ಚ ನ್ಯಾಯಾಲಯವು ಮಧ್ಯಂತರ ಮತ್ತು ಅಂತಿಮ ಪರಿಹಾರದ ವಿಲೇವಾರಿಯ ಕುರಿತು ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಿ, ಆ ಮೂಲಕ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ಕುಟುಂಬದವರು ಅರ್ಜಿಯನ್ನು ನೀಡಲು ಕಾಯದೇ ತಾವೇ ತಮ್ಮ ಅಧಿಕಾರವನ್ನು ಬಳಸಿ ಪರಿಹಾರಕ್ಕಾಗಿ ಆದೇಶಿಸಲು ಅನುಕೂಲವಾಗುತ್ತದೆ. ತಾನು ತೆಗೆದುಕೊಂಡ ಕ್ರಮದ ಕುರಿತು DLSA ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸುವ ಕ್ರಮವನ್ನು ಜಾರಿಗೆ ತರುವ ಮೂಲಕ ಪರಿಹಾರದ ಶೀಘ್ರ ವಿಲೇವಾರಿಯನ್ನು ಖಚಿತಪಡಿಸಿಕೊಳ್ಳಬಹುದು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ಪರಿಹಾರಕ್ಕಾಗಿ ಸಲ್ಲಿಸುವ ಅರ್ಜಿಯ ಒಂದು ನಮೂನೆಯನ್ನು ಜಾರಿಗೆ ತಂದು ಎಲ್ಲಾ DLSA ಗಳಲ್ಲಿ ಲಭ್ಯವಿರುವಂತೆ ನೋಡಿಕೊಂಡರೆ ಅನುಸರಿಸುವ ಕ್ರಮಗಳಲ್ಲಿ ಸಮಾನತೆಯನ್ನು ತರಬಹುದು; ಅನಗತ್ಯವಾಗಿ ಆಗುವ ಅರ್ಜಿಯ ತಿರಸ್ಕಾರವನ್ನು ನಿವಾರಿಸಬಹುದು. ಕಾನೂನು ಸೇವಾ ಪ್ರಾಧಿಕಾರವು ಪರಿಹಾರ ನೀಡಿಕೆಯ ಅರ್ಜಿಯ ಪರಿಶೀಲನೆ ಮತ್ತು ಪರಿಹಾರದ ವಿಲೇವಾರಿಯ ಕುರಿತು ಈಗಿರುವ ಕ್ರಮಗಳನ್ನು ಸರಳೀಕರಿಸಿ ಮಾನಕ ಕಾರ್ಯಾಚರಣೆ ಕ್ರಮಗಳನ್ನು ರೂಪಿಸಬಹುದು. ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ಜನಜಾಗೃತಿ ಕಾರ್ಯಕ್ರಮಗಳನ್ನು ನಡೆಸಿ POCSO ಅಧಿನಿಮಯದ ಅಡಿಯಲ್ಲಿ ಕೊಡಮಾಡಿರುವ ಪರಿಹಾರ ಕುರಿತು ಸಮುದಾಯದಲ್ಲಿ ಜಾಗೃತಿಯನ್ನು ಮೂಡಿಸಬಹುದಾಗಿದೆ. ಇಂಥ ಕ್ರಮಗಳನ್ನು ಅನುಸರಿಸುವ ಮೂಲಕ ಅಧಿನಿಯಮದ ಅಡಿಯಲ್ಲಿ ಅವಕಾಶವಿದ್ದೂ ಕೇವಲ ಅದಕ್ಕೆ ತಕ್ಕ ಅನುಕೂಲತೆಗಳನ್ನು ಕಲ್ಪಿಸಲಾಗಿಲ್ಲ ಎನ್ನುವ ಕಾರಣಕ್ಕಾಗಿ ಪೀಡಿತ ಮಗುವಿಗೆ ಸಿಗಬೇಕಾದ ಲಾಭಗಳಿಂದ ವಂಚಿತವಾಗದಂತೆ ನೋಡಿಕೊಳ್ಳಬಹುದಾಗಿದೆ.

**- ಅಂಜಲಿ ಶಿವಾನಂದ್ ಮತ್ತು ಅನೀಶಾ ಜಾನಿ**

# ಆಹಾರದ ಹಕ್ಕು ತಂಡದ ಪ್ರಮುಖ ಕಾರ್ಯಚಟುವಟಿಕೆಗಳ ವರದಿ

### ಇಟಿಒ ಕಾನ್ಸೋರ್ಶಿಯಮ್ ಸ್ಟೀರಿಂಗ ಕಮಿಟಿಗೆ ಆಯ್ಕೆ ಡಾ.ನೀತು ಶರ್ಮಾ

ಆಹಾರದ ಹಕ್ಕು ತಂಡದ ಮುಖ್ಯಸ್ತರಾದ ಡಾ.ನೀತು ಶರ್ಮಾಅವರು ಎಕ್ಸ್‌ಟ್ರಾ ಟೆರಿಸ್ಟೋರಲ್ ಆಬ್ಲಿಗೇಷನ್ಸ್ (ಇಟಿಒ) ಕಾನ್ಸೋರ್ಶಿಯಮ್‌ನ ಸ್ಟಿರಿಂಗ್ ಸಮಿತಿಗೆ ಆಯ್ಕೆಯಾಗಿದ್ದಾರೆ. ಅವರು ಕಾನ್ಸೋರ್ಶಿಯಮ್‌ನ ಅಕ್ಯಾಡಮಿಕ್ ಸದಸ್ಯರು ಮತ್ತು ಗ್ಲೋಬಲ್ ಸೌತ್‌ಗೆ ಆಹಾರ ಭದ್ರತೆಯ ಫೋಕಲ್ ಪಾಯಿಂಟ್ ಆಗಿದ್ದಾರೆ. ಕಾನ್ಸೋರ್ಶಿಯಮ್ ಧ್ಯೇಯದೃಷ್ಟಿ ನಿರೂಪಣೆ ಕಾರ್ಯವನ್ನು ನಡೆಸಿದೆ ಮತ್ತು "ವರ್ಲ್ಡ್ ಆಫ್ ಟುಮಾರೊ" (ನಾಳೆಯ ಜಗತ್ತು) ಎಂದು ಹೆಸರಿಸಲಾದ ಧ್ಯೇಯದೃಷ್ಟಿ ದಸ್ತಾವೇಜಿನ ಹಂದರವನ್ನು ನಿರೂಪಿಸುವ ಉದ್ದೇಶದಿಂದ ಹಲವು ಆನ್‌ಲೈನ್ ಸಮಾಲೋಚನೆಗಳನ್ನು ನಡೆಸಲಾಗಿದೆ.

### ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ 2013 ಅಡಿಯಲ್ಲಿ ವಿವಿಧ ರಾಜ್ಯಗಳಲ್ಲಿ ನಿಯಮ ನಿರೂಪಣೆಯ ಮ್ಯಾಪಿಂಗ್

ಆಹಾರದ ಹಕ್ಕು ತಂಡವು ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ 2013 ಅಡಿಯಲ್ಲಿ ವಿವಿಧ ರಾಜ್ಯಗಳಲ್ಲಿ ನಡೆದಿರುವ ನಿಯಮ ನಿರೂಪಣೆಯ ಮ್ಯಾಪಿಂಗ್ ಕೈಗೊಂಡಿತು. ನೀನು ಸುರೇಶ್‌ಅವರು ದಕ್ಷಿಣದ ರಾಜ್ಯಗಳಾದ ಕೇರಳ, ತಮಿಳು ನಾಡು, ಆಂಧ್ರ ಪ್ರದೇಶ, ತೆಲಂಗಾಣ ಇವುಗಳಲ್ಲದೇ ಛತ್ತೀಸ್‌ಘಡ, ದೆಹಲಿ, ಪಂಜಾಬ್, ಹರ್ಯಾಣ ಮತ್ತು ಚಾಂಡಿಘಡಗಳಲ್ಲಿ ಅಧಿನಿಯಮದ ಅನುಷ್ಠಾನದ ಮ್ಯಾಪಿಂಗ್‌ನ್ನು ಮಾಡಿದರು. ನೀತೂ ಶರ್ಮಾಅವರು ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿ ನಡೆದ ಅನುಷ್ಠಾನದ ನಕಾಶೆಯನ್ನು ರೂಪಿಸದರು; ಜ಼ರಾ ಕೈಸರ್ ಇದನ್ನೇ ಗೋವಾ ಮತ್ತು ಕರ್ನಾಟಕದ ಸಂದರ್ಭದಲ್ಲಿ ಮಾಡಿದರು. ಗೋವಾವೊಂದನ್ನು ಹೊರತು ಪಡಿಸಿ ಎಲ್ಲ ರಾಜ್ಯಗಳ ಮ್ಯಾಪಿಂಗನ್ನು ಆಯಾ ರಾಜ್ಯಗಳಿಗೆ ಭೇಟಿ ನೀಡಿ, ಅಧಿನಿಯಮವನ್ನು ಅನುಷ್ಠಾನಗೊಳಿಸುತ್ತಿರುವ ಇಲಾಖೆಗಳಾದ ಸಾರ್ವಜನಿಕ ವಿತರಣೆ ವ್ಯವಸ್ಥೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಮತ್ತು MDMSಗಳ ಹಿರಿಯ ಅಧಿಕಾರಿಗಳ ಜೊತೆಯಲ್ಲಿ ಸಂದರ್ಶನಗಳನ್ನು ಮಾಡುವ ಮೂಲಕ ಕೈಗೊಳ್ಳಲಾಯಿತು. ರಾಜ್ಯವಾರು ವರದಿಗಳು ಸಿದ್ಧವಾಗಿವೆ; ಈಗ ಅವುಗಳ ತುಲನಾತ್ಮಕ ವಿಶ್ಲೇಷಣೆಯೂ ನಡೆದಿದೆ.

ಆಹಾರದ ಹಕ್ಕು ತಂಡವು ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮದ ಅನುಷ್ಠಾನದ ಕುರಿತು ಮಾಹಿತಿಯನ್ನು ಸಂಗ್ರಹಿಸಲು NLSIU ನ ವಿದ್ಯಾರ್ಥಿಗಳ ಸಹಭಾಗಿತ್ವವನ್ನೂ ಬಳಸಿಕೊಂಡಿತು. ರಾಷ್ಟ್ರೀಯ ಕಾನೂನು ಶಾಲೆಯ 16 ವಿದ್ಯಾರ್ಥಿಗಳು ವಿವಿಧ ರಾಜ್ಯಗಳಲ್ಲಿ ನಿಮಯ ನಿರೂಪಣೆಯ ಪ್ರಕ್ರಿಯೆಯ ಮ್ಯಾಪಿಂಗ್‌ನಲ್ಲಿ ಸಹಾಯ ನೀಡಿದರು.

### ರಾಜ್ಯ ಆಹಾರ ಭದ್ರತೆ ನಿಯಮಾವಳಿಯನ್ನು ರೂಪಿಸುವಲ್ಲಿ ಕೊಡುಗೆ

ಆಹಾರದ ಹಕ್ಕು ತಂಡವು ಕೇರಳ ಮತ್ತು ಒಡಿಶಾ ರಾಜ್ಯಗಳ ಆಹಾರ ಭದ್ರತೆ ಕರಡು ನಿಯಮಾವಳಿಗಳ ವಿಶ್ಲೇಷಣೆಯನ್ನು ಮಾಡಿತು ಮತ್ತು ಎರಡೂ ರಾಜ್ಯಗಳಲ್ಲಿನ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗಳಿಗೆ ಕೆಲವು ಶಿಫಾರಸ್ಸುಗಳನ್ನು ಸಲ್ಲಿಸಿತು. ನೀನು ಸುರೇಶ್‌ಅವರನ್ನು ಕೇರಳ ಆಹಾರ ಭದ್ರತೆ ನಿಯಮಾವಳಿಯ ಕರಡಿನ ತಮ್ಮ ಅಭಿಪ್ರಾಯವನ್ನು ಸೂಚಿಸಲು ಆಹ್ವಾನಿತರಾಗಿದ್ದರು.

### ಆಹಾರ ಭದ್ರತೆಯ ಕುರಿತು ಪರ್ಯಾಯ ಕಾನೂನು ಚೌಕಟ್ಟನ್ನು ಅಭಿವೃದ್ಧಿ ಪಡಿಸುವ ಕುರಿತು ಸಮಾಲೋಚನಾ ಸಭೆ

ಆಹಾರದ ಹಕ್ಕಿನ ಕಾನೂನು ಚೌಕಟ್ಟಿನ ಕುರಿತು ಪರ್ಯಾಯ ಸಂಕಥನಕ್ಕಾಗಿ ಶೋಧಿಸುವ ಸಲುವಾಗಿ ಸಮಾಲೋಚನ ಸಭೆಯನ್ನು 2016 ಅಕ್ಟೋಬರ್ 6ರಂದು ನಡೆಸಲಾಯಿತು. ಆಹಾರ ಭದ್ರತೆಯ ವಿವಿಧ ಅಂಶಗಳ ಕುರಿತ ತಜ್ಞರು ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದರು. ECCD Allianceನ ದೇವಿಕಾ ಸಿಂಗ್ ಮತ್ತು ಸುದೇಶಾ ಸೇನ್‌ಗುಪ್ತಾ, TNFORCES ನ ಪ್ರೊ. ಷಣ್ಮುಗ ವೇಲಾಯುಧಮ್, NLSIUನ ಪ್ರೊ.ಎಂ.ಕೆ.ರಮೇಶ್, ಪ್ರೊ.ಬಾಬು ಮ್ಯಾಥ್ಯು, ಕೃಷಿ ವಿಜ್ಞಾನಿ ಡಾ.ರಘು ಸಿ, NIPCCDನ ಎಂ.ಎಸ್.ತಾರಾ ಮತ್ತು ಶಾಲಿನಿ ಅಯ್ಯಂಗಾರ್ ಚರ್ಚೆಗಳಲ್ಲಿ ಭಾಗವಹಿಸಿದರು.

### ECCD ಹಕ್ಕಿಗಾಗಿ ಕಾನೂನು ಚೌಕಟ್ಟಿನ ರಚನೆ

ಡಾ.ನೀನು ಶರ್ಮಾಅವರು ನವಬಾಲ್ಯದ ಆರೈಕೆ ಮತ್ತು ಬೆಳವಣಿಗೆ ಕುರಿತು ಕಾನೂನು ಚೌಕಟ್ಟನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ECCD Alliance ರಚಿಸಿದ ಮೂಲತಂಡದ ಭಾಗವಾಗಿದ್ದಾರೆ. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಅಂಶಗಳನ್ನು ಗುರುತಿಸುವ ಅಗತ್ಯವನ್ನು ಪರಿಗಣಿಸಿ ECCD Alliance ಕೇರಳದ ಪ್ರಕರಣ ಅಧ್ಯಯನವನ್ನು ದಾಖಲಿಸುವ ನಿರ್ಧಾರವನ್ನು ತೆಗೆದುಕೊಂಡಿತು. ನೀತು ಶರ್ಮಾ ಕಣ್ಣೂರಿನಲ್ಲಿ 2016 ಮಾರ್ಚ್ 19ರಿಂದ ಏಪ್ರಿಲ್ 2ರ ವರೆಗೆ ನಡೆದ ಕ್ಷೇತ್ರ ಸಮೀಕ್ಷೆಯ ಭಾಗವಾಗಿದ್ದರು. ಕಣ್ಣೂರಿನಲ್ಲಿ ನಡೆದ ವಿಕೇಂದ್ರೀಕರಣ ಮತ್ತು ಅದು



## ಇಟಿಒ ಕಾನ್ಸೋರ್ಶಿಯಮ್ ಸ್ಟೀರಿಂಗ ಕಮಿಟಿಗೆ ಆಯ್ಕೆ ಡಾ.ನೀತು ಶರ್ಮಾ

ಆಹಾರದ ಹಕ್ಕು ತಂಡದ ಮುಖ್ಯಸ್ಥರಾದ ಡಾ.ನೀತು ಶರ್ಮಾಅವರು ಎಕ್ಸ್‌ಟ್ರಾ ಟೆರಿಸ್ಟೋರಲ್ ಆಬ್ಲಿಗೇಷನ್ಸ್ (ಇಟಿಒ) ಕಾನ್ಸೋರ್ಶಿಯಮ್‌ನ ಸ್ಟೀರಿಂಗ್ ಸಮಿತಿಗೆ ಆಯ್ಕೆಯಾಗಿದ್ದಾರೆ. ಅವರು ಕಾನ್ಸೋರ್ಶಿಯಮ್‌ನ ಅಕ್ಯಾಡಮಿಕ್ ಸದಸ್ಯರು ಮತ್ತು ಗ್ಲೋಬಲ್ ಸೌತ್‌ಗೆ ಆಹಾರ ಭದ್ರತೆಯ ಫೋಕಲ್ ಪಾಯಿಂಟ್ ಆಗಿದ್ದಾರೆ. ಕಾನ್ಸೋರ್ಶಿಯಮ್ ಧ್ಯೇಯದೃಷ್ಟಿ ನಿರೂಪಣೆ ಕಾರ್ಯವನ್ನು ನಡೆಸಿದೆ ಮತ್ತು "ವರ್ಲ್ಡ್ ಆಫ್ ಟುಮಾರೊ" (ನಾಳೆಯ ಜಗತ್ತು) ಎಂದು ಹೆಸರಿಸಲಾದ ಧ್ಯೇಯದೃಷ್ಟಿ ದಸ್ತಾವೇಜಿನ ಹಂದರವನ್ನು ನಿರೂಪಿಸುವ ಉದ್ದೇಶದಿಂದ ಹಲವು ಆನ್‌ಲೈನ್ ಸಮಾಲೋಚನೆಗಳನ್ನು ನಡೆಸಲಾಗಿದೆ.

## ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ 2013 ಅಡಿಯಲ್ಲಿ ವಿವಿಧ ರಾಜ್ಯಗಳಲ್ಲಿ ನಿಯಮ ನಿರೂಪಣೆಯ ಮ್ಯಾಪಿಂಗ್

ಆಹಾರದ ಹಕ್ಕು ತಂಡವು ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ 2013 ಅಡಿಯಲ್ಲಿ ವಿವಿಧ ರಾಜ್ಯಗಳಲ್ಲಿ ನಡೆದಿರುವ ನಿಯಮ ನಿರೂಪಣೆಯ ಮ್ಯಾಪಿಂಗ್ ಕೈಗೊಂಡಿತು. ನೀನು ಸುರೇಶ್‌ಅವರು ದಕ್ಷಿಣದ ರಾಜ್ಯಗಳಾದ ಕೇರಳ, ತಮಿಳು ನಾಡು, ಆಂಧ್ರ ಪ್ರದೇಶ, ತೆಲಂಗಾಣ ಇವುಗಳಲ್ಲದೇ ಛತ್ತೀಸ್‌ಘಡ, ದೆಹಲಿ, ಪಂಜಾಬ್, ಹರ್ಯಾಣ ಮತ್ತು ಚಾಂಡಿಘಡಗಳಲ್ಲಿ ಅಧಿನಿಯಮದ ಅನುಷ್ಠಾನದ ಮ್ಯಾಪಿಂಗ್‌ನ್ನು ಮಾಡಿದರು. ನೀತೂ ಶರ್ಮಾಅವರು ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿ ನಡೆದ ಅನುಷ್ಠಾನದ ನಕಾಶೆಯನ್ನು ರೂಪಿಸದರು; ಝರಾ ಕೈಸರ್ ಇದನ್ನೇ ಗೋವಾ ಮತ್ತು ಕರ್ನಾಟಕದ ಸಂದರ್ಭದಲ್ಲಿ ಮಾಡಿದರು. ಗೋವಾವೊಂದನ್ನು ಹೊರತು ಪಡಿಸಿ ಎಲ್ಲ ರಾಜ್ಯಗಳ ಮ್ಯಾಪಿಂಗನ್ನು ಆಯಾ ರಾಜ್ಯಗಳಿಗೆ ಭೇಟಿ ನೀಡಿ, ಅಧಿನಿಯಮವನ್ನು ಅನುಷ್ಠಾನಗೊಳಿಸುತ್ತಿರುವ ಇಲಾಖೆಗಳಾದ ಸಾರ್ವಜನಿಕ ವಿತರಣೆ ವ್ಯವಸ್ಥೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಮತ್ತು MDMSಗಳ ಹಿರಿಯ ಅಧಿಕಾರಿಗಳ ಜೊತೆಯಲ್ಲಿ ಸಂದರ್ಶನಗಳನ್ನು ಮಾಡುವ ಮೂಲಕ ಕೈಗೊಳ್ಳಲಾಯಿತು. ರಾಜ್ಯವಾರು ವರದಿಗಳು ಸಿದ್ಧವಾಗಿವೆ; ಈಗ ಅವುಗಳ ತುಲನಾತ್ಮಕ ವಿಶ್ಲೇಷಣೆಯೂ ನಡೆದಿದೆ.

ಆಹಾರದ ಹಕ್ಕು ತಂಡವು ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮದ ಅನುಷ್ಠಾನದ ಕುರಿತು ಮಾಹಿತಿಯನ್ನು ಸಂಗ್ರಹಿಸಲು NLSIU ನ ವಿದ್ಯಾರ್ಥಿಗಳ ಸಹಭಾಗಿತ್ವವನ್ನೂ ಬಳಸಿಕೊಂಡಿತು. ರಾಷ್ಟ್ರೀಯ ಕಾನೂನು ಶಾಲೆಯ 16 ವಿದ್ಯಾರ್ಥಿಗಳು ವಿವಿಧ ರಾಜ್ಯಗಳಲ್ಲಿ ನಿಯಮ ನಿರೂಪಣೆಯ ಪ್ರಕ್ರಿಯೆಯ ಮ್ಯಾಪಿಂಗ್‌ನಲ್ಲಿ ಸಹಾಯ ನೀಡಿದರು.

## ರಾಜ್ಯ ಆಹಾರ ಭದ್ರತೆ ನಿಯಮಾವಳಿಯನ್ನು ರೂಪಿಸುವಲ್ಲಿ ಕೊಡುಗೆ



ಆಹಾರದ ಹಕ್ಕು ತಂಡವು ಕೇರಳ ಮತ್ತು ಒಡಿಶಾ ರಾಜ್ಯಗಳ ಆಹಾರ ಭದ್ರತೆ ಕರಡು ನಿಯಮಾವಳಿಗಳ ವಿಶ್ಲೇಷಣೆಯನ್ನು ಮಾಡಿತು ಮತ್ತು ಎರಡೂ ರಾಜ್ಯಗಳಲ್ಲಿನ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗಳಿಗೆ ಕೆಲವು ಶಿಫಾರಸ್ಸುಗಳನ್ನು ಸಲ್ಲಿಸಿತು. ನೀನು ಸುರೇಶ್‌ಅವರನ್ನು ಕೇರಳ ಆಹಾರ ಭದ್ರತೆ ನಿಯಮಾವಳಿಯ ಕರಡಿನ ತಮ್ಮ ಅಭಿಪ್ರಾಯವನ್ನು ಸೂಚಿಸಲು ಆಹ್ವಾನಿತರಾಗಿದ್ದರು.

## ಆಹಾರ ಭದ್ರತೆಯ ಕುರಿತು ಪರ್ಯಾಯ ಕಾನೂನು ಚೌಕಟ್ಟನ್ನು ಅಭಿವೃದ್ಧಿ ಪಡಿಸುವ ಕುರಿತು ಸಮಾಲೋಚನಾ ಸಭೆ

ಆಹಾರದ ಹಕ್ಕಿನ ಕಾನೂನು ಚೌಕಟ್ಟಿನ ಕುರಿತು ಪರ್ಯಾಯ ಸಂಕಥನಕ್ಕಾಗಿ ಶೋಧಿಸುವ ಸಲುವಾಗಿ ಸಮಾಲೋಚನ ಸಭೆಯನ್ನು 2016 ಅಕ್ಟೋಬರ್ 6ರಂದು ನಡೆಸಲಾಯಿತು. ಆಹಾರ ಭದ್ರತೆಯ ವಿವಿಧ ಅಂಶಗಳ ಕುರಿತ ತಜ್ಞರು ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದರು. ECCD Allianceನ ದೇವಿಕಾ ಸಿಂಗ್ ಮತ್ತು ಸುದೇಶಾ ಸೇನ್‌ಗುಪ್ತಾ, TNFORCES ನ ಪ್ರೊ. ಷಣ್ಮುಗ ವೇಲಾಯುಧಮ್, NLSIUನ ಪ್ರೊ.ಎಂ.ಕೆ.ರಮೇಶ್, ಪ್ರೊ.ಬಾಬು ಮ್ಯಾಥ್ಯು, ಕೃಷಿ ವಿಜ್ಞಾನಿ ಡಾ.ರಘು ಸಿ, NIPCCDನ ಎಂ.ಎಸ್.ತಾರಾ ಮತ್ತು ಶಾಲಿನಿ ಅಯ್ಯಂಗಾರ್ ಚರ್ಚೆಗಳಲ್ಲಿ ಭಾಗವಹಿಸಿದರು.

## ECCD ಹಕ್ಕಿಗಾಗಿ ಕಾನೂನು ಚೌಕಟ್ಟಿನ ರಚನೆ

ಡಾ.ನೀನು ಶರ್ಮಾಅವರು ನವಬಾಲ್ಯದ ಆರೈಕೆ ಮತ್ತು ಬೆಳವಣಿಗೆ ಕುರಿತು ಕಾನೂನು ಚೌಕಟ್ಟನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ECCD Alliance ರಚಿಸಿದ ಮೂಲತಂಡದ ಭಾಗವಾಗಿದ್ದಾರೆ. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಅಂಶಗಳನ್ನು ಗುರುತಿಸುವ ಅಗತ್ಯವನ್ನು ಪರಿಗಣಿಸಿ ECCD Alliance ಕೇರಳದ ಪ್ರಕರಣ ಅಧ್ಯಯನವನ್ನು ದಾಖಲಿಸುವ ನಿರ್ಧಾರವನ್ನು ತೆಗೆದುಕೊಂಡಿತು. ನೀತು ಶರ್ಮಾ ಕಣ್ಣೂರಿನಲ್ಲಿ 2016 ಮಾರ್ಚ್ 19ರಂದ ಏಪ್ರಿಲ್ 2ರ ವರೆಗೆ ನಡೆದ ಕ್ಷೇತ್ರ ಸಮೀಕ್ಷೆಯ ಭಾಗವಾಗಿದ್ದರು. ಕಣ್ಣೂರಿನಲ್ಲಿ ನಡೆದ ವಿಕೇಂದ್ರೀಕರಣ ಮತ್ತು ಅದು ICDS ಮೇಲೆ ಬೀರಿದ ಪ್ರಭಾವವನ್ನು ದಾಖಲಿಸುವುದು ಅಧ್ಯಯನದ ಉದ್ದೇಶವಾಗಿತ್ತು. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದಿಂದಾಗಿ ವ್ಯವಸ್ಥೆಯು ಹೆಚ್ಚು ಸಹಭಾಗಿಯಾಗಿದೆ ಮತ್ತು ಪಾರದರ್ಶಕವಾಗಿದೆ; ಇದರಿಂದಾಗಿ ICDS ಅನುಷ್ಠಾನದ ಕಾರ್ಯಸಾಮರ್ಥ್ಯವು ಗಣನೀಯವಾಗಿ ಹೆಚ್ಚಾಗಿದೆ ಎಂದು ಸಮೀಕ್ಷೆಯು ತೋರಿಸಿಕೊಟ್ಟಿತು. ವಿವಿಧ ರಾಜ್ಯಗಳಲ್ಲಿ

ಅನುಷ್ಠಾನಗೊಳಿಸಲು ಆಧಾರ ಘಟಕಗಳನ್ನು ಗುರುತಿಸುವ ಸಲುವಾಗಿ ಚರ್ಚೆಗಳು ನಡೆದಿವೆ.

### ಆಹಾರ ಭದ್ರತೆ ಮತ್ತು ಅಪೌಷ್ಟಿಕತೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಕಾನೂನು ಮತ್ತು ಸಾರ್ವಜನಿಕ ಕಾರ್ಯನೀತಿ ವ್ಯಾಸಂಗಗಳ ಪಠ್ಯದ ಮುಖ್ಯವಾಹಿತಿಯಲ್ಲಿ ಸೇರಿಸುವುದು

ಡಾ.ನೀತು ಶರ್ಮಾ ಮತ್ತು ನೀನು ಸುರೇಶ್‌ಅವರು MPP ವಿದ್ಯಾರ್ಥಿಗಳು ವ್ಯಾಸಂಗ ಮಾಡುವ ಅಂತರ ರಾಷ್ಟೀಯ ಸಮಾಜ ಕಲ್ಯಾಣ ಕೋರ್ಸಿನ ಭಾಗವಾಗಿ ತುಲನಾತ್ಮಕ ಆಹಾರ ಭದ್ರತೆ ಕಾರ್ಯನೀತಿಗಳ ಮೇಲೆ 14 ಗಂಟೆಗಳ ಮಾಡ್ಯೂಲನ್ನು ತಯಾರಿಸಿ ಕೊಟ್ಟರು. ಇದಲ್ಲದೆ, ಡಾ.ನೀತು ಶರ್ಮಾಅವರು BA LLB ವಿದ್ಯಾರ್ಥಿಗಳಿಗಾಗಿ ಕಾನೂನು, ಬಡತನ ಮತ್ತು ಅಭಿವೃದ್ಧಿ ಕೋರ್ಸಿನ ಅಂಗವಾಗಿ ಆಹಾರ ಭದ್ರತೆ ಮತ್ತು ಕಾನೂನು ವಿಷಯದ ಮೇಲೆ ಎರಡು ಗಂಟೆಯ ಗೋಷ್ಠಿಯನ್ನು ನಡೆಸಿದರು.

### ಕರ್ನಾಟಕ ಮಕ್ಕಳ ಹಕ್ಕುಗಳ ವೀಕ್ಷಣಾಲಯದ (KCRO)



ಎ.ಆರ್.ಸಿಂಧು, *AIFAWH* ಪ್ರಧಾನ ಕಾರ್ಯದರ್ಶಿ ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರ ಸಮೂಹವನ್ನು ಉದ್ದೇಶಿಸಿ ಮಾತಾಡಿದರು

### ಕಾರ್ಯಜಾಲ/ಎನ್‌ಜಿಒ ಪ್ರತಿನಿಧಿಗಳಿಗಾಗಿ ಗೋಷ್ಠಿ

ಡಾ.ನೀತು ಶರ್ಮಾ ಆಹಾರ ಭದ್ರತೆ ಮತ್ತು ಕಾನೂನು, ಭಾರತದಲ್ಲಿ ಅದರ ವಿಕಾಸ ಮತ್ತು ಬದುಕುಳಿಯುವ ಮತ್ತು ಅಭಿವೃದ್ಧಿಹೊಂದುವ ಮಕ್ಕಳ ಹಕ್ಕುಗಳ ಹಿನ್ನೆಲೆಯಲ್ಲಿ ಅವರ ಆಹಾರದ ಹಕ್ಕಿನ ಮೇಲೆ ಅದು ಬೀರುವ ಪ್ರಭಾವ ಇತ್ಯಾದಿಗಳ ಕುರಿತು ಚರ್ಚಿಸಿದರು. ಇದು, 2016 ಜೂನ್ 6 ಮತ್ತು 7ರಂದು ಕರ್ನಾಟಕ ಮಕ್ಕಳ ಹಕ್ಕುಗಳ ವೀಕ್ಷಣಾಯಲವು(KCRO) ಬೆಂಗಳೂರಿನ ಎಸ್‌ಸಿಎಮ್ ಹೌಸ್‌ನಲ್ಲಿ ನಡೆಸಿದ 'ನಮ್ಮ ಮಕ್ಕಳಲ್ಲಿ ಬಿಕ್ಕಟ್ಟು : ಬದುಕುಳಿಯುವುದು, ರಕ್ಷಣೆ ಮತ್ತು ಅಭಿವೃದ್ಧಿ, ಇಂದು ಮತ್ತು ನಾಳೆ' ಕುರಿತಾದ ಸಮಾಲೋಚನೆಯ ಒಂದು ಭಾಗವಾಗಿತ್ತು. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಸದಸ್ಯರಾದ ವಾಸುದೇವ ಶರ್ಮಾಅವರು ಚರ್ಚೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸಮಾಲೋಚನೆಯಲ್ಲಿ ನಡೆದ ಚರ್ಚೆಯಲ್ಲಿ ಸದಸ್ಯರು ಮಕ್ಕಳಿಗಾಗಿ ರಾಜ್ಯ ಕ್ರಿಯಾಯೋಜನೆಗಾಗಿ ತಮ್ಮ ವಿಚಾರಧಾರೆಗಳನ್ನು ಹಂಚಿಕೊಳ್ಳಲು KCRO ನ ಕಾರ್ಯಜಾಲದ ಸದಸ್ಯರನ್ನು ಉತ್ತೇಜಿಸಲಾಯಿತು.

### ರಾಷ್ಟೀಯ ಮಾನವ ಹಕ್ಕುಗಳ ಆಯೋಗಕ್ಕೆ ಸಲ್ಲಿಕೆ

ಡಾ.ನೀತು ಶರ್ಮಾಅವರು ರಾಷ್ಟೀಯ ಮಾನವ ಹಕ್ಕುಗಳ ಆಯೋಗವು ಆಯೋಜಿಸಿದ್ದ ದಕ್ಷಿಣ ಪ್ರಾದೇಶಿಕ ಸಾಮಾಲೋಚನೆಯಲ್ಲಿ NFSA ಮತ್ತು ಅದರ ಅನುಷ್ಠಾನ ಕುರಿತಾದ ವಿಷಯಗಳ ಕುರಿತು ವಿಷಯ ಮಂಡನೆ ಮಾಡಿದರು. ತಂಡವು ತಯಾರಿಸಿದ, ಅಧಿನಿಯಮದ ಅನುಷ್ಠಾನದಲ್ಲಿ ತೋರಲಾಗುತ್ತಿರುವ ಅತ್ಯಂತ ನೀರಸ ಧೋರಣೆಯ ಕುರಿತು ಆತಂಕವನ್ನು ವ್ಯಕ್ತ ಪಡಿಸುವ ಲಿಖಿತ ಮನವಿಯನ್ನು ಆಯೋಗಕ್ಕೆ ಸಲ್ಲಿಸಲಾಯಿತು.

### ಹವಾಮಾನ ಬದಲಾವಣೆ ಶೃಂಗಸಭೆಯಲ್ಲಿ ಭಾಗವಹಿಸುವಿಕೆ

ಡಾ.ನೀತು ಶರ್ಮಾಅವರು 2016ರ ಸೆಪ್ಟೆಂಬರ್‌ನಲ್ಲಿ ಫ್ರಾನ್ಸಿನ ನಾಟಿಸ್‌ನಲ್ಲಿ ಸರಕಾರೇತರ ಕಾರ್ಯಶೀಲರ ಹವಾಮಾನ ಬದಲಾವನೆ ಶೃಂಗಸಭೆಯಲ್ಲಿ ಭಾಗವಹಿಸಿದ್ದರು. ಹವಾಮಾನ ಬದಲಾವಣೆಯ ಸಂದರ್ಭದಲ್ಲಿ ಕೃಷಿ ಮತ್ತು ಆಹಾರ ಭದ್ರತೆಯ ಕುರಿತಾದ ಕಾರ್ಯಶಿಬಿರದಲ್ಲಿ ದುರ್ಬಲ ವರ್ಗದವರಿಗಾಗಿ ಆಹಾರ ಭದ್ರತೆ ವಿಷಯದ ಕುರಿತು ವಿಷಯ ಮಂಡನೆ ಮಾಡಿದರು. 50 ರಾಷ್ಟ್ರಗಳ ಸುಮಾರು 2000 ಪ್ರತಿನಿಧಿಗಳು ಈ ಶೃಂಗ ಸಭೆಯಲ್ಲಿ ಭಾಗವಹಿಸಿದರು.

### 2016 ಅಕ್ಟೋಬರ್ 16ರಂದು ಜಾಗತಿಕ ಆಹಾರ ದಿನಾಚರಣೆಯಲ್ಲಿ ಭಾಗವಹಿಸಿದ್ದು

ಆಹಾರದ ಹಕ್ಕು ಕಾರ್ಯಕ್ರಮ ಮುಖ್ಯಸ್ಥರಾದ ಡಾ.ನೀತು ಶರ್ಮಾಅವರು ಜಾಗತಿಕ ಆಹಾರ ದಿನಾಚರಣೆಯಲ್ಲಿ ಪಾಲ್ಗೊಂಡರು. ನ್ಯಾ.ಎಂ.ಎನ್.ವೆಂಕಟಚಲಯ್ಯ, ಮೈಖೇಲ್ ಬಿ. ಫರ್ನಾಂಡಿಸ್ ಮತ್ತು ಡಿ.ಗುರುಸ್ವಾಮಿಯವರನ್ನೊಳಗೊಂಡ ಆಚರಣಾ ಸಮಿತಿಯು ನವ ದೆಹಲಿಯಲ್ಲಿ ಆಹಾರ ಭದ್ರತೆಗೆ ಸಂಬಂಧಿಸಿದ ವಿಷಯಗಳ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ಡಾ.ಶರ್ಮಾಅವರು ಆಹಾರ ಭದ್ರತೆಯ ಕುರಿತು ಹಕ್ಕುಗಳನ್ನು ಆಧರಿಸಿದ ದೃಷ್ಟಿಕೋನದಿಂದ ವಿಷಯ ಮಂಡನೆಯನ್ನು ಮಾಡಿದರು ಮತ್ತು ನ್ಯೂನಪೌಷ್ಟಿಕತೆ ಮತ್ತು ಅಪಪೌಷ್ಟಿಕತೆಯ ಸ್ಥಿತಿಗತಿಗಳ ವಿಶ್ಲೇಷಣೆಯ ಜೊತೆಗೆ ಈ ವಿಷಯವಾಗಿ ಕಾನೂನು ಮತ್ತು ಕಾರ್ಯನೀತಿಯ ಸ್ಥಿತಿಯ ಕುರಿತು ಚಿಂತನೆ ನಡೆಸಿದರು.

### ಅಂಗನವಾಡಿ ಕಾರ್ಯಕರ್ತರ ಮತ್ತು ಸಹಾಯಕರ ಅಖಿಲ ಭಾರತೀಯ ಒಕ್ಕೂಟದ (AIFAWH) 8ನೇ ಅಖಿಲ ಭಾರತೀಯ ಸಮಾವೇಶ

ಅಂಗನವಾಡಿ ಕಾರ್ಯಕರ್ತರ ಮತ್ತು ಸಹಾಯಕರ ಅಖಿಲ

ಭಾರತೀಯ ಒಕ್ಕೂಟದ (AIFAWH) 8ನೇ ಅಖಿಲ ಭಾರತೀಯ ಸಮಾವೇಶ 2016 ಜನವರಿ 7ರಿಂದ 10ರ ವರೆಗೆ ಹೈದರಾಬಾದ್‌ನಲ್ಲಿ ನಡೆಯಿತು. ನೀನು ಸುರೇಶ್‌ಅವರನ್ನು ಸಮಾವೇಶದ ಕೇಂದ್ರ ವೀಕ್ಷಕರನ್ನಾಗಿ ಆಹ್ವಾನಿಸಲಾಗಿತ್ತು. ದೇಶದಲ್ಲಿ ಮೇಲೆ ನವಉದಾರವಾದಿ ಕಾರ್ಯನೀತಿಗಳು ಸಮಾಜ ಕಲ್ಯಾಣ ಕಾರ್ಯಕ್ರಮಗಳ ನಡೆಸಿರುವ ದಾಳಿಯು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈ ಸಮಾವೇಶವನ್ನು ಆಯೋಜಿಸಲಾಗಿತ್ತು. 23 ರಾಜ್ಯಗಳಿಂದ ಬಂದ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿ ಸರಕಾರದ ನವ ಉದಾರವಾದಿ ಕಾರ್ಯನೀತಿಗಳ ಕುರಿತು, ಮುಖ್ಯವಾಗಿ ICDSಗಳ ಖಾಸಗೀಕರಣದ ವಿರುದ್ಧದ ಹೋರಾಟದಲ್ಲಿನ ತಮ್ಮ ಅನುಭವವನ್ನು ಹಂಚಿಕೊಂಡರು.

ನೀಲಿಮಾ ಮೈತ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ವಿಚಾರ ಸಂಕಿರಣವು ಅಂಗನವಾಡಿ ಕಾರ್ಯಕರ್ತರ ಮತ್ತು ಸಹಾಯಕರ ಅಖಿಲ ಭಾರತೀಯ ಒಕ್ಕೂಟವು 25 ವರ್ಷ ಪೂರೈಸಿದ್ದನ್ನು ಗುರುತಿಸಿತು. ಹಿಂದು ಪತ್ರಿಕೆಯ ಗ್ರಾಮೀಣ ವಿಷಯಗಳ ಮಾಜಿ ಸಂಪಾದಕರಾದ ಪಿ.ಸಾಯಿನಾಥ್, ಪ್ರಧಾನ ಮಂತ್ರಿಗಳ ಮಾಜಿ ಕಾರ್ಯದರ್ಶಿ ಮತ್ತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವಿಶೇಷ ವರದಿಗಾರರೂ ಆದ ಕೆ.ಆರ್.ವೇಣುಗೋಪಾಲ್ ಐಎಎಸ್(ನಿವೃತ್ತ) ಮುಂತಾದವರು ಉಪನ್ಯಾಸ ನೀಡಿದರು

### ಎಸ್‌ಡಿಟಿಟಿ ಅಡಿಯಲ್ಲಿ ಆಹಾರದ ಹಕ್ಕು ಮತ್ತು ಅದರ ಲಾಭಗಳ ಕುರಿತು ಕಾನೂನು ಸಾಕ್ಷರತಾ ಕಾರ್ಯಕ್ರಮ

**– ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ**

ಆರ್‌ಟಿಎಫ್ ಸಂಶೋಧನಾ ಸಹಾಯಕರಾದ ಜ಼ರಾ ಕೈಸರ್ ಹತ್ತನೇ ತರಗತಿಯ 36 ವಿದ್ಯಾರ್ಥಿನಿಯರಿಗಾಗಿ ಬೆಂಗಳೂರಿನ ಹೇನ್ಸ್ ರಸ್ತೆಯಲ್ಲಿರುವ ಅಬ್ದುಲ್ ಬರಿ ಇಂಗ್ಲಿಷ್ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ 2016 ಆಗಸ್ಟ್ 10ರಂದು ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ನಡೆಸಿದರು. ಒಂದು ತರಗತಿಯ ಅವಧಿಯಲ್ಲಿ ವಿದ್ಯಾರ್ಥಿನಿಯರಿಗೆ ಆಹಾರದ ಹಕ್ಕು ಪರಿಕಲ್ಪನೆ, ಅದರ ಲಾಭಗಳು ಮತ್ತು ಒಳಗೊಂಡ ವಿವಿಧ ಅಂಶಗಳ ಕುರಿತು ಪರಿಚಯ ನೀಡಿದರು. ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013 (NFSA) ಮತ್ತು ಇದರಡಿಯಲ್ಲಿನ ವಿವಿಧ ಕಾರ್ಯಯೋಜನೆಗಳ ಪಕ್ಷಿನೋಟವನ್ನು ಸರಳವಾದ ಮಾತುಗಳಲ್ಲಿ ನೀಡಲಾಯಿತು. ಗೋಷ್ಠಿಯಲ್ಲಿ ಕಲಿತಿದ್ದನ್ನು ತಮ್ಮ ಇತರ ಸ್ನೇಹಿತರು ಮತ್ತು ಕುಟುಂಬದವರೊಡನೆ ಹಂಚಿಕೊಳ್ಳಲು ಅನುವು ಆಗುವಂತೆ ಭಾಗಿಗಳಿಗೆ ಸರಳವಾದ ಕರಪತ್ರವನ್ನೂ ಹಂಚಲಾಯಿತು.

### ಆವರಗೆರೆ ಗ್ರಾಮದಲ್ಲಿ ಆಹಾರದ ಹಕ್ಕು ಕುರಿತು ಕಾನೂನು ಸಾಕ್ಷರತಾ ಕಾರ್ಯಕ್ರಮ

ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013ರ ಕುರಿತು ಜನಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ರಾಮನಗರ ತಾಲೂಕು/ಜಿಲ್ಲೆಯ ಆವರಗೆರೆ ಗ್ರಾಮದಲ್ಲಿ 2016 ಫೆಬ್ರವರಿ 20ರಂದು ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೆ ಒಂದು ದಿನ ಮುಂಚಿತವಾಗಿಯೇ ಗ್ರಾಮದ ಪ್ರತಿಯೊಂದು ಮನೆಗೂ NFSA ಕುರಿತು ಕರಪತ್ರವನ್ನು ಹಂಚಲಾಗಿತ್ತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿದ್ದ ಕೃಷ್ಣ ಭಾರದ್ವಾಜ್‌ಅವರು ಅಧಿನಿಯಮದ ಪ್ರಮುಖ ನಿಬಂಧನೆಗಳನ್ನು ವಿವರಿಸಿದರು; ಸುಮಾರು 40 ಜನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಾಕ್ಷರತಾ ಕಾರ್ಯಕ್ರಮವನ್ನು ಶಿಕ್ಷಣ ತಂಡ ಸಂಘಟಿಸಿತ್ತು.

### ಬೆಂಗಳೂರು ಡಿ.ಜಿ.ಹಳ್ಳಿ ಗ್ರಾಮದಲ್ಲಿ ಆಹಾರದ ಹಕ್ಕು ಕುರಿತು ಕಾನೂನು ಸಾಕ್ಷರತಾ ಕಾರ್ಯಕ್ರಮ

ಬೆಂಗಳೂರಿನ ಡಿ.ಜಿ.ಹಳ್ಳಿಯಲ್ಲಿ 2016 ನವೆಂಬರ್ 9ರಂದು ಬೀದಿ ನಾಟಕವನ್ನು ಪ್ರದರ್ಶಿಸಲಾಯಿತು. ಜ಼ರಾ ಕೈಸರ್ (ಸಿಸಿಎಲ್ ಸಂಶೋಧನಾ ಸಹಾಯಕರು), ಸ್ಯಾಮುಅಲ್ ಸತ್ಯಶೀಲನ್ (ಕಾರ್ಯಕ್ರಮ ಮತ್ತು ಆಡಳಿತ ಸಹಾಯಕರು–ಸಿಸಿಎಲ್), ನಿಸಾರ್ ಅಹಮದ್ (ಬೆಂಬಲ–ಸಿಸಿಎಲ್), ಲೀಗಲ್ ಸರ್ವಿಸಸ್ ಕ್ಲಿನಿಕ್ ಮತ್ತು ವಿದ್ಯಾರ್ಥಿ ಸ್ವಯಂಸೇವಕರು, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ, ಬೆಂಗಳೂರು ಇವರು ಕಾರ್ಯಕ್ರಮದ ಸಂಚಾಲಕರಾಗಿದ್ದರು. ಪಡಿತರ ಅಂಗಡಿಗಳ ಮೂಲಕ ನಡೆಯುವ ಸಾರ್ವಜನಿಕ ವಿತರಣ ವ್ಯವಸ್ಥೆ, ಶಾಲೆಗಳಲ್ಲಿ ನೀಡುವ ಮಧ್ಯಾಹ್ನದ ಊಟ ಮತ್ತು ಅಂಗನವಾಡಿಗಳ ಮೂಲಕ ನಡೆಯುವ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ ಇವುಗಳ ಪರಿಚಯವನ್ನು ಸಾರ್ವಜನಿಕರಿಗೆ ಮಾಡಿಕೊಡಲಾಯಿತು. ಬೀದಿ ನಾಟಕದ ಪ್ರದರ್ಶನದ ಕೊನೆಯಲ್ಲಿ ಅದರಲ್ಲಿ ಪ್ರಸ್ತಾಪಿಸಲಾದ ಅಂಶಗಳ ಸಾರಾಂಶವನ್ನು ಒಳಗೊಂಡ ಕರಪತ್ರವನ್ನು ಜನರಲ್ಲಿ ಹಂಚಲಾಯಿತು.



# ಬಾಲ ನ್ಯಾಯ ತಂಡದ ವರದಿಗಳು

### ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (POCSO) ಅಧಿನಿಯಮ, 2012 ಅಡಿಯಲ್ಲಿ ನಡೆಯುವ ವಿಶೇಷ ನ್ಯಾಯಾಲಯಗಳ ಕಾರ್ಯಾಚರಣೆ ಕುರಿತು ಅಧ್ಯಯನ.

ತಂಡವು ಐದು ರಾಜ್ಯಗಳಲ್ಲಿ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (POCSO) ಅಧಿನಿಯಮ, 2012 ಅಡಿಯಲ್ಲಿ ನಡೆಯುವ ವಿಶೇಷ ನ್ಯಾಯಾಲಯಗಳ ಕಾರ್ಯಾಚರಣೆ ಕುರಿತು ಸಂಶೋಧನಾ ಅಧ್ಯಯನವನ್ನು ಹಮ್ಮಿಕೊಂಡಿದೆ. ಅಧ್ಯಯನವು ದೆಹಲಿಯಲ್ಲಿ ಅಂತಿಮ ರೂಪವನ್ನು ಪಡೆದಿದೆ. ಜನವರಿಯಲ್ಲಿ ಪ್ರಕಟವಾದ ಈ ಅಧ್ಯಯನ ವರದಿಯು ಲಭ್ಯವಿರುವ ಲಿಂಕ್:https://www.nls.ac.in/ccl/jjdocuments/ specialcourt POSCOAct2012.pdf

ಕರ್ನಾಟಕದಲ್ಲಿ ಮೂರು ಜಿಲ್ಲೆಗಳಲ್ಲಿ ಕೈಗೊಂಡ ಅಧ್ಯಯನ ಪೂರ್ಣಗೊಂಡಿದೆ; ವರದಿ ಇನ್ನೇನು ಬರಲಿದೆ. ಇದೇ ಮಾದರಿಯ ಅಧ್ಯಯನವನ್ನು ಅಸ್ಸಾಮಿನಲ್ಲಿಯೂ ನಡೆಸಲಾಯಿತು. ಪ್ರತಿ ರಾಜ್ಯದಲ್ಲಿಯೂ ಮಾಹಿತಿದಾರರಲ್ಲಿ ನ್ಯಾಯಾಂಗ ಅಧಿಕಾರಿಗಳು, ಪ್ರಾಸಿಕ್ಯೂಷನ್ ಇಲಾಖೆ, ಪೊಲೀಸರು, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ರಾಜ್ಯ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳ ಪ್ರತಿನಿಧಿಗಳನ್ನು ಸಂದರ್ಶಿಸಲಾಯಿತು. ಅಧ್ಯಯನದಲ್ಲಿ ಆಯಾ ರಾಜ್ಯಗಳಲ್ಲಿ ನೀಡಲಾದ ತೀರ್ಪುಗಳ ವಿಶ್ಲೇಷಣೆಯೂ ಒಳಗೊಂಡಿದೆ. ಈ ಅಧ್ಯಯನಗಳು ವಾಸ್ತವ ಪರಿಸ್ಥಿತಿಯ ಚಿತ್ರಣವನ್ನು ನೀಡುವುದಲ್ಲದೇ ಕಾನೂನು ಮತ್ತು ಕಾರ್ಯನೀತಿಗಳ ಬದಲಾವಣೆಗಾಗಿ ಸೂಕ್ತ ಶಿಫಾರಸ್ಸುಗಳನ್ನು ಮಾಡುತ್ತವೆ.

### ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾಗಿರುವ ಮಕ್ಕಳಿಗಾಗಿ ಬಹುಶಿಸ್ತೀಯ ಸೇವೆಗಳು

ಜಾರಿಯಲ್ಲಿರುವ ಚಟುವಟಿಕೆಗಳ ಅಂಗವಾಗಿ ಸಿಸಿಎಲ್, ಬಾಲ ನ್ಯಾಯ ಮಂಡಳಿಯ ಎದುರು ಹಾಜರಾಗುವ ಮಕ್ಕಳಿಗೆ ಮಡಿವಾಳದ ಒಎಚ್‌ನಲ್ಲಿರುವ ಮಾನಸಿಕ-ಸಾಮಾಜಿಕ-ಕಾನೂನು ಸಹಾಯ ಕೇಂದ್ರದಲ್ಲಿ ಬಹು ಶಿಸ್ತೀಯ ಸೇವೆಗಳನ್ನು ಒದಗಿಸುತ್ತದೆ. ಈ ಪದ್ಧತಿಯಿಂದಾಗಿ ಬಹು ಶಿಸ್ತೀಯ ತಂಡದವರು ಮಕ್ಕಳ ಬದುಕಿನ ವಾಸ್ತವ ಮತ್ತು ಬಾಲ ನ್ಯಾಯ ವ್ಯವಸ್ಥೆಯ ಕಾರ್ಯಾಚರಣೆಯ ಆಳಕ್ಕೆ ಹೋಗಲು ಸಾಧ್ಯವಾಗುತ್ತದೆ, ಈ ಮೂಲಕ ಬಾಲ ನ್ಯಾಯ ಅಧಿನಿಯಮದ ಅನುಷ್ಠಾನವನ್ನು ಬೆಂಬಲಿಸುತ್ತಾ, ಅದಕ್ಕೆ ಸವಾಲು ಎಸೆಯುತ್ತಾ ಅಥವಾ ಪರಿಣಾಮಕಾರಿ ಅನುಷ್ಠಾನದ ಕುರಿತು ಟೀಕೆ ಟಿಪ್ಪಣಿಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಜೊತೆಗೆ ಈ ಕುರಿತು ಸಂಶೋಧನೆ, ಬೋಧನೆ, ತರಬೇತಿ, ಹಕ್ಕೊತ್ತಾಯ ಮತ್ತು ಸಮರ್ಥನೆಯ ಮಾಹಿತಿಯನ್ನು ನೀಡಲು ಸಾಧ್ಯವಾಗುತ್ತದೆ. ಕಾನೂನು ಸೇವೆಗಳ ಒಂದು ಭಾಗವಾಗಿ, ಸಾಕ್ಷಿಗಳು ಹಾಜರಾಗದೇ ಇರುವ ಕಾರಣಕ್ಕಾಗಿ ಬಾಲ ನ್ಯಾಯ ಮಂಡಳಿಯೆದುರು ಹೆಚ್ಚು ಪ್ರಗತಿಯನ್ನು ಕಾಣದೇ ವಿಳಂಬವಾಗಿದ್ದ 3 ಪ್ರಕರಣಗಳನ್ನು ಮುಚ್ಚಿಸಿದ್ದಾರೆ. ಹೀಗೆ ಮಾಡುವುದರಿಂದಾಗಿ ಪ್ರಕರಣದಲ್ಲಿ ಒಳಗೊಂಡಿದ್ದ ಮಕ್ಕಳು ತಮ್ಮ ನೈಜ ಜೀವನವನ್ನು ಮುಂದುವರಿಸಲು ಮತ್ತು ಪ್ರಕರಣಗಳು ವಿಚಾರಣೆಗೆ ಬಂದಾಗ ಬಾಲ ನ್ಯಾಯ ಮಂಡಳಿಯ ಎದುರು ಹಾಜರಾಗುವುದನ್ನು ನಿಲ್ಲಿಸುವುದಕ್ಕೆ ಸಹಾಯಕವಾಗಿದೆ.

### ವೀಕ್ಷಣಾಲಯದಲ್ಲಿ ಕಾರ್ಯಕ್ರಮಗಳು

ಈ ಅವಧಿಯಲ್ಲಿ ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾಗಿರುವ ಮಕ್ಕಳಿಗಾಗಿ ವೀಕ್ಷಣಾ ಗೃಹಗಳಲ್ಲಿ ಹಲವು ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈಕಲಾಜಿಕಲ್ ರಿಸರ್ಚ್ ಸಹಯೋಗದಲ್ಲಿ ಆಗಸ್ಟ್ 15ರಂದು ಸ್ವಾತಂತ್ರ್ಯ ದಿನೋತ್ಸವವನ್ನು ಮತ್ತು ನವೆಂಬರ್ 7ರಂದು ಮಕ್ಕಳ ದಿನವನ್ನು ಆಚರಿಸಲಾಯಿತು. ಮಕ್ಕಳ ದಿನಾಚರಣೆಯಂದು ಸಿಸಿಎಲ್ ಕೂಡ ಹಲವು ಬಗೆಯ ಸ್ಪರ್ಧೆಗಳು ಮತ್ತು ಮನೋರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಿತ್ತು. ತಂಡವು ಡ್ರೀಮ್ ಅಂಡ್ ಡ್ರೀಮ್‌ನ ಸಂಪನ್ಮೂಲ ವ್ಯಕ್ತಿಗಳ ನೆರವಿನಿಂದ ವೀಕ್ಷಣಾಲಯದಲ್ಲಿ ಕಾರ್ಯಕ್ರಮಗಳನ್ನು ನಡೆಸಿತು.

ಅರ್ಲಿನ್ ಮನೋಹರನ್ ಮತ್ತು ಶ್ರೇಯಸ್ ರಾವ್ ಎಪಿಎಸ್ಎ ಸಹಯೋಗದೊಂದಿಗೆ ವೀಕ್ಷಣಾಲಯದಲ್ಲಿ ಮಕ್ಕಳ ಸಮಿತಿಯನ್ನು ಸ್ಥಾಪಿಸುವುದರ ಕುರಿತು ಸಾಮರ್ಥ್ಯ ವರ್ಧನೆಯ ಕಾರ್ಯಕ್ರಮವನ್ನು ನಡೆಸಲಾಯಿತು. ಎಪಿಎಸ್ಎ ನಿರ್ದೇಶಕರಾದ ಶೀಲಾ ದೇವರಾಜ್, ಸಮಾಜ ಕಾರ್ಯಕರ್ತೆ ಉಷಾ ವಿ.ಜಿ. ಮತ್ತು ಅವರ 15 ಸ್ವಯಂ ಸೇವಕರ ತಂಡ ವೀಕ್ಷಣಾ ಗೃಹದ ಸೂಪರಿಂಟೆಂಡೆಂಟ್, ಇತರ ಸಿಬ್ಬಂದಿ, ಬಾಲ ನ್ಯಾಯ ತಂಡ ಮತ್ತು 52 ಬಾಲಕರು ಭಾಗವಹಿಸಿದರು.

ಚೈಲ್ಡ್ ರೈಟ್ಸ್ ಅಂಡ್ ಯು(ಕ್ರೈ) ಸ್ವಯಂ ಸೇವಕರ ಸಹಯೋಗದಲ್ಲಿ ಸಿಸಿಎಲ್ ಸದಸ್ಯರು ವೀಕ್ಷಣಾ ಗೃಹದ ಮಕ್ಕಳೊಂದಿಗೆ ಒಡನಾಡಿ ವಾರಾಂತ್ಯದ ಮನೋರಂಜನ ಚಟುವಟಿಕೆಗಳನ್ನು ನಡೆಸಿದರು. ಈ ಅವಧಿಯಲ್ಲಿ ಒಟ್ಟು 6 ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುತ್ತಾರೆ.

### ಪ್ರಾದೇಶಿಕ ಮತ್ತು ರಾಷ್ಟ್ರೀಯ ಸಮಾಲೋಚನೆಗಳಲ್ಲಿ ತಾಂತ್ರಿಕ ಸಹಾಯ

ಬಾಲ ನ್ಯಾಯ ತಂಡದ ಪ್ರತಿನಿಧಿಗಳು "ಬಾಲ ನ್ಯಾಯ (ಆರೈಕೆ ಮತ್ತು ರಕ್ಷಣೆ) ಅಧಿನಿಯಮ, 2000 ಅಡಿಯಲ್ಲಿ ಮಕ್ಕಳ ಪುನರ್ವಸತಿಯನ್ನು ಸಶಕ್ತಗೊಳಿಸುವುದು" ಕುರಿತು ಎರಡನೆಯ ಸುತ್ತಿನ ಪ್ರಾದೇಶಿಕ ಸಮಾಲೋಚನೆಯಲ್ಲಿ ತಾಂತ್ರಿಕ ನೆರವನ್ನು ಒದಗಿಸಿದರು. ಇದು ಯುನಿಸೆಫ್(unicef) ನಿಧಿಯಿಂದ ಸ್ಥಾಪಿಸಲಾದ ಸರ್ವೋಚ್ಚ



ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯ ಸಮಿತಿಯ ಆಶ್ರಯದಲ್ಲಿ ನಡೆಯಿತು. ತಂಡವು 5 ಪ್ರಾದೇಶಿಕ ಮತ್ತು 1 ರಾಷ್ಟ್ರೀಯ ಸಮಾಲೋಚನೆಯ ಭಾಗವಾಗಿತ್ತು ಮತ್ತು ಇದರಿಂದ ಫಲಿಸಿದ ಸಮಗ್ರ ವರದಿಯನ್ನು 2016 ಸೆಪ್ಟೆಂಬರ್ 4ರಂದು ರಾಷ್ಟ್ರೀಯ ಸಮಾಲೋಚನೆಯಲ್ಲಿ ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಧೀಶರು ಬಿಡುಗಡೆ ಮಾಡಿದರು.

## ಮಕ್ಕಳ ಕಲ್ಯಾಣ ಸಮಿತಿಗಳಿಗಾಗಿ ಸಾಮರ್ಥ್ಯ ವರ್ಧನೆ ಕಾರ್ಯಕ್ರಮ

ಬಾಲ ನ್ಯಾಯ ತಂಡವು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (POCSO) ಅಧಿನಿಯಮ, 2012ರ ಅನುಷ್ಠಾನದ ಕುರಿತು ಮಕ್ಕಳ ಕಲ್ಯಾಣ ಸಮಿತಿಗಳ ಸಾಮರ್ಥ್ಯ ವರ್ಧನೆಯ ಎರಡು ದಿನಗಳ ರಾಜ್ಯ ಮಟ್ಟದ ಕಾರ್ಯಕ್ರಮವನ್ನು CCL, NLSIU ನಲ್ಲಿ ಹಮ್ಮಿಕೊಂಡಿತ್ತು. ಇದನ್ನು ಕರ್ನಾಟಕ ಸಮಗ್ರ ಮಕ್ಕಳ ರಕ್ಷಣಾ ಸಂಘದ(KSICPS) ಸಹಯೋಗದಲ್ಲಿ ಕರ್ನಾಟಕ ಸರಕಾರದ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಟಾಟಾ ಟ್ರಸ್ಟ್ಸ್ ನೆರವಿನೊಂದಿಗೆ ಆಯೋಜಿಸಲಾಗಿತ್ತು.

ಕರ್ನಾಟಕದ 30 ಜಿಲ್ಲೆಗಳ ಪೈಕಿ 27 ಜಿಲ್ಲೆಗಳನ್ನು ಪ್ರತಿನಿಧಿಸುವ ಮಕ್ಕಳ ಕಲ್ಯಾಣ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರು ಸೇರಿದಂತೆ ಒಟ್ಟು 45 ಜನ ಸಮಾವೇಶದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಮತ್ತು ಇದಕ್ಕೆ ಒಳಗಾದವರ ಮೇಲೆ ಅದು ಬೀರುವ ಪ್ರಭಾವವನ್ನು ಅರ್ಥ ಮಾಡಿಕೊಳ್ಳುವುದು, ಆಘಾತಕ್ಕೆ ಒಳಗಾದ ಮಕ್ಕಳನ್ನು ನಿರ್ವಹಿಸುವುದು ಮತ್ತು ಬೆಂಬಲ ವ್ಯಕ್ತಿಗಳ ಪಾತ್ರ ಮತ್ತು ಜವಾಬ್ದಾರಿಗಳು, ಮತ್ತು POCSO ಮತ್ತು JJ ಅಧಿನಿಯಮಗಳ ಕುರಿತು ವಿಚಾರ ವಿನಿಮಯಗಳಿದ್ದವು. NCPCR ಮಾಜಿ ಸದಸ್ಯರು ಮತ್ತು ಬೆಂಗಳೂರಿನ ಮಕ್ಕಳ ಕಲ್ಯಾಣ ಸಮಿತಿಯ ಮಾಜಿ ಸದಸ್ಯರೂ ಆದ ನೀನಾ ನಾಯಕ್, ಹಿರಿಯ ಆಪ್ತಸಮಾಲೋಚಕರಾದ ಲಾವಣ್ಯ ದೇವದಾಸ್, ಸಿಸಿಎಲ್‌ನೊಂದಿಗೆ ಅರೆಕಾಲಿಕ ಆಪ್ತಸಮಾಲೋಚಕರಾಗಿರುವ ಅನುರೂಪಾ ಗಿಳಿಯಾಲ್, ಕಾನೂನು ಸಿಸಿಎಲ್ ಸಂಶೋಧನಾಧಿಕಾರಿ ಶ್ರುತಿ ರಾಮಕೃಷ್ಣನ್, ಸ್ವತಂತ್ರ ಸಂಶೋಧಕರು ಡಾ.ಎ.ನಾಗರತ್ನ, NLSIU ಬೋಧಕರು ಮತ್ತು ಎನ್‌ಫೋಲ್ಡ್ ಇಂಡಿಯಾದ ಕಮ್ಯುನಿಟಿ ಪ್ರಾಜೆಕ್ ಮುಖ್ಯಸ್ಥರಾದ ಕುಶಿ ಕುಶಾಲಪ್ಪ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಪಾಕ್ಸೋ ಆಕ್ಟ್‌ನ ಬಗ್ಗೆ ಎರಡು ದಿನಗಳ ಕಾರ್ಯಾಗಾರವನ್ನು 17 ಮತ್ತು 18 ನವೆಂಬರ್ 2106 ರಂದು ಆಂಧ್ರ ಪ್ರದೇಶದ ವಿಜಯವಾಡದಲ್ಲಿ ಹಮ್ಮಿಕೊಂಡಿದ್ದು ಈ ಕಾರ್ಯಾಗಾರದಲ್ಲಿ ಅಧ್ಯಕ್ಷರು ಮತ್ತು ರಕ್ಷಣಾಧಿಕಾರಿ (IC) ಗಳು ಸೇರಿ 50 ಜನ 13 ಜಿಲ್ಲೆಗಳನ್ನು ಪ್ರತಿನಿಧಿಸಿದ್ದರು.

ಇದೇ ರೀತಿಯ ಕಾರ್ಯಾಗಾರವನ್ನು 24 ಮತ್ತು 25 ನವೆಂಬರ್ 2106 ರಂದು ತೆಲಂಗಾಣದ ಹೈದ್ರಾಬಾದ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರದಲ್ಲಿ 10 ಜಿಲ್ಲೆಗಳ 31 ಜನ ಪ್ರತಿನಿಧಿಗಳಿದ್ದರು.

## ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದ ಮಕ್ಕಳೊಂದಿಗೆ ಕೆಲಸ ಮಾಡುವ ಆಪ್ತಸಮಾಲೋಚಕರ ಸಾಮರ್ಥ್ಯ ವರ್ಧನೆಗಾಗಿ ರಾಜ್ಯ ಮಟ್ಟದ ಕಾರ್ಯಕ್ರಮ

ರಾಜ್ಯಾಂದ್ಯಂತ ವೀಕ್ಷಣಾಲಯಗಳಲ್ಲಿ ಕೆಲಸ ಮಾಡುತ್ತಿರುವ ಆಪ್ತಸಮಾಲೋಚಕರ ಸಾಮರ್ಥ್ಯ ವರ್ಧನೆಗಾಗಿ 2016 ಜೂನ್ 22ರಂದು ಕಾರ್ಯಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ರಾಜ್ಯಾದ್ಯಂತ ವೀಕ್ಷಣಾಲಯಗಳಲ್ಲಿ ಅಳವಡಿಸಿಕೊಂಡಿರುವ ಮಾನಸಿಕ ಆರೋಗ್ಯ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಸಿಸಿಎಲ್ ಕ್ಷೇತ್ರಾನುಭವವನ್ನು ಆಧರಿಸಿ ಮಾನಸಿಕ ಆರೋಗ್ಯ ವ್ಯವಸ್ಥೆ, ಅನ್ವಯಿಸುವ ವೃತ್ತಿಪರ ನೀತಿ ಸಂಹಿತೆ ಮತ್ತು ಕಾನೂನು ಆಡಳಿತ ಕ್ರಮವನ್ನು ಪ್ರಸ್ತಾವಿಸುವುದು ಈ ಕಾರ್ಯಶಿಬಿರದ ಉದ್ದೇಶವಾಗಿತ್ತು. DCAP NIMHANSನ ಡಾ.ಶೇಖರ್ ಪಿ ಶೇಷಾದ್ರಿ ಮತ್ತು ಡಾ.ಚೈತ್ರಾಅವರ ಜೊತೆಯಲ್ಲಿ ಆರ್ಲಿನ್ ಮನೋಹರನ್ ಮತ್ತು ಗಂಗಾ ನಾಯರ್ ಗೋಷ್ಠಿಗಳನ್ನು ನಡೆಸಿದರು. ಇಂಥ ಕಾರ್ಯಕರ್ತರಿಗಾಗಿ ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ನಡೆಸಿದ ಇದು ಮೊದಲ ಕಾರ್ಯಶಿಬಿರವಾಗಿತ್ತು. ಇದರಿಂದಾಗಿ ತಮ್ಮ ಅನುಭವವನ್ನು ಹಂಚಿಕೊಳ್ಳಲು, ಅನುಮಾನಗಳನ್ನು ಪರಿಹರಿಸಿಕೊಳ್ಳಲು ಮತ್ತು ಮಕ್ಕಳಿಗೆ ಉತ್ತಮ ಗುಣಮಟ್ಟದ ಆಪ್ತಸಮಾಲೋಚನೆಯನ್ನು ಒದಗಿಸುವಲ್ಲಿ ಎದುರಾಗುವ ವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಗಳು/ಸವಾಲುಗಳನ್ನು ಗುರುತಿಸುವುದಕ್ಕೆ ಈ ಕಾರ್ಯಶಿಬಿರವು ಭಾಗಿಗಳಿಗೆ ನೆರವಾಯಿತು.

## ಕಾನೂನು ಸಾಕ್ಷರತೆ ಕಾರ್ಯಕ್ರಮಗಳು (LLPs)

ಕ್ರಾಸ್ ಕಟಿಂಗ್ ಚಟುವಟಿಕೆಗಳ ಅಂಗವಾಗಿ, ಸಿಸಿಎಲ್ ಸಮುದಾಯದಲ್ಲಿ ಪ್ರತಿ ವರ್ಷ 12 ಕಾನೂನು ಸಾಕ್ಷರತೆ ಕಾರ್ಯಕ್ರಮಗಳನ್ನು ನಡೆಸುತ್ತದೆ. ಮಕ್ಕಳ ವಿರುದ್ಧ ಲೈಂಗಿಕ ಅಪರಾಧಗಳು, ಆಹಾರದ ಹಕ್ಕು, ಬಾಲದುಡಿಮೆ, ಬಾಲವಿವಾಹ, ಶಿಕ್ಷಣ ಹಕ್ಕು ಇವೇ ಮುಂತಾದ ವಿಚಾರಗಳನ್ನು, ಉಪನ್ಯಾಸ, ಸಂವಾದ, ಬೀದಿನಾಟಕ ಮತ್ತು ಚಲನಚಿತ್ರ ಪ್ರದರ್ಶನ ಹೀಗೆ ವಿವಿಧ ವಿಧಾನಗಳ ಮೂಲಕ ಚರ್ಚಿಸಲಾಗುತ್ತದೆ. ಪ್ರತಿಯೊಂದು ಕಾರ್ಯಕ್ರಮದಲ್ಲಿ ಭಾಗಿಗಳನ್ನು ಜಾಗರೂಕತೆಯಿಂದ ಆಯ್ಕೆ ಮಾಡಲಾಗಿತ್ತು, ಅವರ ನಿರ್ದಿಷ್ಟ ಅಗತ್ಯಗಳನ್ನು ಗುರಿಯಾಗಿಟ್ಟುಕೊಂಡು ಕಾರ್ಯಕಲಾಪಗಳನ್ನು ರೂಪಿಸಲಾಗಿತ್ತು. ಕಾನೂನು ಸಾಕ್ಷರತೆ ಕಾರ್ಯಕ್ರಮಗಳ ಮೂಲಕ ನಾವು ಎರಡು ಗ್ರಾಮಗಳ ವಾಸಿಗಳು, ಮಧ್ಯಾಹ್ನದ ಊಟದ ಕಾರ್ಯಕರ್ತರು, ಗ್ರಾಮ ಪಂಚಾಯತಿ ಸದಸ್ಯರು, SDMC ಸದಸ್ಯರು, ರಾಮನಗರ, ಬೆಂಗಳೂರು ನಗರ, ಬೆಂಗಳೂರು ನಗರ ಮತ್ತು ರಾಯಚೂರು ಜಿಲ್ಲೆಗಳ ಉರ್ದು ಶಾಲೆಯ ಮಕ್ಕಳು– ಇವರನ್ನು ಮುಟ್ಟಲು ಸಾಧ್ಯವಾಗಿದೆ. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಮತ್ತು ಆಯೋಗ ನಡೆಸಿದ 'ಶಾಲೆ ಕಡೆ ನಮ್ಮ ನಡೆ' ಆಂದೋಲನ, ಜಿಲ್ಲಾ



ಶಾಲಾಭಿವೃದ್ಧಿ ಮತ್ತು ನಿಗಾವಣೆ ಫೋರಮ್ ವತಿಯಿಂದ ನಡೆದ ಬೇಸಿಗೆ ಶಿಬಿರ ಇಂಥ ಚಟುವಟಿಕೆಗಳ ವೇದಿಕೆಗಳನ್ನೂ ಬಳಸಿಕೊಂಡು ಹೆಚ್ಚಿನ ಪ್ರಭಾವ ಬೀರುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

## ಪುನಶ್ಚೈತನ್ಯಕಾರಿ ನ್ಯಾಯ

ಬಾಲ ನ್ಯಾಯ ತಂಡವು ಪುನಶ್ಚೈತನ್ಯಕಾರಿ ನ್ಯಾಯದ ಕುರಿತ 2016 ಜನವರಿ 30ರಿಂದ ಫೆಬ್ರವರಿ 3ರ ವರೆಗೆ ಐದು ದಿನಗಳ ಕಾರ್ಯಶಿಬಿರವನ್ನು ನಡೆಸಿತು. ಇದನ್ನು ಯುಎಸ್‌ಎ ನ ಇಂಪ್ಯಾಕ್ಟ್ ಜಸ್ಟಿಸ್‌ನ ಸುಜಾತಾ ಬಾಳಿಗ ಮತ್ತು ನೂರಿ ನುಸ್ರತ್ ಕ್ರೈ ಸಂಸ್ಥೆಯ ಬೆಂಬಲದೊಂದಿಗೆ ನಡೆಸಿಕೊಟ್ಟರು. ಸುಜಾತಾ ಅವರು ಇಂಪ್ಯಾಕ್ಟ್ ಜಸ್ಟಿಸ್‌ನಲ್ಲಿ ಪುನಶ್ಚೈತನ್ಯಕಾರಿ ನ್ಯಾಯ ಯೋಜನೆಯ ನಿರ್ದೇಶಕರಾಗಿದ್ದು ಬಾಲಾಪರಾಧಿ ಬಂಧನಕ್ಕೆ ಪುನಶ್ಚೈತನ್ಯ ನ್ಯಾಯದ ಪರ್ಯಾಯ ವಿಧಾನಗಳನ್ನು ಅನುಷ್ಠಾನ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ಮತ್ತು ಕುಟುಂಬದ ಒಳಗೆಯೇ ನಡೆಯುವ ಮತ್ತು ಲೈಂಗಿಕ ಹಿಂಸಾಚಾರವನ್ನು ನಿವಾರಿಸುವ ನಿಟ್ಟಿನಲ್ಲಿ ಪುನಶ್ಚೈತನ್ಯ ನ್ಯಾಯದ ಬಳಕೆ ಇವುಗಳ ಕುರಿತು ಸಮುದಾಯಗಳಿಗೆ ಸಹಾಯ ಮಾಡುತ್ತಾರೆ. ಇದೊಂದು ಪ್ರಾಯೋಗಿಕ ಕಾರ್ಯಶಿಬಿರವಾಗಿದ್ದರಿಂದ ಭಾಗಿಗಳ ಸಂಖ್ಯೆಯನ್ನು 20ಕ್ಕೆ ಸೀಮಿತಗೊಳಿಸಲಾಗಿತ್ತು. ಮಕ್ಕಳ ವಿರುದ್ಧ ಲೈಂಗಿಕ ಅಪಾರಾಧದ ಕ್ಷೇತ್ರದಲ್ಲಿ ಆಪ್ತಸಮಾಲೋಚಕರು ಮತ್ತು ಸಮಾಜಕಾರ್ಯಕರ್ತರಾಗಿ ಕೆಲಸ ಮಾಡುತ್ತಿರುವ ಅಪರ್ಣ, APSA, ಚೈಲ್ಡ್ ಲೈನ್, CSJ ಸೇವ್ ದ ಚಿಲ್ಡ್ರನ್, ಪರಿವರ್ತನ್, ತುಳಿರ್ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಇತರರು ಇದರಲ್ಲಿ ಭಾಗವಹಿಸಿದ್ದರು.

ಭಾಗಿಗಳಿಗೆ 'ಸರ್ಕಲ್ ಪ್ರಾಸೆಸಸ್'ಗಳನ್ನು ಸಂಚಾಲಿಸುವುದರಲ್ಲಿ ತರಬೇತಿ ನೀಡಲಾಯಿತು. ಸಂಚಾಲಕರಿಂದ ಮತ್ತು ಭಾಗಿಗಳು ಸಕ್ರಿಯವಾಗಿ ತಮ್ಮ ಒಳನೋಟಗಳನ್ನು ಮುಕ್ತವಾಗಿ ವಿನಿಮಯ ಮಾಡಿಕೊಂಡಿದ್ದು ಈ ಕಾರ್ಯಶಿಬಿರವನ್ನು ಹೆಚ್ಚು ಅರ್ಥಪೂರ್ಣಗೊಳಿಸಿತು. ಇದು ಭಾಗಿಗಳ ವೈಯಕ್ತಿಕ ಬದುಕಿನ ಮೇಲೆ ಪ್ರಭಾವ ಬೀರಿದ್ದಷ್ಟೆ ಅಲ್ಲ, ಪೀಡಿತರು, ಅಪರಾಧಿಗಳು ಮತ್ತು ವಿಸ್ತೃತ ಸಮುದಾಯಗಳ ಅಗತ್ಯಗಳನ್ನು ಗುರುತಿಸಿ, ಅವುಗಳನ್ನು ಸರಳವಾದ 'ಸರ್ಕಲ್ ಪ್ರೊಸೆಸಸ್' ಮೂಲಕ ಪರಿಹರಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳುವಲ್ಲಿ ಸಹಾಯಕವಾಯಿತು.

ಪುನಶ್ಚೈತನ್ಯಕಾರಿ ಸಂಚಾಲನ ತರಬೇತಿಯನ್ನು ಟೆರ್ರಿ ಒ'ಕೋನೆಲ್ ಮತ್ತು ಜೀನ್ ಷ್ಮಿಜ್‌ಅವರು 2016 ಸೆಪ್ಟೆಂಬರ್ 8ರಿಂದ 10ರ ವರೆಗೆ ಬೆಂಗಳೂರಿನ ಲ್ಯಾವೆಲಿ ರಸ್ತೆಯಲ್ಲಿರುವ ಚಾನ್ಸರಿಯಲ್ಲಿ ನಡೆಸಿಕೊಟ್ಟರು. ಟೆರ್ರಿ ಒ'ಕೊನೆಲ್‌ಅವರು ರಿಯಲ್ ಜಸ್ಟಿಸ್‌ನ ಆಸ್ಟ್ರೇಲಿಯನ್ ನಿರ್ದೇಶಕರಾಗಿದ್ದಾರೆ(ಇಂಟರ್‌ನ್ಯಾಷನಲ್ ಇನ್ಸ್‌ಟಿಟ್ಯೂಟ್ ಫಾರ್ ರೆಸ್ಟೋರೇಟಿವ್ ಪ್ರಾಕ್ಟೀಸಸ್ IIRP ನ ಅಂಗ). ತರಬೇತಿ ಶಿಬಿರವನ್ನು ಬಾಲ ನ್ಯಾಯ ತಂಡ ಯುನಿಸೆಫ್, ಕ್ರೈ ಮತ್ತು ಟಾಟಾ ಟ್ರಸ್ಟ್‌ನ ನೆರವಿನೊಂದಿಗೆ CCL-NLSIUನಲ್ಲಿ ನಡೆಸಿತು. ಕರ್ನಾಟಕ, ಕೇರಳ, ಮಧ್ಯಪ್ರದೇಶ, ತಮಿಳುನಾಡು, ಒಡಿಶಾ, ಮಹಾರಾಷ್ಟ್ರ, ಗುಜರಾತ್, ಅಸ್ಸಾಮ್, ಆಂಧ್ರಪ್ರದೇಶ್, ತೆಲಂಗಾಣ, ಪಶ್ಚಿಮ ಬಂಗಾಳ ಮತ್ತು ರಾಜಸ್ಥಾನ ಹೀಗೆ 12 ರಾಜ್ಯಗಳ ಒಟ್ಟು 43 ಜನ ಪ್ರತಿನಿಧಿಗಳು ಕಾರ್ಯಶಿಬಿರದಲ್ಲಿ ಭಾಗವಹಿಸಿದರು. ಇವರಲ್ಲಿ ವೃತ್ತಿಪರ ಲಾಯರುಗಳು, ಆಪ್ತಸಮಾಲೋಚಕರು, ಸಿಡಬ್ಲ್ಯುಸಿ ಸದಸ್ಯರು, ಒಬ್ಬರು ಜೆಜೆಬಿ ಸದಸ್ಯರು, ವಿಶೇಷ ಕಿಶೋರ ಪೋಲೀಸ್ ಘಟಕಗಳಲ್ಲಿ ಮತ್ತು ಚೈಲ್ಡ್ ಲೈನ್‌ಗಳಲ್ಲಿ ಕೆಲಸ ಮಾಡುವ ಸಮಾಜ ಕಾರ್ಯಕರ್ತರು, ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಿಯೋಜಿಸಲಾದ ಕಾನೂನು ನೆರವು ಲಾಯರುಗಳು, ಮಹಾರಾಷ್ಟ್ರ ಸರಕಾರದಿಂದ ನಿಯೋಜಿಸಲ್ಪಟ್ಟ ಒಬ್ಬ ಪ್ರೊಬೆಷನ್ ಅಧಿಕಾರಿ, ತಳಮಟ್ಟದ ಕಾರ್ಯಕರ್ತರು, ಪೋಲೀಸ್ ಇಲಾಖೆಯ ಪ್ರತಿನಿಧಿಗಳು, ಒಡಿಶಾ, ಅಸ್ಸಾಮ್, ಪಶ್ಚಿಮ ಬಂಗಾಳ ಮತ್ತು ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್‌ನ ಕಾನೂನು ಶಿಕ್ಷಕರು, ವಿವಿಧ ರಾಜ್ಯಗಳಲ್ಲಿನ ಯುನಿಸೆಫ್ ಕಛೇರಿಗಳಲ್ಲಿರುವ ಮಕ್ಕಳ ರಕ್ಷಣಾಧಿಕಾರಿಗಳು ಕಾರ್ಯಶಿಬಿರದಲ್ಲಿ ಭಾಗವಸಿದ್ದರು.

ವೃತ್ತಿಪರ ಉದ್ದೇಶಿತ ಗುಂಪಿನ ಲೆಕ್ಕದಲ್ಲಿ – ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾಗಿರುವ ಮಕ್ಕಳೊಂದಿಗೆ ಅಥವಾ ದೌರ್ಜನ್ಯಕ್ಕೆ ಒಳಗಾದ ಮಕ್ಕಳೊಂದಿಗೆ ಕೆಲಸ ಮಾಡುವ ಕಾರ್ಯಕರ್ತರು ಭಾಗಿಗಳಾಗಿದ್ದರು.

## ರಾಜ್ಯ ಮಟ್ಟದ ಲೀಗಲ್ ಏಡ್ ಲಾಯರ್‌ಗಳಿಗೆ ಸಾಮರ್ಥ್ಯ ಅಭಿವೃದ್ಧಿ ಕಾರ್ಯಗಾರ

ಕಾನೂನು ಸೇವೆಗಳ ಪ್ರಾಧಿಕಾರದ ಸಂಯೋಗದೊಂದಿಗೆ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯಲ್ಲಿ 5 ಮತ್ತು 6 ನವೆಂಬರ್ 2016 ರಂದು ರಾಜ್ಯ ಮಟ್ಟದ ಲೀಗಲ್ ಏಡ್ ಲಾಯರ್‌ಗಳಿಗೆ ಹಮ್ಮಿಕೊಳ್ಳಲಾಯಿತು. ಈ ಕಾರ್ಯಗಾರದಲ್ಲಿ ನ್ಯಾಯಮೂರ್ತಿಗಳಾದ ಜಯಂತ್ ಎಂ ಪಟೇಲ್ ಅವರು ಉದ್ಘಾಟನಾ ಭಾಷಣ ಮಾಡಿದರು. ಈ ಕಾರ್ಯಗಾರದಲ್ಲಿ ಪ್ರೋ. (ಡಾ). ಎಲಿಜಬತ್, ಸಂಯೋಜಕರು, ಮಗು ಮತ್ತು ಕಾನೂನು ಕೇಂದ್ರ. ಇವರು ಸ್ವಾಗತವನ್ನು ಕೋರಿದರು. ಈ ಕಾರ್ಯಗಾರದಲ್ಲಿ ಬಾಲ ನ್ಯಾಯ ಮಂಡಳಿಯನ್ನು ಪ್ರತಿನಿಧಿಸುವ 30 ಜನ ಲೀಗಲ್ ಏಡ್ ಲಾಯರ್‌ಗಳು ಭಾಗವಹಿಸಿದ್ದರು.

ಇದೇ ರೀತಿಯ ಕಾರ್ಯಗಾರವನ್ನು ಮಧ್ಯಪ್ರದೇಶದಲ್ಲಿ 19 –20 ನವೆಂಬರ್ 2016ರಲ್ಲಿ ರಾಜ್ಯಮಟ್ಟದ ಕಾರ್ಯಗಾರವನ್ನು ಹಮ್ಮಿಕೊಂಡಿದ್ದು 34 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ನ್ಯಾಷನಲ್ ಲಾ ಯುನಿವರ್ಸಿಟಿಗಳ ಪ್ರತಿನಿಧಿಗಳ ಭೇಟಿ

ಇತರ ವಿಶ್ವವಿದ್ಯಾಯಲಗಳಲ್ಲಿ ಸಿಸಿಎಲ್ "ಮಕ್ಕಳ ಹಕ್ಕುಗಳ ಕಾನೂನುಗಳ ಕುರಿತು ಇರುವ ಸಂಶೋಧನಾ ಕೇಂದ್ರಗಳನ್ನು ಸಾಂಸ್ಥೀಕರಿಸುವುದು ಮತ್ತು ಉತ್ತೇಜಿಸುವ" ಚಟುವಟಿಕೆಯ ಅಂಗವಾಗಿ 2015ರಲ್ಲಿ ಬಿಹಾರದ ಚಾಣ್ಯಕ್ಯ ನ್ಯಾಷನಲ್ ಯುನಿವರ್ಸಿಟಿ(ಆಗಸ್ಟ್ 4), ಅಸ್ಸಾಮ್‌ನ ನ್ಯಾಷನಲ ಲಾ ಯುನಿವರ್ಸಿಟಿ ಅಂಡ್ ಜುಡಿಶಿಯಲ್ ಅಕ್ಯಾಡಮಿ(ಅಕ್ಟೋಬರ್ 16) ಮತ್ತು ಗುಜರಾತ್ ನ್ಯಾಷನಲ್ ಲಾ ಯುನಿವರ್ಸಿಟಿ (ಡಿಸೆಂಬರ್ 21) ಪ್ರತಿನಿಧಿಗಳು ಕೇಂದ್ರಕ್ಕೆ ಭೇಟಿ ನೀಡಿದರು. ಸಿಸಿಎಲ್‌ನೊಂದಿಗೆ ಸಹಯೋಗದ ಮತ್ತು ತಮ್ಮ ವಿಶ್ವವಿದ್ಯಾಲಯಗಳಲ್ಲಿ ಮಕ್ಕಳ ಹಕ್ಕುಗಳ ಕೇಂದ್ರಗಳನ್ನು ಸ್ಥಾಪಿಸುವ ಸಾಧ್ಯತೆ ಕುರಿತು ಪರಿಶೀಲಿಸುವುದು ಭೇಟಿಗಳ ಉದ್ದೇಶವಾಗಿತ್ತು.

# ಸಮಾನ ಗುಣಮಟ್ಟದ ಶಾಲಾ ಶಿಕ್ಷಣ ಸಾರ್ವತ್ರೀಕರಣ ಕಾರ್ಯಕ್ರಮಗಳ ವರದಿ

## ಸರ್ಕಾರಿ ಶಾಲೆಗಳ ಸಬಲೀಕರಣ

### ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ದಾಖಲಾತಿ ಆಂದೋಲನ.

ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಿ, ಸರ್ಕಾರಿ ಶಾಲೆಗಳನ್ನು ಸಬಲೀಕರಣಗೊಳಿಸುವ ಭಾಗವಾಗಿ ಪ್ರಚಾರಾಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. 26/03/ 2016 ರಂದು ಮಾಗಡಿ ತಾಲ್ಲೂಕಿನಲ್ಲಿ ಬೈಕ್ ರ್‍ಯಾಲಿಯನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ. ಸದಸ್ಯರು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು, ಬಿಸಿಯೂಟ ಕಾರ್ಯಕರ್ತೆಯರ ಸಂಘಟನೆಯ ಪದಾಧಿಕಾರಿಗಳು ಮತ್ತು ಕಾಲೇಜು ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು. ರಾಮನಗರ ಜಿಲ್ಲಾ ಎಸ್.ಡಿ.ಎಂ.ಸಿ ಸಮನ್ವಯ ವೇದಿಕೆಯು ದಿನಾಂಕ 28/6/2016 ರಂದು ಜಿಲ್ಲಾ ಮಟ್ಟದ ಶೈಕ್ಷಣಿಕ ಸಮಾವೇಶ ಹಾಗೂ ಬೈಕ್ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಬೈಕ್ ರ್‍ಯಾಲಿಯು ಬಿಡದಿಯಿಂದ ಆರಂಭವಾಗಿ ರಾಮನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮುಕ್ತಾಯವಾಯಿತು. ತಹಸೀಲ್ದಾರವರಿಗೆ ಬೇಡಿಕೆ ಪತ್ರವನ್ನು ಸಲ್ಲಿಸಲಾಯಿತು. ಅಂಬೇಡ್ಕರ್ ಭವನದಲ್ಲಿ ನಡೆದ ಶೈಕ್ಷಣಿಕ ಸಮಾವೇಶವನ್ನು ಡಾ॥ ನಿರಂಜನಾರಾಧ್ಯ ರವರು ಉದ್ಘಾಟಿಸಿದರು, ರೈತಸಂಘ, ಬಿಸಿಯೂಟ ಕಾರ್ಯಕರ್ತೆಯರ ಸಂಘಟನೆ, ಕನ್ನಡಪರ ಸಂಘಟನೆಗಳು, ಶಿಕ್ಷಕರ ಸಂಘದ ಪದಾಧಿಕಾರಿಗಳು, ಎಸ್.ಡಿ.ಎಂ.ಸಿ. ಸದಸ್ಯರು ಸೇರಿದಂತೆ ಒಟ್ಟು–300 ಜನ ಭಾಗವಹಿಸಿದ್ದರು.

## ಗುಣಾತ್ಮಕ ಕಲಿಕೆ

### 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಬನ್ನಿಕುಪ್ಪೆ (ಬಿ) ಪಂಚಾಯ್ತಿ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಭಾಗವಾಗಿ ಇಂಗ್ಲಿಷ್ ಕಲಿಕೆ'.

ಆಂಗ್ಲ ಭಾಷೆಯ ವ್ಯಾಮೋಹದಿಂದ ತಮ್ಮ ಮಕ್ಕಳನ್ನು ಕಾನ್ವೆಂಟ್‌ಗೆ ಕಳುಹಿಸುತ್ತಿರುವ ಪೋಷಕರ ಗಮನ ಸೆಳೆದು ಅಂಗನವಾಡಿಗಳಲ್ಲಿಯೇ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಪೂರಕವಾಗಿ ಇಂಗ್ಲೀಷ್ ಕಲಿಸಲು ಸಮಗ್ರ ಪಠ್ಯಕ್ರಮ ರೂಪಿಸಲಾಗಿದೆ. ಪ್ರತಿ ಎರಡನೇ ಶನಿವಾರ ನುರಿತ ಇಂಗ್ಲೀಷ್ ಶಿಕ್ಷಕರಿಂದ ಅಂಗನವಾಡಿಯ ಎಲ್ಲಾ 16 ಜನ ಅಂಗನವಾಡಿ ಶಿಕ್ಷಕರಿಗೆ ನಿರಂತರ ತರಬೇತಿಯನ್ನು ಆಯೋಜಿಸಲಾಗಿತ್ತು. ಅಂಗನವಾಡಿಯ ಕಾರ್ಯಕರ್ತೆಯರಿಗೆ ಇಂಗ್ಲೀಷ್ ಕಲಿಸುವ ಪ್ರಾವೀಣ್ಯತೆ ವೃದ್ಧಿಸುವುದು ಈ ತರಬೇತಿಯ ಉದ್ದೇಶವಾಗಿತ್ತು.ರೈಮ್ಸ್, ಅಕ್ಷರಗಳು ಹಾಗೂ ಪರಿಸರ ಅಧ್ಯಯನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರತಿ ಅಂಗನವಾಡಿಗೂ ನೀಡಲಾಯಿತು.ಅಂಗನವಾಡಿ ಕಾರ್ಯಕರ್ತೆಯರು ಈ ತರಬೇತಿಯಿಂದ ಉತ್ಸಾಹಭರಿತರಾಗಿದ್ದು, ಮಕ್ಕಳಿಗೆ ಇಂಗ್ಲೀಷ್ ಭಾಷೆಯನ್ನು ಉತ್ತಮವಾಗಿ ಕಲಿಸುತ್ತಿದ್ದಾರೆ.

## ಸಮುದಾಯದ ಸಹಕಾರದೊಂದಿಗೆ ಶಾಲಾ ಶಿಕ್ಷಣದ ಗುಣಾತ್ಮಕತೆ ತರಲು 'ನನ್ನ ಜಾಗ ನನ್ನ ಕಲಿಕೆ' ಕೇಂದ್ರಗಳು.



ಬನ್ನಿಕುಪ್ಪೆ (ಬಿ) ಪಂಚಾಯಿತಿ ಮಟ್ಟದ ಗ್ರಾಮಗಳಲ್ಲಿ **'ನನ್ನ ಜಾಗ ನನ್ನ ಕಲಿಕೆ'**ಎಂಬ 6 ಕೇಂದ್ರವನ್ನು ಆರಂಭ ಮಾಡಲಾಗಿದೆ. ಈ ಕೇಂದ್ರದಲ್ಲಿ ಒಟ್ಟು 185 ಮಕ್ಕಳು (ಗಂಡು 88, ಹೆಣ್ಣು 97 ) ಕಲಿಕೆಯನ್ನು ಮಾಡುತ್ತಿದ್ದಾರೆ. ಉಳ್ಳವರು, ಸಿರಿವಂತರ ಮಕ್ಕಳು ಶಾಲೆಯ ನಂತರ ಕಲಿಕೆಯ ಮುಂದುವರಿದ ಭಾಗವಾಗಿ ಖಾಸಗಿ ಪಾಠಕ್ಕೆ ಹೋಗುವ ಪರಿಪಾಠವನ್ನು ಮಾಡಿಕೊಂಡಿದ್ದಾರೆ. ಆದರೆ ನಮ್ಮ ಹಳ್ಳಿಗಳ ಬಡ, ಕೆಳ ಮಧ್ಯಮ ಹಾಗೂ ಅವಕಾಶವಂಚಿತ ಸಮುದಾಯಕ್ಕೆ ಸೇರಿದ ಮಕ್ಕಳಿಗೆ ಶಾಲೆಯ ನಂತರ ಮನೆಯಲ್ಲಿ ಕಲಿಯಲು ಸೂಕ್ತ ವಾತವರಣ ಮತ್ತು ಅಗತ್ಯ ಸೌಲಭ್ಯಗಳಿಲ್ಲದೆ ಹಿಂದುಳಿದಿದ್ದಾರೆ.ಅಂಥಹ ಮಕ್ಕಳ ಕಲಿಕೆಗೆ ಅನೂಕೂಲವಾಗಲೆಂದು ಸಂಜೆಯ ಸಮಯದಲ್ಲಿ 6 ರಿಂದ 8 ಗಂಟೆಯವರಗೆ ಸಮುದಾಯ ಕಲಿಕಾ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಈ ಕಲಿಕಾ ಕೇಂದ್ರದಲ್ಲಿ ಮಕ್ಕಳು ಶಾಲೆಯಲ್ಲಿ ಕಲಿತ ವಿಷಯವನ್ನು ಪುನರ್ ಮನನ ಮಾಡಲು ಸಹಾಯಕವಾಗಿರುತ್ತದೆ ಹಾಗು ಮಕ್ಕಳ ಕಲಿಕೆಯನ್ನು ಹೆಚ್ಚಿಸಲು ನೆರವಾಗಿದೆ .

CCL 20 Years

## ಗುಣಾತ್ಮಕ ಶಿಕ್ಷಣಕ್ಕೆ ಗುಚ್ಛ ಸಂಪನ್ಮೂಲ ಕೇಂದ್ರದಲ್ಲಿ ಶಿಕ್ಷಕರಿಗೆ ಮಾಸಿಕ ಸಭೆಗಳು.



ಶಿಕ್ಷಕರ ಅಗತ್ಯಗಳ ಅಧ್ಯಯನದ ಆಧಾರದ ಮೇಲೆ ಗುಚ್ಛ ಸಂಪನ್ಮೂಲ ಕೇಂದ್ರಗಳಲ್ಲಿ ಪ್ರಾಥಮಿಕ ಶಿಕ್ಷಕರಿಗೆ ತರಬೇತಿಯನ್ನು ಆಯೋಜಿಸಲಾಗಿತ್ತು. ಮಾದರಿ ಗುಚ್ಛ ಸಂಪನ್ಮೂಲ (ಸಿ ಆರ್ ಸಿ) ಕೇಂದ್ರದ ತಿಳುವಳಿಕೆಯನ್ನು ಶ್ರೀ ಪ್ರಶಾಂತಬಾಬು ರವರು ದಿನಾಂಕ :1–08–2015 ರಂದು ವಿವರವಾಗಿ ತಿಳಿಸಿದರು. ದಿನಾಂಕ : 21–11–2015 ರಂದು ಶ್ರೀ ಅಬ್ದುಲ್ ರೆಹಮಾನ್ ಪಾಷ ರವರು ವೈಚಾರಿಕ ಮನೋಭಾವನೆ : ಶಿಕ್ಷಕರ ಪಾತ್ರ ಎಂಬ ವಿಷಯದ ಬಗ್ಗೆ ತಿಳುವಳಿಕೆ ನೀಡಿದರು. ದಿನಾಂಕ : 05–12–2015 ರಂದು ಡಾ॥ ಕೆ ಸಿ ರಘು ರವರು "ಮಕ್ಕಳಿಗೆ ಹೇಗೆ ಪೌಷ್ಟಿಕ ಆಹಾರದ ವಿಷಯದ ಕುರಿತು ಬೋಧನೆ ಮಾಡುವುದು" ಎಂಬುವುದರ ಬಗ್ಗೆ ತರಬೇತಿ ನೀಡಿದರು. ದಿನಾಂಕ : 23–12–2015 ರಂದು ಸಿ ಆರ್ ಪಿ ರಂಗನಾಥ್ ರವರು ಗಣಿತ ವಿಷಯವನ್ನು ಬೋಧಿಸುವುದು ಹೇಗೆ ಎಂಬ ವಿಷಯದ ಬಗ್ಗೆ ತಿಳಿಯಪಡಿಸಿದರು. ಪ್ರತಿಯೊಂದು ಸಭೆಯಲ್ಲೂ ಸುಮಾರು 30 ಜನ ಶಿಕ್ಷಕರು ಭಾಗವಹಿಸಿದರು. ವಿದ್ಯಾಂಕುರ ಯೋಜನೆಯಲ್ಲಿ ಕೆಲಸದ ಅನುಭವವಿರುವ ಶ್ರೀ ಪ್ರಶಾಂತ್‌ಬಾಬುರವರ ಮಾರ್ಗದರ್ಶನದಲ್ಲಿ ಭೋಧನಾ ಕಲಿಕಾ ಉಪಕರಣಗಳನ್ನು ತಯಾರಿಸುವ ಬಗ್ಗೆ ತರಬೇತಿಯನ್ನು ನೀಡಿದರು. ಈ ಮೂರು ತರಬೇತಿಗಳು ಕ್ರಮವಾಗಿ ದಿನಾಂಕ : 09–01–2016, ದಿನಾಂಕ : 23–01–2016 ಹಾಗೂ 23–03–2016 ರಂದು ನಡೆದವು. ಈ ತರಬೇತಿಗಳು ಶಿಕ್ಷಕರು ಸುಲಭವಾಗಿ ಬೋಧನಾ ಕಲಿಕಾ ಉಪಕರಣ ತಯಾರಿಸಲು ಸಹಾಕಾರಿಯಾಯಿತು.

## ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮತ್ತು ರಕ್ಷಣೆ

### ಮಕ್ಕಳ ವಿಶೇಷ ಗ್ರಾಮ ಸಭೆ

ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ದಿನಾಂಕ 18/03/2016 ರಂದು ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ಏರ್ಪಡಿಸಲಾಗಿತ್ತು. ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ನೇತ್ರಾವತಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶಿಕ್ಷಣ ತಜ್ಞರಾದ ಡಾ॥ ನಿರಂಜನಾರಾಧ್ಯರವರು ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ನಡೆಸುವ ಉದ್ದೇಶಗಳ ಕುರಿತು ತಮ್ಮ ಪ್ರಾಸ್ತವಿಕ ನುಡಿಗಳಲ್ಲಿ ವಿವರವಾಗಿ ತಿಳಿಸಿದರು. ಮಗು ಮತ್ತು ಕಾನೂನು ಕೇಂದ್ರ ತಯಾರಿಸಿದ ಹಳ್ಳಿಗಳ ಮಟ್ಟದ ಗ್ರಾಮಸಭೆಯ ಸಾಕ್ಷ್ಯ ಚಿತ್ರವನ್ನು ತೋರಿಸಲಾಯಿತು. ನಂತರ ಪ್ರತಿಶಾಲೆಯಿಂದ ಒಂದು ಮಗುವಿಗೆ ಶಾಲಾ ಸಮಸ್ಯೆಗಳ ಬಗ್ಗೆ ಮಾತನಾಡಲು ಅವಕಾಶ ನೀಡಲಾಯಿತು. ಪ್ರಮುಖವಾಗಿ ಶಿಥಿಲಗೊಂಡ ಶಾಲಾ ಕಟ್ಟಡಗಳು, ಚರಂಡಿಯಲ್ಲಿ ಹೂಳು ತುಂಬಿರುವುದು, ಆಟದ ಮೈದಾನದ ಕೊರತೆ, ಶೌಚಾಲಯಕ್ಕೆ ಸಮರ್ಪಕ ನೀರಿನ ವ್ಯವಸ್ಥೆ ಇಲ್ಲದಿರುವುದು ಇತ್ಯಾದಿ ಸಮಸ್ಯೆಗಳ ಬಗ್ಗೆ ಮಕ್ಕಳು ಬೆಳಕು ಚೆಲ್ಲಿದರು. ಕಾರ್ಯಕ್ರಮದಲ್ಲಿ ರಾಮನಗರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಶ್ರೀ ಶಿವರಾಮೇಗೌಡರನ್ನೊಳಗೊಂಡಂತೆ, ಅಂಗನವಾಡಿ ಶಿಕ್ಷಕರು, ಶಾಲಾ ಶಿಕ್ಷಕರು, ಗ್ರಾಮ ಪಂಚಾಯಿತಿ ಸದಸ್ಯರು, ನಾಗರೀಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

## ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಮಕ್ಕಳ ಕಾವಲು ಸಮಿತಿ.

ಮಕ್ಕಳ ಹಕ್ಕುಗಳ ಉಲ್ಲಂಘಿಸದಂತೆ ಉಸ್ತುವಾರಿ ಮಾಡಲು **'ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ'** ವನ್ನು ರಚಿಸಲಾಗಿದೆ. ಮಕ್ಕಳಿಗೆ ಈ ಬಗ್ಗೆ ಜಾಗೃತಿ ಮೂಡಿಸಲು ಬನ್ನಿಕುಪ್ಪೆ (ಬಿ) ಪಂಚಾಯಿತಿ ಮಟ್ಟದ ಮಕ್ಕಳ ಕಾವಲು ಸಮಿತಿಯ 6 ಸಭೆಗಳು ನಡೆದವು. ಪ್ರತಿ ಸಭೆಯಲ್ಲಿ 26 ಗ್ರಾಮಗಳಿಂದ ಆಯ್ದ 26 ಮಕ್ಕಳು ಭಾಗವಹಿಸಿದ್ದರು. ಈ ಸಭೆಗಳಲ್ಲಿ ಮುಖ್ಯವಾಗಿ ಮಕ್ಕಳ ಹಕ್ಕುಗಳ ಉಲ್ಲಂಘನೆ, ಮಕ್ಕಳ ಮೇಲಿನ ದೈಹಿಕ ಮತ್ತು ಮಾನಸಿಕ ಶಿಕ್ಷೆ , ಶಾಲೆಗಳ ಸ್ಥಿತಿಗತಿ ಮತ್ತು ಮೂಲಭೂತ ಸೌಕರ್ಯಗಳು, ಅಂಗನವಾಡಿ ಸ್ಥಿತಿಗತಿ ಹಾಗು ಮೂಲಭೂತ ಸೌಕರ್ಯಗಳು, ಆರ್‌ಟಿಇ ಅನುಷ್ಠಾನ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಮಕ್ಕಳ ಹಕ್ಕುಗಳ ಬಗ್ಗೆ ಶಾಲೆಯಲ್ಲಿನ ಕ್ರಿಯಾಶೀಲ ಮಕ್ಕಳನ್ನು ಆಯ್ಕೆ ಮಾಡಿ ಅವರಿಗೆ ಕಾನೂನು ಅರಿವು, ಮಕ್ಕಳ ಹಕ್ಕುಗಳು , ಮಕ್ಕಳ ಸಿಗಬೇಕಾದ ವಿಶೇಷ ಸೌಲಭ್ಯಗಳು, ಮಕ್ಕಳ ಗ್ರಾಮ ಸಭೆ ಮಾಡುವ ವಿಧಾನಗಳನ್ನು ತೋರಿಸಿಕೊಡಲಾಯಿತು. ಮಕ್ಕಳ ಕಾವಲು ಸಮಿತಿಯ ಸದಸ್ಯರುಗಳಿಗೆ ಅರಿವನ್ನು ಮೂಡಿಸುವ ಕಾರ್ಯಕ್ರಮದ ಭಾಗವಾಗಿ ದಿನಾಂಕ 19/09/2015 ರಂದು **"ಮಕ್ಕಳ ರಕ್ಷಣೆ ಮತ್ತು ಮಕ್ಕಳ ಸಹಾಯವಾಣಿ"** ಬಗ್ಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕುಮಾರಿ॥ ಸವಿತ ರವರು ತರಬೇತಿ ನೀಡಿದರು. ದಿನಾಂಕ 16–12–2015 ರಂದು ರಾಮನಗರ ಜಿಲ್ಲಾ ಆಸ್ಪತ್ರೆಯ ಹಿರಿಯ ಶುಶ್ರೂಷಕಿಯಾದ ಶ್ರೀಮತಿ ಮಧುಶ್ರೀ.ಎ.ಪಿ. ರವರು ಮಕ್ಕಳಿಗೆ **"ಆರೋಗ್ಯ ಮತ್ತು ಶುಚಿತ್ವದ."** ಬಗ್ಗೆ ತಿಳಿಸಿಕೊಟ್ಟರು. ದಿನಾಂಕ 30–01–2016 ರಂದು ಮಕ್ಕಳಿಗೆ ಭಾಗವಹಿಸುವಿಕೆ ಹಕ್ಕಿನ ಭಾಗವಾಗಿ ಆಟಗಳನ್ನು ಆಯೋಜಿಸಲಾಗಿತು. ದಿನಾಂಕ 11–06–2016 ರಂದು ಸ್ಪರ್ಶ ಸಂಸ್ಥೆಯಿಂದ ಶ್ರೀಯುತ ಮಂಜುನಾಥ ರವರು ಮಕ್ಕಳ ಹಕ್ಕುಗಳ ಭಾಗವಾಗಿ ಮುಖ್ಯವಾದ 4 ಹಕ್ಕುಗಳ **(ಬದುಕುವ ಹಕ್ಕು, ರಕ್ಷಣೆಯ ಹಕ್ಕು, ವಿಕಾಸ ಹೊಂದುವ ಹಕ್ಕು, ಭಾಗವಹಿಸುವಿಕೆಯ ಹಕ್ಕು)**ಬಗ್ಗೆ ತಿಳಿಸಿಕೊಟ್ಟರು. ದಿನಾಂಕ 10–09–2016 ರಂದು **"ಮಕ್ಕಳ ಗ್ರಾಮ ಸಭೆಯ"** ಪೂರಕವಾಗಿ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು.



## ಶಿಕ್ಷಣ ಕುರಿತಂತೆ ವಿಸ್ತೃತ ಸಾರ್ವಜನಿಕ ಚರ್ಚೆ

### ಶಿಕ್ಷಣ ಹಕ್ಕು ಕಾಯ್ದೆ ಪೂರಕವಾಗಿ ನೆಡೆದ ತ್ರೈಮಾಸಿಕ ಉಪನ್ಯಾಸ ಸರಣಿ ಕಾರ್ಯಕ್ರಮಗಳು.

ಮಗು ಮತ್ತು ಕಾನೂನು ಕೇಂದ್ರವು. ಶಿಕ್ಷಣ ಹಕ್ಕು ಕಾಯ್ದೆ ಪೂರಕವಾಗಿ ತ್ರೈಮಾಸಿಕ ಉಪನ್ಯಾಸ ಸರಣಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದೆ. ಈ ಅವಧಿಯಲ್ಲಿ ನಡೆದ ಉಪನ್ಯಾಸದ ವಿವರಗಳು ಈ ಕೆಳಕಂಡಂತಿವೆ

1. ದಿನಾಂಕ12–9–2015 ರಂದು "ಶಿಕ್ಷಣಕ್ಕಾಗಿ ಸಾವಿತ್ರಿ ಬಾ ಪುಲೆ ಯವರ ಕೊಡುಗೆಗಳು" ಎಂಬ ವಿಷಯದ ಬಗ್ಗೆ ಶ್ರೀಯುತ ಮಂಗಳೂರು ವಿಜಯ ಉಪನ್ಯಾಸ ಮಂಡಿಸಿದರು. ಕಾರ್ಯಕ್ರಮ ಬೆಂಗಳೂರಿನಲ್ಲಿ ಜರುಗಿತು
2. ದಿನಾಂಕ 28–11–2015 ರಂದು "ಹೆಣ್ಣು ಮಕ್ಕಳ ಶಿಕ್ಷಣ ; ಸವಾಲುಗಳು ಮತ್ತು ಸಾಧ್ಯತೆಗಳು" ಎಂಬ ವಿಷಯದ ಬಗ್ಗೆ ಪ್ರೊಫೆಸರ್ ಶ್ರೀಮತಿ ನೇತ್ರಾವತಿ ಗೌಡ ಉಪನ್ಯಾಸ ಮಂಡಿಸಿದರು. ಕಾರ್ಯಕ್ರಮ ರಾಮನಗರದಲ್ಲಿ ಜರುಗಿತು
3. ದಿನಾಂಕ 19–3–2016 ರಂದು "ಸರ್ವಾಂಗೀಣ ಬೆಳವಣಿಗೆಗಾಗಿ ಮಕ್ಕಳ ಮನೋವೃತ್ತಿ ; ಪೋಷಕರ ಪಾತ್ರ" ವಿಷಯವಾಗಿ ಅಭಿವೃದ್ಧಿ ಸಂವಹನ ತಜ್ಞರಾದ ಶ್ರೀ ಎಂ. ಅಬ್ದುಲ್ ರೆಹಮಾನ್ ಪಾಷ ಉಪನ್ಯಾಸ ನೀಡಿದರು. ಕಾರ್ಯಕ್ರಮ ಮಂಡ್ಯದಲ್ಲಿ ಜರುಗಿತು.
4. ದಿನಾಂಕ 30–4–2016 ರಂದು " ಶಿಕ್ಷಣ ಹಕ್ಕು ಕಾಯ್ದೆ ಮತ್ತು ಸಮಕಾಲೀನ ವಸ್ತು ಸ್ಥಿತಿ" ಎಂಬ ವಿಷಯದ ಬಗ್ಗೆ ಶ್ರೀ ಚಂದ್ರಗುತ್ತಿ ಯವರು ಉಪನ್ಯಾಸ ಮಂಡಿಸಿದರು. ಕಾರ್ಯಕ್ರಮ ಶಿವಮೊಗ್ಗದಲ್ಲಿ ಜರುಗಿತು.
5. ದಿನಾಂಕ 13–08–2016 ರಂದು "ಹೈದರಾಬಾದ್ ಕರ್ನಾಟಕದ ಶಾಲಾ ಶಿಕ್ಷಣದ ಸ್ಥಿತಿ–ಗತಿ" ಎಂಬ ವಿಷಯದ ಬಗ್ಗೆ ಪ್ರೊ.ಟಿ ಆರ್ ಚಂದ್ರಶೇಖರ್ ರವರು ಉಪನ್ಯಾಸ ಮಂಡಿಸಿದರು. ಕಾರ್ಯಕ್ರಮ ಬಳ್ಳಾರಿಯಲ್ಲಿ ಜರುಗಿತು

## ಶಿಕ್ಷಣ ಹಕ್ಕು ಸಂಬಂಧಿಸಿದಂತೆ ಸಂಶೋಧನಾ ಲೇಖನಗಳು

ಮಕ್ಕಳ ಶಿಕ್ಷಣದ ಹಕ್ಕನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಭಾರತ ಸರ್ಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ, 2009ನ್ನು ಜಾರಿಗೊಳಿಸಿದೆ. ಈ ಕಾಯ್ದೆಯು ಜಾರಿಗೆ ಬಂದು 6 ವರ್ಷಗಳು ತುಂಬಿದರೂ ಸಹ ಶಿಕ್ಷಣದ ಹಕ್ಕು ಇನ್ನೂ ಸರಿಯಾದ ರೀತಿಯಲ್ಲಿ ಸಾಕಾರಗೊಂಡಿಲ್ಲ. ಈ ಸವಾಲನ್ನು ಎದುರಿಸಲು, ಶಿಕ್ಷಣ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಎದುರಾಗುತ್ತಿರುವ ಅನೇಕ ರೀತಿಯ ಸಮಸ್ಯೆಗಳನ್ನು ಅರಿತು, ಅವುಗಳನ್ನು ನಿವಾರಿಸಲು ಕ್ರಮಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ, ಮಕ್ಕಳ ಶಿಕ್ಷಣದ ಹಕ್ಕನ್ನು ಸಾಕಾರಗೊಳಿಸಲು ಅಡ್ಡಿಯಾಗುತ್ತಿರುವ ಸಮಸ್ಯಗಳನ್ನು ಅರಿಯುವ ಪ್ರಯತ್ನವಾಗಿ, ಮಗು ಮತ್ತು ಕಾನೂನು ಕೇಂದ್ರವು ಹಲವಾರು ಸಂಶೋಧನೆಗಳನ್ನು ಕೈಗೊಂಡು, ಈ ಸಂಶೋಧನೆಗಳ ವರದಿಯನ್ನು ಸಣ್ಣ–ಸಣ್ಣ ಲೇಖನಗಳ ರೂಪದಲ್ಲಿ ಕೇಂದ್ರವು ಪ್ರಕಟಿಸಿದೆ. ಈ ರೀತಿಯಾಗಿ ಪ್ರಕಟಿಸಲಾದ ಸಂಶೋಧನಾ ಲೇಖನಗಳು ಕೆಳಕಂಡಂತಿವೆ:

1. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು
2. ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೊಳಿಸುವಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ
3. ಉತ್ತಮ ಗುಣಮಟ್ಟದ ಶಿಕ್ಷಣವನ್ನು ಸಾಕಾರಗೊಳಿಸುವಲ್ಲಿ ಶಿಕ್ಷಕರು ಎದುರಿಸುವ ಸಮಸ್ಯೆಗಳು

ಈ ಸಂಶೋಧನಾ ಲೇಖನಗಳು, ಮಕ್ಕಳ ಶಿಕ್ಷಣದ ಹಕ್ಕನ್ನು ಸಾಕಾರಗೊಳಿಸಲು ಅಡ್ಡಿಯಾಗುತ್ತಿರುವ ಸಮಸ್ಯಗಳನ್ನು ಅರಿಯುವುದರ ಜೊತೆಗೆ, ಈ ಕುರಿತು ಚರ್ಚೆಗಳನ್ನು ಹುಟ್ಟುಹಾಕುವ ಮತ್ತು ಈ ಮೂಲಕ ಪ್ರಾಯೋಗಿಕ ಪರಿಹಾರಗಳನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ಒಂದು ಪ್ರಯತ್ನವಾಗಿದೆ. ಇದರ ಜೊತೆ–ಜೊತೆಗೆ ಈ ಮೂಲಕ ಎಲ್ಲರಿಗೂ ಶಿಕ್ಷಣದ ಹಕ್ಕಿನ ಬಗ್ಗೆ ಅರಿವು ಮೂಡಿಸುವ ಯತ್ನವಾಗಿದೆ.

# ಚಿತ್ರ ಸುದ್ದಿಗಳು



ಮಡಿವಾಳದ ಪರಿವೀಕ್ಷಣಾಲಯದಲ್ಲಿ ನಡೆದ ಮಕ್ಕಳ ದಿನಾಚರಣೆ ಕಾರ್ಯಕ್ರಮ ದಿನಾಂಕ: 14.11.2016



ಬಾಲಕರ ಬಾಲಮಂದಿರದಲ್ಲಿ ನಡೆದ ಕೌನ್ಸಿಲರ್‌ಗಳ ತರಬೇತಿ ಕಾರ್ಯಗಾರ ದಿನಾಂಕ: 22.06.2016




ಮಗು ಮತ್ತು ಕಾನೂನು ಕೇಂದ್ರ ಮತ್ತು ಕಾನೂನು ಸೇವಾ ಪ್ರಾಧಿಕಾರದ ಸಹಯೋಗದಲ್ಲಿ ಬೆಂಗಳೂರಿನಲ್ಲಿ ನಡೆದ ವಕೀಲರ ಸಾಮರ್ಥ್ಯಭಿವೃದ್ಧಿ ಕಾರ್ಯಗಾರ ದಿನಾಂಕ: 06.11.2016



ಬಾಲನ್ಯಾಯ (ಪಾಲನೆ ಮತ್ತು ಸಂರಕ್ಷಣೆ) ಕಾಯ್ದೆ 2000ದ ಕುರಿತಂತೆ ಪ್ರಾದೇಶಿಕ ಹಂತದ 2ನೇ ದುಂಡುಮೇಜಿನ ಸಭೆ ದಿನಾಂಕ: 29.08.2015 ಪಾಟ್ನ



“ಭಾರತದಲ್ಲಿ ಆಹಾರ ಭದ್ರತೆ ಹಾಗೂ ಕಾನೂನು” ಕುರಿತಂತೆ ಹರ್ಷ ಮಂದಿರ್ ರವರಿಂದ ಸಾರ್ವಜನಿಕ ಉಪನ್ಯಾಸ ದಿನಾಂಕ: 10.12.2016



ಶಿಕ್ಷಣ ಹಕ್ಕು ಕುರಿತಂತೆ ಸಂಪನ್ಮೂಲ ಸಾಹಿತ್ಯ ಸಮಾವೇಶ





ಶಿಕ್ಷಣ ಹಕ್ಕು ಕಾಯ್ದೆ ಕುರಿತಂತೆ ಕಾನೂನು ಅರಿವು ಕಾರ್ಯಕ್ರಮ. ಸ್ಥಳ: ಅಬ್ದುಲ್‌ಭಾರಿ ಉರ್ದುಶಾಲೆ ಬೆಂಗಳೂರು ದಿನಾಂಕ: 10.08.2016



ಬೆಂಗಳೂರಿನ ಟ್ಯಾನಿ ರೋಡ್ ನಲ್ಲಿ ನಡೆದ ಅಹಾರದ ಹಕ್ಕು ಕುರಿತಂತೆ ನ್ಯಾಷನಲ್ ಲಾ ಸ್ಕೂಲ್ ವಿದ್ಯಾರ್ಥಿಗಳಿಂದ ಬೀದಿ ನಾಟಕ. ದಿನಾಂಕ: 9.11.2016



ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯ ಗುಲ್ಬರ್ಗ ವಿಭಾಗೀಯ ಮಟ್ಟದ ಸಭೆ, ರಾಯಚೂರು



ದಾಖಲಾತಿ ಆಂದೋಲನದ ಭಾಗವಾಗಿ ಮಾಗಡಿ ತಾಲ್ಲೂಕಿನ ಮೋಟಗೊಂಡನ ಹಳ್ಳಿ ಪಂಚಾಯತಿಯಿಂದ ಮಾಗಡಿಯವರೆಗೆ ಬೈಕ್ ರ‍್ಯಾಲಿ , ರಾಮನಗರ ಜಿಲ್ಲೆ



ರಾಮನಗರ ಜಿಲ್ಲಾ ಮಟ್ಟದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ ಸಮಾವೇಶದಲ್ಲಿ ನೆರೆದಿದ್ದ ಎಸ್ ಡಿ ಎಮ್ ಸಿ ಜನಸ್ತೋಮ



ತಮಟೆ ಬಾರಿಸುವ ಮೂಲಕ ರಾಜ್ಯ ಮಟ್ಟದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ ಕಾರ್ಯಕಾರಿ ಸಭೆ ಉದ್ಘಾಟನೆ, ಬೆಂಗಳೂರು

## ಮೂಲವಾರಸುದಾರರ ಸಾಮರ್ಥ್ಯಾಭಿವೃದ್ಧಿ

### ಚುನಾಯಿತ ಗ್ರಾಮ ಪಂಚಾಯತಿ ಸದಸ್ಯರಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಗಾರ

ನೂತನವಾಗಿ ಆಯ್ಕೆಯಾದ ಗ್ರಾಮ ಪಂಚಾಯ್ತಿಯ ಚುನಾಯಿತ ಪ್ರತಿನಿಧಿಗಳಗೆ ಅವರ ಕೆಲಸ ಹಾಗೂ ಜವಾಬ್ದಾರಿಗಳ ಬಗ್ಗೆ ತಿಳಿಯಪಡಿಸುವ ಸಲುವಾಗಿ ದಿನಾಂಕ:22/08/2015 ರಂದು ಒಂದು ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಎಸ್.ಐ.ಆರ್.ಡಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಯಾದ ಶ್ರೀ ವಿಲ್‌ಫ್ರೈಡ್ ಡಿಸೋಜರವರು ತರಬೇತಿ ನೀಡಿದರು, ಬಹುಮುಖ್ಯವಾಗಿ ಪಂಚಾಯ್ತಿಯ ಹಾಗೂ ಸರಕಾರಿ ಶಾಲೆಗಳ ನಡುವಿನ ಸಂಬಂಧ ಬಗ್ಗೆ ವಿಷದವಾಗಿ ತಿಳಿಸಿದರು ಮಧ್ಯಾಹ್ನದ ಅಧಿವೇಶನದಲ್ಲಿ ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರಾದ ಡಾ ನಿರಂಜನಾರಾಧ್ಯ.ವಿ.ಪಿ. ರವರು ಶಿಕ್ಷಣ ಹಕ್ಕು ಕಾಯ್ದೆಯಡಿಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯ್ತಿಯ ಕಾರ್ಯಗಳ ಬಗ್ಗೆ ಸುದೀರ್ಘವಾಗಿ ತರಬೇತಿ ನೀಡಿದರು. ಇದರ ಮುಂದುವರೆದ ಭಾಗವಾಗಿ, ಬನ್ನಿಕುಪ್ಪೆ ಗ್ರಾಮ ಪಂಚಾಯತಿ ಸದಸ್ಯರಿಗೆ 18 ಮತ್ತು 20 ಜೂನ್ 2016 ರಂದು ಕ್ಷೇತ್ರ ಕಲಿಕಾ ಭೇಟಿಯನ್ನು ಆಯೋಜಿಸಲಾಗಿತ್ತು, ಉಡುಪಿ ಜಿಲ್ಲೆಯ ಮರವಂತೆ ಪಂಚಾಯ್ತಿಗೆ ಕರೆದುಕೊಂಡು ಹೋಗಲಾಗಿತ್ತು, ಎಸ್. ಐ.ಆರ್.ಡಿ ಸಂಸ್ಥೆಯ ಶ್ರೀ ಜರ್ನಾಧನ್ ರವರು ಕಲಿಕಾ ಭೇಟಿಯನ್ನು ಸುಗಮಕಾರರಾಗಿ ಕೆಲಸ ಮಾಡಿದರು ಮರವಂತೆ ಪಂಚಾಯ್ತಿಯ ಸದಸ್ಯರೊಂದಿಗೆ ವಿಚಾರ ವಿನಿಮಯ ಮಾಡಿಕೊಂಡರು.



## ಮೂಲಭೂತ ಹಕ್ಕುಗಳ ನೆಲೆಯಲ್ಲಿ ಮಕ್ಕಳ ಅಭಿವೃದ್ಧಿ: ಒಂದು ವಾರದ ಬುನಾದಿ ತರಬೇತಿ

ಮಕ್ಕಳ ಹಕ್ಕುಗಳ ಜಾರಿಯ ಮೂಲಕ ಬದುಕುಳಿಯುವ, ಅಭಿವೃದ್ಧಿ ಹೊಂದುವ, ರಕ್ಷಣೆ ಪಡೆಯುವ ಮತ್ತು ಭಾಗವಹಿಸುವ ಹಕ್ಕುಗಳನ್ನು ಸಾಕಾರಗೊಳಿಸಲು ಒಗ್ಗೂಡಿ ಕೆಲಸ ನಿರ್ವಹಿಸುವ ಸಂಸ್ಕೃತಿಯನ್ನು ಬೆಳೆಸಿ ಪೋಷಿಸಿ ಅನುಷ್ಠಾನಗೊಳಿಸಬೇಕಾದರೆ ಕೆಳ ಹಂತದಲ್ಲಿ ಮಕ್ಕಳ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಇಲಾಖೆಗಳ ಸಿಬ್ಬಂದಿಗೆ ಅಗತ್ಯ ಸಾಮಾರ್ಥ್ಯಾಭಿವೃದ್ಧಿ ಮತ್ತು ಸಮಗ್ರ ತಿಳುವಳಿಕೆಯ ತುರ್ತು ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳ ನೆಲೆಯಲ್ಲಿ ಮಕ್ಕಳ ಅಭಿವೃದ್ಧಿಯನ್ನು ಕಾಣಲು ಒಂದು ವಾರದ ತರಬೇತಿಯನ್ನು ಪರಿಕಲ್ಪಿಸಲಾಯಿತು. ಸರ್ಕಾರಿ ಇಲಾಖೆಗಳಲ್ಲಿ ಮಕ್ಕಳಿಗಾಗಿ ಕೆಲಸ ಮಾಡುವಂತಹ ಅನೇಕ ಪದಾಧಿಕಾರಿಗಳಿಗೆ ಸಹಕಾರಿಯಾಗಲು ಮಗು ಮತ್ತು ಕಾನೂನು ಕೇಂದ್ರವು ಒಂದು ವಾರದ ಬುನಾದಿ ತರಬೇತಿಯನ್ನು 2016ರ ಆಗಸ್ಟ್ 21ರಿಂದ 27ರವರೆಗು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಕಾರದಲ್ಲಿ ಹಮ್ಮಿಕೊಂಡಿತು. ಮಕ್ಕಳೊಂದಿಗೆ ಕಾರ್ಯ ನಿರ್ವಹಿಸುವ 31 ಶಿಬಿರಾರ್ಥಿಗಳು 6 ಇಲಾಖೆಗಳಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಹಾಗು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಭಾಗವಹಿಸಿದ್ದರು. ಈ ತರಬೇತಿಯಲ್ಲಿ ಬಳಸಿಕೊಂಡ ಸ್ವ–ಕಲಿಕಾ ಪಠ್ಯವನ್ನು ಪರಿಣಿತರ ಮೂಲಕ ಬರೆಸಿ, ಅವರನ್ನೆ ತರಬೇತುದಾರರನ್ನಾಗಿ ಕರೆಯಲಾಗಿತ್ತು.

## ಎಸ್‌ಡಿಎಮ್‌ಸಿ ಸಮನ್ವಯ ವೇದಿಕೆಯ ಪದಾಧಿಕಾರಿಗಳಿಗೆ ಸಾಮಾರ್ಥ್ಯಾಭಿವೃದ್ಧಿ ಕಾರ್ಯಗಾರ

ನಾಲ್ಕು ತಾಲ್ಲೂಕಿನ ಪಂಚಾಯತಿಯ ಪದಾಧಿಕಾರಿಗಳಿಗೆ 2 ದಿನಗಳ ಸನಿವಾಸ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಎಸ್.ಡಿ.ಎಮ್.ಸಿ ರಚನೆ, ಪ್ರಕಾರ್ಯಗಳು, ಶಿಕ್ಷಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸರ್ಕಾರಗಳ ಪಾತ್ರ, ಎಸ್ ಡಿ ಎಮ್ ಸಿ ಸಮನ್ವಯ ವೇದಿಕೆಯ ರಚನೆ ಹಾಗೂ ಪ್ರಕಾರ್ಯಗಳ ಬಗ್ಗೆ ತಿಳಿಸಲಾಯಿತು. ಈ ತರಬೇತಿಯ ವಿವರಗಳು ಕೆಳಕಂಡಂತೆ ಇವೆ.

| ತಾಲ್ಲೂಕು | ದಿನಾಂಕ | ಸ್ಥಳ | ಸದಸ್ಯರ ಸಂಖ್ಯೆ |
|---|---|---|---|
| ಚನ್ನಪಟ್ಟಣ | 16 –17 ಜೂನ್ 2016 | ಜಾನಪದ ಲೋಕ | 30 |
| ಮಾಗಡಿ | 20 –21 ಜೂನ್ 2016 | ಶ್ರೀ ತಿರುಮೂರ್ತಿ ಗ್ರಾಮೀಣ ಅಭಿವೃದ್ಧಿ ಸೊಸೈಟಿ ಹಾರೋಹಳ್ಳಿ | 46 |
| ಕನಕಪುರ | 23 –24 ಜೂನ್ 2016 | | 25 |
| ರಾಮನಗರ | 30– 31 ಜೂನ್ 2016 | ಜಾನಪದ ಲೋಕ | 84 |
| | | ಒಟ್ಟು | **185** |

## ಉತ್ತಮ ಸಮನ್ವಯತೆಗಾಗಿ ಸಮನ್ವಯ ವೇದಿಕೆ

### ಬಾಲ ವಿಕಾಸ ಸಮಿತಿ ಸಮನ್ವಯ ವೇದಿಕೆ ಸಭೆ.





ಬನ್ನಿಕುಪ್ಪೆ (ಬಿ) ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ 16 ಅಂಗನವಾಡಿ ಕೇಂದ್ರದಲ್ಲಿನ ಬಾಲವಿಕಾಸ ಸಮಿತಿ ಸಮನ್ವಯ ವೇದಿಕೆಯ ಸಭೆಗಳು ಕ್ರಮವಾಗಿ ದಿನಾಂಕ 19/06/2015, 12/01/2016 ಹಾಗೂ 08/8/2016 ರಂದು ನಡೆಸಲಾಯಿತು. ಸಭೆಯಲ್ಲಿ ಸಮಿತಿ ಸದಸ್ಯರಿಗೆ ಬಾಲವಿಕಾಸ ಸಮಿತಿ ನಡೆದು ಬಂದ ದಾರಿ, ರಚನೆ, ಅಧ್ಯಕ್ಷರ ಹಾಗೂ ಕಾರ್ಯದರ್ಶಿ ಮತ್ತು ಸದಸ್ಯರ ಕರ್ತವ್ಯ ಮತ್ತು ಜವಬ್ದಾರಿ, ಗ್ರಾಮ ಪಂಚಾಯಿತಿ ಪಾತ್ರ ಹಾಗೂ ಸಮುದಾಯದ ಪಾತ್ರದಬಗ್ಗೆ ಸದಸ್ಯರಿಗೆ ತಿಳಿಸಿಕೊಡಲಾಯಿತು.ಸಭೆಯಲ್ಲಿ ಕೆಲವೊಂದು ಕ್ರಿಯಾತ್ಮಕ ಚಟುವಟಿಕೆಗಳನ್ನು ಮಾಡಿಸಲಾಯಿತು.ಪ್ರತಿಯೊಂದು ಅಂಗನವಾಡಿಯಿಂದ 2 ಜನ ಬಾಲವಿಕಾಸ ಸಮಿತಿ ಸಮನ್ವಯ ವೇದಿಕೆ ಸದಸ್ಯರು ಭಾಗವಹಿಸಿದ್ದರು.

## ಎಸ್.ಡಿ.ಎಂ.ಸಿ ಸಮನ್ವಯ ವೇದಿಕೆಯ ರಾಜ್ಯ ಮಟ್ಟದ ಸಭೆ

ರಾಜ್ಯ ಮಟ್ಟದಲ್ಲಿ ಎಸ್.ಡಿ.ಎಮ್.ಸಿ.ಸಿ ಎಫ್ ನ ಅರ್ಧವಾರ್ಷಿಕ ಸಭೆ:– 2015 ನೇ ಇಸವಿಯ 2 ನೇ ಅರ್ಧವಾರ್ಷಿಕ ಸಭೆಯು ದಿನಾಂಕ 13–12–2015 ರಂದು ಬೆಂಗಳೂರಿನ ಶಿಕ್ಷಕರ ಸದನದಲ್ಲಿ ನಡೆಯಿತು. ಡಾ ॥ ವಿ.ಪಿ ನಿರಂಜನಾರಾಧ್ಯ ರವರು ಪ್ರಾಸ್ತಾವಿಕವಾಗಿ ಮಾತಾನಾಡಿದರು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ॥ ಚಂದ್ರಶೇಖರ ಕಂಬಾರ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. 25 ಶೈಕ್ಷಣಿಕ ಜಿಲ್ಲೆಗಳಿಂದ ಒಟ್ಟು 86 ಜನ ಎಸ್.ಡಿ.ಎಮ್.ಸಿ.ಸಿ.ಎಫ್ ಪ್ರತಿನಿಧಿಗಳು ಭಾಗವಹಿಸಿದ್ದರು.

### ಪಾಕೇಟ್ ಕಾಲೆಂಡರ್

ಮಗು ಮತ್ತು ಕಾನೂನು ಕೇಂದ್ರವು ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಪ್ರಯತ್ನವಾಗಿ ಕಳೆದ ಎರಡು ವರ್ಷಗಳಿಂದ ಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕಿಸೆ ಕ್ಯಾಲಂಡರ್ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಇದರ ಭಾಗವಾಗಿ 2016ರಲ್ಲಿ ಕೇಂದ್ರವು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಬಗೆಗಿನ ಮಾಹಿತಿಗಳನ್ನು ಹೊಂದಿರುವ ಕಿಸೆ ಕ್ಯಾಲಂಡರ್‌ನ್ನು ಪ್ರಕಟಿಸಿದೆ.



## ಬನ್ನಿಕುಪ್ಪೆ (ಬಿ)ಗ್ರಾಮ ಪಂಚಾಯತಿ ಮಟ್ಟದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ವೇದಿಕೆ



ಭಾರತ ವಿಶ್ವ ವಿಧ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆಯು ಸಂಶೋಧನ ವಿಭಾಗವಾದ ಮಗು ಮತ್ತು ಕಾನೂನು ಕೇಂದ್ರವು ಗುಣಾತ್ಮಕ ಶಿಕ್ಷಣದ ಭಾಗವಾಗಿ ಸಮುದಾಯದ ಜೊತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಾ ಬಂದಿರುತ್ತದೆ. ಇದರ ಮುಂದುವರಿದ ಭಾಗವಾಗಿ ಶಾಲೆಗಳಲ್ಲಿ ಎಸ್‌ಡಿಎಮ್‌ಸಿ, ಶಿಕ್ಷಕರು ಹಾಗು ಸಮುದಾಯದ ಜೊತೆ ಕೆಲಸ ನಿರ್ವಹಿಸುತ್ತಾ ಬಂದಿರುತ್ತದೆ. ಇದರ ಮುಂದುವರಿದ ಭಾಗವಾಗಿ ಸರ್ಕಾರಿ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಪಂಚಾಯಿತಿ ಮಟ್ಟದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ವೇದಿಕೆಯನ್ನು ಪ್ರತಿ 3 ತಿಂಗಳಿಗೊಮ್ಮೆ ಸಭೆಯನ್ನು ಮಾಡಿ ಸರ್ಕಾರಿ ಶಾಲೆಗಳ ಸ್ಥಿತಿ-ಗತಿ ಬಗ್ಗೆ ಹಾಗು ಮಕ್ಕಳ ಕಲಿಕೆಯ ಬಗ್ಗೆ ಚರ್ಚಿಸಲಾಗುತ್ತದೆ. ಈ ಸಾಲಿನಲ್ಲಿ 21.09.2016 ರಂದು ಮತ್ತು 22.11.2016 ರಂದು 2 ಸಭೆಗಳನ್ನು ಮಾಡಲಾಗಿದೆ.

ಈ ಸಭೆಗೆ ಮುಖ್ಯವಾಗಿ ಪಂಚಾಯಿತಿ ವೇದಿಕೆ ಸದಸ್ಯರನ್ನು ಹಾಗು ಪ್ರತಿ ಶಾಲೆಯಿಂದ ಎಸ್ ಡಿ ಎಮ್ ಸಿ ಅಧ್ಯಕ್ಷರನ್ನು ಹಾಗು ಉಪಾಧ್ಯಾಕ್ಷರನ್ನು ಕರೆದು ಶಾಲಾ ಶಿಕ್ಷಣದ ಬಗ್ಗೆ ಹಾಗು ಎಸ್‌ಡಿಎಮ್‌ಸಿ ಸಮನ್ವಯ ವೇದಿಕೆಯನ್ನು ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಗಟ್ಟಿಗೊಳಿಸುವುದರ ಮೂಲಕ ಸರ್ಕಾರಿ ಶಾಲೆಗಳನ್ನು ಉಳಿಸಿ-ಬೆಳೆಸಿ-ನೆರೆಹೊರೆಯ ಸಮಾನ ಶಾಲೆಯಾಗಿ ಪರಿವರ್ತಿಸುವ ಬಗ್ಗೆ ರಾಜ್ಯಾದ್ಯಂತ ಕೆಲಸ ನಿರ್ವಹಿಸುತ್ತಿದೆ. ಸಮಿತಿಯ ಸದಸ್ಯರು ತಮ್ಮ ತಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ಹೇಳಿಕೊಳ್ಳಲು ಸೂಕ್ತ ವೇದಿಕೆ ಕಲ್ಪಿಸಿಕೊಡಲಾಗಿದೆ. ರಾಜ್ಯದಲ್ಲಿ ಎಸ್.ಡಿಎಮ್.ಸಿ ಯಶೋಗಾಥೆಗಳನ್ನು ದಾಖಲಿಸಿಕೊಳ್ಳುವುದು; ಸಮಾನ ಶಾಲಾ ಶಿಕ್ಷಣವನ್ನು ವ್ಯವಸ್ಥೆಯನ್ನು ಸಂಘಟಿತಗೊಳಿಸುವುದು; ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲವರ್ಧನೆಗೊಳಿಸಲು ಪೂರಕವಾಗಿ ಸಭೆ, ಸಮಾರಂಭ, ಸಂಕೀರ್ಣ, ಸಮಾವೇಶ ಇತ್ಯಾದಿಗಳನ್ನು ಆಯೋಜಿಸುವುದು; ಶಿಕ್ಷಣದ ವ್ಯಾಪರೀಕರಣ, ಖಾಸಗೀಕರಣ, ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಬಗ್ಗೆ ಚರ್ಚೆಗಳನ್ನು ರೂಪಿಸುವುದು; ಶಾಲಾ ಶಿಕ್ಷಣ ಕುರಿತಂತೆ ಸಂಶೋಧನಾ ಅಧ್ಯಯನ ಕೈಗೊಳ್ಳುವುದು; ಎಸ್.ಡಿ.ಎಮ್.ಸಿಯ ಕುಂದುಕೊರತೆಗಳನ್ನು ನಿವಾರಿಸಲು ಶಾಲೆ, ಪಂಚಾಯತಿ. ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಜಾಲಬಂಧ ಕಟ್ಟುವುದರಬಗ್ಗೆ ತಿಳಿಸಲಾಗುತ್ತಗೆ. ಜೊತೆಗೆ, ಭಾಗವಹಿಸಿದ ಎಲ್ಲಾ ಸದಸ್ಯರಿಗೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಉದ್ದೇಶ ಮತ್ತು ಕರ್ತವ್ಯಗಳನ್ನು ತಿಳಿಸಿಕೊಡುವುದರ ಮೂಲಕ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ತಮ್ಮ ತಮ್ಮ ಗ್ರಾಮದ ಶಾಲೆಯ ಅಭಿವೃದ್ಧಿಯ ಕಡೆ ಗಮನ ನೀಡಿ ಸರ್ಕಾರಿ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸುತ್ತವೆ.

## ರಾಜ್ಯದ ಜಿಲ್ಲೆಗಳಲ್ಲಿ ಎಸ್.ಡಿ.ಎಂ.ಸಿ ಸಮನ್ವಯ ವೇದಿಕೆ ರಚನೆ

ಜೂನ್ 2015ರಿಂದ ಡಿಸೆಂಬರ್ 2016 ರ ಅವಧಿಯಲ್ಲಿ ಶಿಕ್ಷಕರ ಸಂಘ, ಸಾಮಾಜಿಕ ಸಂಘಟನೆಗಳು ಹಾಗು ಎನ್.ಜಿ.ಓ.ಗಳ ಸಹಕಾರದೊಂದಿಗೆ ಉಡುಪಿ, ಮಂಡ್ಯ, ರಾಮನಗರ ದಾವಣಗೆರೆ ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಚಿತ್ರದುರ್ಗ, ಮೈಸೂರು, ಚಿಕ್ಕಮಗಳೂರು, ಹಾಸನ, ಬೆಂಗಳೂರು ಗ್ರಾಮಾಂತರ, ಚಿಕ್ಕೋಡಿ , ಬೆಳಗಾವಿ, ರಾಯಚೂರು ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಮನ್ವಯ ವೇದಿಕೆಗಳು ರಚನೆಯಾಗಿವೆ. ಶಿವಮೊಗ್ಗ, ಮಧುಗಿರಿ, ತುಮಕೂರು, ಕೋಲಾರ, ಕೊಡಗು, ಚಾಮರಾಜನಗರ, ಬಿಜಾಪುರ, ಬಾಗಲಕೋಟೆ, ಬೀದರ್, ಗುಲ್ಬರ್ಗಾ, ಗದಗ, ಕೊಪ್ಪಳ ಜಿಲ್ಲೆಗಳಲ್ಲಿ ಜಿಲ್ಲಾ ಸಮಿತಿಯ ರಚನೆಯ ಕಾರ್ಯ ಪ್ರಗತಿಯಲ್ಲಿದೆ. ಪ್ರತಿ ತಾಲ್ಲೂಕಿನಿಂದ ಇಬ್ಬರು ಎಸ್.ಡಿ.ಎಮ್.ಸಿ.ಸಿ.ಎಫ್ ಸದಸ್ಯರನ್ನು ಕರೆದು ವಿಭಾಗೀಯ ಮಟ್ಟದಲ್ಲಿ ಸಭೆಗಳನ್ನು ನೆಡೆಸಲಾಯಿತು. 2015 ರಲ್ಲಿ ನೆಡೆದ ವಿಭಾಗೀಯ ಮಟ್ಟದ ಸಭೆಗಳ ವಿವರ

| ವಿಭಾಗ | ದಿನಾಂಕ | ಭಾಗವಹಿಸಿದ ಸದಸ್ಯರು |
|---|---|---|
| **ಮೈಸೂರು** | 30-9-2015 | 90 |
| **ಧಾರವಾಡ** | 6-10-2015 | 150 |
| **ಬೆಂಗಳೂರು** | 25-11-2015 | 60 |
| **ರಾಯಚೂರು** | 5-12-2015 | 50 |

## ಎಸ್.ಡಿ.ಎಂ.ಸಿ ಸಮನ್ವಯ ವೇದಿಕೆಯ ವಿಭಾಗೀಯ ಮಟ್ಟದಲ್ಲಿ ಪ್ರತಿನಿಧಿಗಳ ಸಭೆ

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯ ಬೆಂಗಳೂರು ವಿಭಾಗ ಮಟ್ಟದ ಸಭೆಯು ದಿನಾಂಕ: 22.04.2016 ರಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಛೇರಿ, ಮಿಥಾಬಾಯಿ ಪಟೇಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗಾಂಧಿನಗರ ಬೆಂಗಳೂರು ಇಲ್ಲಿ ಯಶಸ್ವಿಯಾಗಿ ನಡೆಯಿತು. ಈ ಸಭೆಗೆ ಬೆಂಗಳೂರು ವಿಭಾಗದ 11 ಜಿಲ್ಲೆಗಳಿಂದ 43 ಸದಸ್ಯರು ಭಾಗವಹಿಸಿದ್ದರು. ಮಗು ಮತ್ತು ಕಾನೂನು ಕೇಂದ್ರ, ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ, ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರಾದ ಶ್ರೀಯುತ ಡಾ.ವಿ.ಪಿ.ನಿರಂಜನಾರಾಧ್ಯರವರು ಈ ಸಭೆಯ ಪ್ರಸ್ತಾವಿಕ ನುಡಿಯನ್ನು ನುಡಿದರು. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಅಯೋಗದ ಸದಸ್ಯರಾದ ಶ್ರೀಯುತ ಮರಿಸ್ವಾಮಿಯವರು ಈ ಸಭೆಯನ್ನು ಉದ್ಘಾಟಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಮಗು ಮತ್ತು ಕಾನೂನು ಕೇಂದ್ರ, ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆಯ ಸಂಯೋಜಕರಾದ ಪ್ರೊ.ವಿ.ಎಸ್.ಎಲಿಜಬೆತ್ ರವರು ವಹಿಸಿದ್ದರು. ಸಭೆಯಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯ ರಾಜ್ಯ ಉಪಾಧ್ಯಕ್ಷರಾದ ಶ್ರೀಯುತ ಶಂಭೂಗೌಡರು, ಸಂಘಟನಾ ಕಾರ್ಯಶಿಯವರಾದ ಶ್ರೀಯುತ ರುದ್ರನಾಯ್ಕ ರವರು, ಸಮಾಜ ಸೇವಕರಾದ ಶ್ರೀಯುತ ಗಂಗಾಧರ್ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಾಯಚೂರು ನಗರದ ನೃಪತುಂಗ ಹೋಟೆಲ್‌ನಲ್ಲಿ ಕಲಬುರಗಿ ವಿಭಾಗ ಮಟ್ಟದ ಎಸ್.ಡಿ.ಎಮ್.ಸಿ. ಸಮಾವೇಶವನ್ನು 26 ಜೂನ್ 2016 ರಂದು ಸಮಾವೇಶವನ್ನು ಮಗು ಮತ್ತು ಕಾನೂನು ಕೇಂದ್ರ ಭಾರತ ವಿಶ್ವವಿದ್ಯಾನಿಲಯ ರಾಷ್ಟ್ರೀಯ ಕಾನೂನು ಶಾಲೆ, ಕರ್ನಾಟಕ ರಾಜ್ಯ ಮೇಲುಸ್ತುವಾರಿ ಸಮಿತಿಯ ಸಮನ್ವಯ ವೇದಿಕೆ, ಡಯಟ್ ಯರಮರಸ್ ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿ ಇವರ ಸಹಕಾರದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಈ ಸಭೆಗೆ ಕಲಬುರಗಿ ವಿಭಾಗದ ಜಿಲ್ಲೆಗಳಿಂದ 83 ಸದಸ್ಯರು ಭಾಗವಹಿಸಿದ್ದರು.

### ಸಲಹಾ ಮಂಡಳಿ ಮತ್ತು ತಜ್ಞರ ಸಭೆ

ಮರುರಚನೆಯಾದ ಸಲಹಾ ಮಂಡಳಿಯ ಮೊದಲ ಸಭೆ 2016 ಜೂನ್ 27ರಂದು ನಡೆಯಿತು. ಸಂಯೋಜಕರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ NLSIU ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ.ಬಾಬು ಮಾಥ್ಯು ಮತ್ತು ನಿಮ್ಹಾನ್ಸ್ ಮಗು ಮತ್ತು ಕಿಶೋರ ಮನೋವೈದ್ಯಕೀಯ ವಿಭಾಗದ ಪ್ರಾಧ್ಯಾಪಕ ಡಾ.ಶೇಖರ್ ಪಿ ಶೇಷಾದ್ರಿ ಮತ್ತು ಸಿಸಿಎಲ್ ತಂಡದ ಸದಸ್ಯರು ಭಾಗವಹಿಸಿದರು. ಪೂರ್ವನಿಗದಿತ ಕಾರ್ಯದಿಂದಾಗಿ ಸಲಹಾ ಮಂಡಳಿಯ ಇತರ ಸದಸ್ಯರು ಸಭೆಯಲ್ಲಿ ಭಾಗವಹಿಸಲಿಲ್ಲ. ಸಭೆಯ ಕಾರ್ಯಸೂಚಿಯಲ್ಲಿ, ಕಳೆದ ಮೂರು ವರ್ಷಗಳಲ್ಲಿ ವಿವಿಧ ತಂಡಗಳು ಕೈಗೊಂಡ ಕೆಲಸಗಳ ಬಗ್ಗೆ ವರದಿ ಒಪ್ಪಿಸುವುದು; ಸಿಸಿಎಲ್ ಧ್ಯೇಯೋದ್ದೇಶ ಕರಡು ದಾಖಲೆಯ ಕುರಿತು ಚರ್ಚೆ, ಸಲಹಾ ಮಂಡಳಿ ಸದಸ್ಯರಿಂದ ವಿಮರ್ಶೆ ಮತ್ತು ಹಿಮ್ಮಾಹಿತಿ ಮತ್ತು ಮುನ್ನೋಟ ಇವು ಒಳಗೊಂಡಿದ್ದವು. ಸಂಯೋಜಕರು ಸಿಸಿಎಲ್ ಧ್ಯೇಯೋದ್ದೇಶ ಕರಡು ದಾಖಲೆಯನ್ನು ಮಂಡಿಸಿದರು; ಸಲಹಾ ಮಂಡಳಿಯ ಸದಸ್ಯರು ಹಲವು ಸಲಹೆ ನೀಡಿದರು, ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ನಮ್ಮ ಈ ಹಿಂದಿನ ಕೆಲಸಕಾರ್ಯಗಳು, ಇಂದಿನ ಅಗತ್ಯಗಳು, ಮುಂದಿನ ಹತ್ತು ವರ್ಷಗಳಿಗಾಗಿ ಯೋಜನೆ ಇವುಗಳನ್ನು ಒಳಗೊಂಡ ಧ್ಯೇಯದೃಷ್ಟಿಯನ್ನು ರೂಪಿಸುವ ಪ್ರಯತ್ನದ ಅಂಗವಾಗಿ ಮತ್ತು ಸಿಸಿಎಲ್ ತನ್ನ ಭವಿಷ್ಯದ ಯೋಜನೆಗಳನ್ನು ರೂಪಿಸಲು ನೆರವಾಗುವ ಉದ್ದೇಶದಿಂದ 2016 ಅಕ್ಟೋಬರ್ 7 ಮತ್ತು 8ರಂದು ತಜ್ಞರ ಸಮಾವೇಶವನ್ನು ಆಯೋಜಿಸಲಾಗಿತ್ತು. ಕಿಶೋರ ನ್ಯಾಯ, ಶಿಕ್ಷಣದ ಹಕ್ಕು ಮತ್ತು ಆಹಾರದ ಹಕ್ಕು ಮತ್ತು ಮಕ್ಕಳ ಹಕ್ಕುಗಳ ಸಂದರ್ಭದಲ್ಲಿ ಸಿಸಿಎಲ್ ಯಾವ ದಿಕ್ಕಿನಲ್ಲಿ ಮುನ್ನಡೆಯಬೇಕು ಎಂಬೆಲ್ಲಾ ವಿಚಾರವಾಗಿ ಸಲಹೆ ಸೂಚನೆ ನೀಡಲು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ದುಡಿದಿರುವ ತಜ್ಞರನ್ನು ಆಹ್ವಾನಿಸಲಾಯಿತು. ಸಿಸಿಎಲ್ ತಂಡವು ಈ ತಜ್ಞರೊಂದಿಗೆ ಅತ್ಯಂತ ಸಕ್ರಿಯವಾಗಿ ವಿಚಾರವಿನಿಮಯ ನಡೆಸಿತು; ಮತ್ತು ತಜ್ಞರು ಈ ಸಂದರ್ಭದಲ್ಲಿ ನೀಡಿದ ಉತ್ತಮ ಸಲಹೆಗಳನ್ನು ಧೇಯದೃಷ್ಟಿ ದಾಖಲೆಗೆ ಮುಂದಿನ ವರ್ಷ ಅಂತಿಮ ರೂಪ ನೀಡುವ ಹೊತ್ತಿನಲ್ಲಿ ಸೂಕ್ತವಾಗಿ ಅಳವಡಿಸಿಕೊಳ್ಳುವುದಾಗಿ ನಿರ್ಣಯಿಸಲಾಯಿತು.

ಸಲಹಾ ಮಂಡಳಿಯು 2016 ಅಕ್ಟೋಬರ್ 26ರಂದು ಮತ್ತೊಮ್ಮೆ ಸಭೆ ಸೇರಿತು. NLSIU ಉಪಕುಲಪತಿಗಳಾದ ಪ್ರೊ.ಡಾ.ಆರ್.ವೆಂಕಟರಾವ್, ಪ್ರೊ.ಬಾಬು ಮ್ಯಾಥ್ಯು, ಡಾ.ಶೇಖರ್ ಪಿ ಶೇಷಾದ್ರಿ, ಡಾ.ಶೋಭಾ ರಘುರಾಮ್ ಮತ್ತು ಪ್ರೊ.ಡಾ.ವಿ.ಎಸ್. ಎಲಿಝಬೆತ್ ಈ ಸಭೆಯಲ್ಲಿ ಭಾಗವಹಿಸಿದರು. ಸಂಯೋಜಕರು ತಜ್ಞರ ಸಭೆಯಲ್ಲಿ ಮೂಡಿಬಂದ ಸಲಹೆಗಳನ್ನು ಮಂಡಿಸಿದರು. ಕಾರ್ಯಕ್ರಮಗಳ ಮುಖ್ಯಸ್ಥರು ತಮ್ಮ ತಮ್ಮ ಕಾರ್ಯಕ್ರಮಗಳ ಕುರಿತು ತಜ್ಞರ ಸಭೆಯಲ್ಲಿ ಬಂದ ಸಲಹೆಗಳನ್ನು ಮಂಡಿಸಿದರು. ನಂತರ ಸಲಹಾ ಮಂಡಳಿಯ ಸದಸ್ಯರು ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತಿದರು, ತಮ್ಮ ಅಭಿಪ್ರಾಯಗಳನ್ನು, ಪ್ರತಿಕ್ರಿಯೆಗಳನ್ನು ಸೂಚಿಸಿದರು.



ಈ ಕಾರ್ಯಕ್ರಮದ ಉದ್ಘಾಟನೆಯನ್ನು ರಾಯಚೂರು ನಗರಸಭೆ ಅಧ್ಯಕ್ಷರು ಮತ್ತು ರಾಜ್ಯ ಎಸ್.ಡಿ.ಎಮ್.ಸಿ.ಸಿ.ಎಫ್. ಅಧ್ಯಕ್ಷರಾದ ಶ್ರೀ. ಜಯಣ್ಣ ನವರು ನೆರವೇರಿಸಿದರು. ಈ ಸಭೆಯ ಪ್ರಸ್ತಾವಿಕ ನುಡಿಯನ್ನು ಮಗು ಮತ್ತು ಕಾನೂನು ಕೇಂದ್ರ, ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ, ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರಾದ ಶ್ರೀಯುತ ಡಾ.ವಿ.ಪಿ.ನಿರಂಜನಾರಾಧ್ಯರವರು ನುಡಿದರು.ಈ ಸಭೆಯಲ್ಲಿ ಶ್ರೀ. ಎಮ್. ಮಲ್ಲಿಕಾರ್ಜುನಸ್ವಾಮಿ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ (ಅಭಿವೃದ್ದಿ) ಹಾಗೂ ಪ್ರಾಚಾರ್ಯರು, ಡಯಟ್ ಯರಮರಸ್, ರಾಯಚೂರು ಶ್ರೀ. ಗೌಳಿ ಕುಮಾರ್, ಶ್ರೀಮತಿ ಇಂದಿರಾ ಶಿಕ್ಷಣಾಧಿಕಾರಿಗಳು, ಶ್ರೀಮತಿ ವಿದ್ಯಾ ಪಾಟೀಲ್, ಶ್ರೀ. ತಿರುಮಲರೆಡ್ಡಿ, ಶ್ರೀ. ಮಲ್ಲಿಕಾರ್ಜುನ ಭಾಗವಹಿಸಿದ್ದರು.ಕಾರ್ಯಕ್ರಮದ ಪ್ರಸ್ತಾವಿಕೆಯನ್ನು ಶ್ರೀ. ಹಫೀಜುಲ್ಲಾ, ಭಾರತ ಜ್ಞಾನ ವಿಜ್ಞಾನ ಸಮಿತಿ, ರಾಯಚೂರು ಮಾತನಾಡಿದರು. ಶ್ರೀ. ಬಸಪ್ಪ ಗದ್ದಿ ಕಾರ್ಯಕ್ರಮವನ್ನು ನಿರೂಪಿಸಿದರು.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯ ಮಟ್ಟದ ಸಭೆಯು ದಿನಾಂಕ: 17.09.2016 ರಂದು ಕ್ಷೇತ್ರ ಸಮನ್ವಯಾಧಿಕಾರಿಗಳ ಕಛೇರಿ, ಸಮೂಹ ಸಂಪನ್ಮೂಲ ಕೇಂದ್ರ, ಡಯಟ್ ಕಾಲೇಜು ಆವರಣ, ಚಿಕ್ಕಮಗಳೂರು ಯಶಸ್ವಿಯಾಗಿ ನಡೆಯಿತು ಈ ಸಭೆಗೆ ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳಿಂದ 77 ಸದಸ್ಯರು ಭಾಗವಹಿಸಿದ್ದರು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ. ಬಸವರಾಜ ಗುರಿಕಾರ್ ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ. ಬೆಂಗಳೂರು ಇವರು ನೆರವೇರಿಸಿದರು. ಈ ಸಭೆಯ ಪ್ರಸ್ತಾವಿಕ ನುಡಿಯನ್ನು ಡಾ. ನಿರಂಜನಾರಾಧ್ಯ ವಿ. ಪಿ. ಫೆಲೋ ಹಾಗೂ ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರು, ಮಗು ಮತ್ತು ಕಾನೂನು ಕೇಂದ್ರ. ಇವರು ನುಡಿದರು. ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ. ದಿನೇಶ್ ಎಂ.ಎಂ ಸಂಘಟನಾ ಕಾರ್ಯದರ್ಶಿ, ಮೈಸೂರು ವಿಭಾಗ ಇವರು ವಹಿಸಿದ್ದರು ಈ ಸಭೆಯಲ್ಲಿ ಶ್ರೀಮತಿ ಶೋಭ ಭಾಸ್ಕರ್, ಕಾರ್ಯದರ್ಶಿ ಶ್ರೀಮತಿ ನಳಿನ ಕುಮಾರಿ, ಜಂಟಿ ಕಾರ್ಯದರ್ಶಿ, ಶ್ರೀ ಅಣ್ಣಯ್ಯ, ಸಹಾಯಕ ಸಂಘಟನಾ ಕಾರ್ಯದರ್ಶಿ ಇವರು ಉಪಸ್ಥಿತರಿದ್ದರು

## 2016 ನೇ ಸಾಲಿನ ಮೊದಲನೆಯ ಅರ್ಧವಾರ್ಷಿಕ ಸಭೆ

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಮನ್ವಯ ವೇದಿಕೆ – ಕರ್ನಾಟಕ, ಮಗು ಮತ್ತು ಕಾನೂನು ಕೇಂದ್ರ. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ, ಬೆಂಗಳೂರು ಇವರ ಸಹಯೋಗದೊಂದಿಗೆ "ರಾಜ್ಯಮಟ್ಟದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಮನ್ವಯ ವೇದಿಕೆಯ ಎರಡು ದಿನದ ಸನಿವಾಸ ಕಾರ್ಯಗಾರ" 3 ಮತ್ತು 4 ಜೂನ್ 2016 ರಂದು ಸ್ಟೂಡೆಂಟ್ ಕಿಶ್ಚಿಯನ್ ಮೂಮೆಂಟ್ ಆಫ್ ಇಂಡಿಯಾ (ಎಸ್.ಸಿ.ಎಮ್. ಹೌಸ್) ಮಿಷನ್ ರೋಡ್, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಈ ಸಭೆಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ 65 ಎಸ್.ಡಿ.ಎಮ್.ಸಿ. ಸದಸ್ಯರು ಭಾಗವಹಿಸಿದ್ದರು. ಈ ಕಾರ್ಯಗಾರವನ್ನು ಪ್ರೊ. ಬರಗೂರು ರಾಮಚಂದ್ರಪ್ಪ. ಕರ್ನಾಟಕದ ಹೆಸರಾಂತ ಸಾಹಿತಿಗಳು ಮತ್ತು ಚಲನಚಿತ್ರ ನಿರ್ದೇಶಕರು ಹಾಗೂ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷರು ಇವರು ಟಮಟೆ ಬಾರಿಸುವುದರ ಮೂಲಕ ಉದ್ಘಾಟಿಸಿದರು. ಈ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು **ಡಾ. ನಿರಂಜನಾರಾಧ್ಯ** ವಿ. ಪಿ. ಫೆಲೋ ಹಾಗೂ ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರು, ಮಗು ಮತ್ತು ಕಾನೂನು ಕೇಂದ್ರ. ಇವರು ನುಡಿದರು. ಈ ಸಭೆಯ ಅಧ್ಯಕ್ಷತೆಯನ್ನು **ಶ್ರೀಯುತ ಜಯಣ್ಣ, ಅಧ್ಯಕ್ಷರು. ಕರ್ನಾಟಕ ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಮನ್ವಯ ವೇದಿಕೆ, ಇವರು ವಹಿಸಿದ್ದರು. ಈ ಸಭೆಯಲ್ಲಿ** ಶ್ರೀಯುತ ಗಂಗಾಧರ್, ಅಧ್ಯಕ್ಷರುಸಮ ಸಮಾಜ ನಿರ್ಮಾಣ ಗೆಳೆಯರ ಬಳಗ ಉಪಸ್ಥಿತರಿದ್ದರು.

## ಸರ್ಕಾರಿ ಶಾಲೆಗಳ ಸಬಲೀಕರಣ: ಮೂಲವಾರಸುದಾರರ ಎರಡು ದಿನಗಳ ದುಂಡು ಮೇಜಿನ ಸಭೆ

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಮನ್ವಯ ವೇದಿಕೆ – ಕರ್ನಾಟಕ , ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮತ್ತು ಮಗು ಮತ್ತು ಕಾನೂನು ಕೇಂದ್ರ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ, ಬೆಂಗಳೂರು ಇವರ ಜಂಟಿ ಸಹಯೋಗದಲ್ಲಿ ಸಂಘಟಿಸಿದ್ದ "ಸರ್ಕಾರಿ ಶಾಲೆಗಳ ಸಬಲೀಕರಣ: ಮೂಲವಾರಸುದಾರರ ಎರಡು ದಿನಗಳ ದುಂಡು ಮೇಜಿನ ಸಭೆ" ದಿನಾಂಕ 26–27ನೇ ನವೆಂಬರ್ 2016 ರಂದು ಬೆಂಗಳೂರಿನ ಎಸ್.ಸಿ.ಎಂ. ಹೌಸ್‌ನಲ್ಲಿ ಆಯೋಜನೆಗೊಳಿಸಲಾಗಿತ್ತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಯುತ ಕುಂ. ವೀರಭದ್ರಪ್ಪ, ಕರ್ನಾಟಕದ ಹೆಸರಾಂತ ಖ್ಯಾತ ಬರಹಗಾರರು ಮತ್ತು ಸರ್ಕಾರಿ ಶಾಲೆಗಳ ಸಬಲೀಕರಣ ಸಮಿತಿ ಸದಸ್ಯರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ. ಇವರು ಮಾಡಿದರು. ಪ್ರಸ್ತಾವಿಕ ನುಡಿಯನ್ನು ಡಾ. ನಿರಂಜನಾರಾಧ್ಯ ವಿ. ಪಿ. ಫೆಲೋ ಹಾಗೂ ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರು, ಮಗು ಮತ್ತು ಕಾನೂನು ಕೇಂದ್ರ ಇವರು ನುಡಿದರು. ಈ ಸಭೆಯ ಅಧ್ಯಕ್ಷತೆಯನ್ನು **ಶ್ರೀಯುತ ಬಸವರಾಜ ಗುರಿಕಾರ,** ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು ಮತ್ತು ಉಪಾಧ್ಯಕ್ಷರು ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಒಕ್ಕೂಟ, ನವದೆಹಲಿ ಇವರು ವಹಿಸಿದ್ದರು. ಈ ಸಭೆಯಲ್ಲಿ ಶ್ರೀಯುತ ವಿ. ಎಂ. ನಾರಾಯಣ ಸ್ವಾಮಿ, ಪ್ರಧಾನ ಕಾರ್ಯದರ್ಶಿಗಳು. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು ಮತ್ತು ಶ್ರೀಯುತ ಗಂಗಾಧರ್, ಅಧ್ಯಕ್ಷರು, ಸಮ ಸಮಾಜ ನಿರ್ಮಾಣ ಗೆಳೆಯರ ಬಳಗ ಇವರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಕರ್ನಾಟಕ ರಾಜ್ಯದ 22 ಜಿಲ್ಲೆಗಳ ಮೂಲ ವಾರಸುದಾರರಾದ ಎಸ್.ಡಿ.ಎಂ.ಸಿ. ಪ್ರತಿನಿಧಿಗಳು, ಶಿಕ್ಷಕರು, ಮಕ್ಕಳು, ಸಾಮಾಜಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಎರಡು ದಿನಗಳ ಈ ಸಭೆಯಲ್ಲಿ ರಾಜ್ಯದ ಪ್ರಸ್ತುತ ಶಿಕ್ಷಣದ ಸ್ಥಿತಿಗತಿಗಳು ಹಾಗೂ ಅಗತ್ಯ ಪರಿವರ್ತನೆಗಳ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಈ ಚರ್ಚೆಯು ಪ್ರಧಾನವಾಗಿ 'ನೆರೆಹೊರೆ ತತ್ವದ ಆಧಾರದ ಮೇಲೆ ಸಮಾಜದ ಎಲ್ಲ ವರ್ಗದ ಮಕ್ಕಳಿಗೆ ಸಮಾನ ಶಾಲಾ ಶಿಕ್ಷಣ' ಕುರಿತು ಒಂದು ತಾತ್ವಿಕ ಚೌಕಟ್ಟನ್ನು ರೂಪಿಸುವುದಾಗಿತ್ತು. ಈ ಸಭೆಯಲ್ಲಿ ಹೊರಬಂದ ಫಲಿತಗಳನ್ನು ಕ್ರೋಢೀಕರಿಸಿ ಒಂದು ನಾಗರಿಕ ಸನ್ನದನ್ನು ಸಿದ್ಧಪಡಿಸಲಾಯಿತು.

## ಮಾಹಿತಿಗಾಗಿ ಸಂಪನ್ಮೂಲ ಸಾಹಿತ್ಯ

### ಶಿಕ್ಷಣ ಹಕ್ಕು ಕುರಿತಂತೆ ಸಂಪನ್ಮೂಲ ಸಾಹಿತ್ಯ

ಭಾರತ ಸಂವಿಧಾನವು ಶಿಕ್ಷಣ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳ ಮೂಲಭೂತ ಹಕ್ಕು ಎಂದು ಘೋಷಿಸುತ್ತದೆ. ಈ ಹಕ್ಕನ್ನು ಜಾರಿಗೊಳಿಸಲು ಭಾರತ ಸರ್ಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ, 2009ನ್ನು ರೂಪಿಸಿ ಏಪ್ರಿಲ್ 01, 2010ರಂದು ಕಾರ್ಯರೂಪಕ್ಕೆ ತಂದಿದೆ. ಇದರನ್ವಯ ಕರ್ನಾಟಕ ರಾಜ್ಯ ಸರ್ಕಾರವು ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಲು ಅಗತ್ಯವಾದ ನಿಯಮಗಳನ್ನು ರೂಪಿಸಿ ದಿನಾಂಕ 28.04.2012ರಂದು ಕಾರ್ಯರೂಪಕ್ಕೆ ತಂದಿದೆ.

ಎಲ್ಲಾ ಮಕ್ಕಳಿಗೂ ಉತ್ತಮ ಗುಣಮಟ್ಟದ ಶಿಕ್ಷಣದ ಹಕ್ಕನ್ನು ಸಾಕಾರಗೊಳಿಸುವ ಆಶಯವನ್ನು ಪೂರೈಸಲು ಶಿಕ್ಷಣ ಹಕ್ಕು ಕಾಯ್ದೆ, 2009ನ್ನು ಪರಿಣಾಮಕಾರಿಯಾಗಿ ಜಾರಿಯಾಗಬೇಕಾಗಿದೆ. ಇದಕ್ಕಾಗಿ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ವಾರಸುದಾರರು ಅವರ ಹಕ್ಕುಗಳು, ಕರ್ತವ್ಯಗಳು, ಜವಾಬ್ದಾರಿ ಮತ್ತು ಹೊಣೆಗಾರಿಕೆಗಳನ್ನು ಅರಿತುಕೊಳ್ಳುವುದು ಅತ್ಯಂತ ಮಹತ್ವದ್ದಾಗಿದೆ. ಇದಕ್ಕಾಗಿ ಶಿಕ್ಷಣ ಹಕ್ಕು ಕಾಯ್ದೆ, ನಿಯಮಗಳು ಹಾಗೂ ಸಂಬಂಧಿತ ಸುತ್ತೋಲೆಗಳ ಪೂರ್ಣ ಪರಿಚಯ ಅತ್ಯವಶ್ಯಕ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಹಾಯವಾಗಬೇಕೆಂಬ ದೃಷ್ಟಿಯಿಂದ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಶಿಕ್ಷಣ ಹಕ್ಕಿಗೆ ಸಂಬಂಧಿಸಿದಂತೆ ಹೊರಡಿಸಿರುವ ಸುತ್ತೋಲೆಗಳನ್ನು ಸಂಗ್ರಹಿಸಿ, ಸಂಪನ್ಮೂಲ ಸಾಹಿತ್ಯಗಳ ರೂಪದಲ್ಲಿ ಹೊರತರುವ ಕಾರ್ಯವನ್ನು ಮಗು ಮತ್ತು ಕಾನೂನು ಕೇಂದ್ರವು ಕೈಗೊಂಡಿದೆ. ಈ ನಿಟ್ಟಿನಲ್ಲಿ, ಅಗಸ್ಟ್ 2015 ಮತ್ತು ಡಿಸೆಂಬರ್ 2016ರಲ್ಲಿ ಎರಡು ಸಂಪನ್ಮೂಲ ಸಾಹಿತ್ಯಗಳನ್ನು ಹೊರತರಲಾಗಿದೆ. ಮೊದಲನೆಯ ಪ್ರತಿ ಮಕ್ಕಳ ಶಿಕ್ಷಣ ಹಕ್ಕಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದಲ್ಲಿ ಏಪ್ರಿಲ್ 2010ರಿಂದ ಜೂನ್ 2015ರ ವರೆಗೆ ಹೊರಡಿಸಲಾದ ಸುತ್ತೋಲೆಗಳನ್ನು ಒಳಗೊಂಡಿದ್ದರೆ, ಎರಡನೆಯ ಪ್ರತಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಿದ್ಧ ಗಣಕವಾಗಿದೆ. ಈ ಮೂಲಕ ಎಲ್ಲಾ ಮಕ್ಕಳಿಗೆ ಶಿಕ್ಷಣದ ಹಕ್ಕಿನ ಸಾಕಾರಕ್ಕೆ ದಾರಿ ಮಾಡಿಕೊಡುವ ಒಂದು ಚಿಕ್ಕ ಪ್ರಯತ್ನ ಮಾಡಲಾಗಿದೆ.



# ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯ ರಾಜ್ಯ ಪದಾಧಿಕಾರಿಗಳ ಸಭೆ

ದಿನಾಂಕ: **23.09.2016** ರಂದು ನಡೆದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯ ರಾಜ್ಯ ಪದಾಧಿಕಾರಿಗಳ ಸಭೆ ಧಾರವಾಡದ ಸರ್ಕಾರಿ ನೌಕರರ ಭವನದಲ್ಲಿ ಯಶಸ್ವಿಯಾಗಿ ನಡೆಯಿತು. ಈ ಸಭೆಯಲ್ಲಿ ರಾಜ್ಯ ಸಮಿತಿಯ 12 ಸದಸ್ಯರು ಭಾಗವಹಿಸಿದ್ದರು. ಈ ಸಭೆಯ ಪ್ರಸ್ತಾವಿಕ ನುಡಿಯನ್ನು **ಮಗು ಮತ್ತು ಕಾನೂನು ಕೇಂದ್ರ, ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ, ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರಾದ ಶ್ರೀಯುತ ಡಾ.ವಿ.ಪಿ.ನಿರಂಜನಾರಾಧ್ಯರವರು** ಮಾತನಾಡುತ್ತಾ ಸರ್ಕಾರಿ ಶಾಲೆಗಳು ಉಳಿಯಬೇಕಾಗದರೇ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಮತ್ತಷ್ಟು ಬಲಿಷ್ಠವಾಗಬೇಕು. ಅವರು ಸಮರ್ಥ ರೀತಿಯಲ್ಲಿ ತಮ್ಮ ಅಧಿಕಾರ, ಕರ್ತವ್ಯಗಳನ್ನು ತಿಳಿದು ಶಾಲಾ ಹಂತದಲ್ಲಿ ಕೆಲಸವನ್ನು ನಿರ್ವಹಿಸಬೇಕು. ಇಲ್ಲವಾದರೆ ನಮ್ಮ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಮುಂಬರುವ ದಿನಗಳಲ್ಲಿ ಅಪಾಯಕ್ಕೆ ಸಿಲುಕುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ಗಂಡಾಂತರ ಒದಗುವ ಸಾಧ್ಯತೆ ಇದೆ ಎಂದು ತಿಳಿಸಿದರು. ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಗಟ್ಟಿಗೊಳಿಸಲು ನಾವೆಲ್ಲರೂ ಸಂಘಟಿತರಾಗಿ ದೊಡ್ಡಮಟ್ಟದ ಚಳುವಳಿಯನ್ನು ರೂಪಿಸಬೇಕಾಗಿದೆ ಎಂದು ತಿಳಿಸಿದರು. ಜೊತೆಗೆ ಸರ್ಕಾರ ರಾಜ್ಯಾದ್ಯಂತ ಏಕರೂಪ ಪ್ರವೇಶ ಪ್ರಕ್ರಿಯೆಯನ್ನು ಜಾರಿಗೊಳಿಸಬೇಕು. ರಾಜ್ಯದಲ್ಲಿ ಖಾಸಗಿ ಶಾಲೆಗಳು ಪ್ರವೇಶ ಪ್ರಕ್ರಿಯೆಯನ್ನು ನವಂಬರ್–ಡಿಸಂಬರ್ ತಿಂಗಳಿನಲ್ಲಿಯೇ ಪ್ರಾರಂಭಿಸುತ್ತವೆ . ಆದರೆ ಸರ್ಕಾರಿ ಶಾಲೆಗಳು ಬೇಸಿಗೆ ರಜದ ನಂತರ ಜೂನ್ ತಿಂಗಳಿನಲ್ಲಿ ಪ್ರವೇಶ ಪ್ರಾರಂಭಿಸುತ್ತವೆ. ಇದರ ಬದಲು ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳು ಕಡ್ಡಾಯವಾಗಿ ಪ್ರವೇಶವನ್ನು ಮೇ ತಿಂಗಳಿನಲ್ಲಿ ಪ್ರಾರಂಭಿಸುವಂತೆ ಒಂದು ವೇಳಾ ಪಟ್ಟಿಯನ್ನು ಕೂಡಲೇ ಹೊರಡಿಸಬೇಕು ಎಂದು ತಿಳಿಸಿದರು

# ಕಾರ್ಯಕ್ರಮಗಳ ಜಾರಿ ಮತ್ತು ನೀತಿ ನಿರೂಪಣೆ

## ಸಾರ್ವಜನಿಕ ಅಹವಾಲು ಕಾರ್ಯಕ್ರಮ

ಜಿಲ್ಲೆಯಲ್ಲಿನ ಶೈಕ್ಷಣಿಕ ಸ್ಥಿತಿಗತಿ ಕುರಿತಂತೆ ಚರ್ಚಿಸಲು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಮಗು ಮತ್ತು ಕಾನೂನು ಕೇಂದ್ರವು ಜಿಲ್ಲಾ ಪ್ರಾಥಮಿಕ ಶಿಕ್ಷಕರ ಸಂಘ, ವಕೀಲರ ಸಂಘ ಹಾಗೂ ಅಕ್ಷರ ದಾಸೋಹ ಬಿಸಿಯೂಟ ಮಹಿಳೆಯರ ಸಂಘಟನೆ ಇವರ ಸಹಯೋಗದಲ್ಲಿ ರಾಮನಗರ ಜಿಲ್ಲೆಯ 4 ತಾಲ್ಲೂಕುಗಳಲ್ಲಿ ಸಾರ್ವಜನಿಕ ಅಹವಾಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿವರಗಳು ಕೆಳಕಂಡಂತೆ ಇವೆ.

| ತಾಲ್ಲೂಕು | ದಿನಾಂಕ | ಭಾಗವಹಿಸಿದವರ ಸಂಖ್ಯೆ | ಚರ್ಚೆಯಾದ ಒಟ್ಟು ಸಮಸ್ಯೆಗಳು |
|---|---|---|---|
| ಚನ್ನಪಟ್ಟಣ | 15–12–2015 | 125 | 10 |
| ರಾಮನಗರ | 16–12–2015 | 87 | 25 |
| ಮಾಗಡಿ | 17–12–2015 | 96 | 16 |
| ಕನಕಪುರ | 18–12–2015 | 76 | 15 |
| | ಒಟ್ಟು | **324** | **66** |



# ಕಾರ್ಯತಂಡದ ಸದಸ್ಯರಿಗಾಗಿ ಸಾಮರ್ಥ್ಯ ವರ್ಧನೆಯ ಕಾರ್ಯಕ್ರಮಗಳು

## ಮಾಹಿತಿ ಹಕ್ಕು ಅಧಿನಿಯಮದ ಕುರಿತು ತರಬೇತಿ

ಶೈಕ್ಷಣಿಕ ಕಾರ್ಯತಂಡದ ಸದಸ್ಯರಿಗಾಗಿ ಮಾಹಿತಿ ಹಕ್ಕು ಅಧಿನಿಯಮದ ಕುರಿತು ಒಂದು ದಿನದ ತರಬೇತಿಯನ್ನು 2015 ಜುಲೈ 31ರಂದು ಬಿಡದಿಯ ಕ್ಷೇತ್ರ ವಿಸ್ತರಣೆ ಕಛೇರಿಯಲ್ಲಿ ಆಯೋಜಿಸಲಾಗಿತ್ತು. CCL NLSIUನ ಸ್ಯಾಮುಎಲ್ ಸತ್ಯಶೀಲನ್‌ಅವರು ಅಧಿನಿಯಮದ ಇತಿಹಾಸ, ಮಹತ್ವ ಮತ್ತು ಅದರ ಪ್ರಮುಖ ನಿಬಂಧನೆಗಳ ಕುರಿತು ವಿವರಿಸಿದರು. ಸದರಿ ಅಧಿನಿಯಮದ ಅಡಿಯಲ್ಲಿ ದೂರನ್ನು ನೀಡುವುದು ಹೇಗೆ ಎಂಬಿತ್ಯಾದಿ ವಿಚಾರಗಳನ್ನು ಅವರು ಚರ್ಚಿಸಿದರು. ಕಾರ್ಯಕ್ರಮದ ಮುಖ್ಯಸ್ಥರು, ಆರ್‌ಟಿಇ ಅಧಿನಿಮಯದ ಉತ್ತಮತರ ಅನುಷ್ಠಾನಕ್ಕಾಗಿ ಆರ್‌ಟಿಐ ಅಧಿನಿಯಮದ ಅಡಿಯಲ್ಲಿ ಕೊಡಮಾಡಿರುವ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದು ಸಿಬ್ಬಂದಿಯನ್ನು ಉತ್ತೇಜಿಸಿದರು.

## ಸರಕಾರಿ ಆಯವ್ಯಯ ಪತ್ರಗಳ ವಿಶದೀಕರಣ

ಶ್ರುತಿ ರಾಮನ್ ಮತ್ತು ಶಿಬು ಶ್ವೇತಾ ಅವರು ಬೆಂಗಳೂರಿನ ಸೆಂಟರ್ ಫ಼ಾರ್ ಬಜೆಟ್ ಅಂಡ್ ಪಾಲಿಸಿ ಸ್ಟಡೀಸ್‌ನ ವತಿಯಿಂದ 2015 ಸೆಪ್ಟೆಂಬರ್ 21ರಿಂದ 23ರ ವರೆಗೆ ಆಯೋಜಿಸಲಾಗಿದ್ದ ಸರಕಾರಿ ಆಯವ್ಯಯ ಪತ್ರಗಳ ವಿಶದೀಕರಣ ಕುರಿತಾದ ಮೂರು ದಿನಗಳ ಕಾರ್ಯಶಿಬಿರದಲ್ಲಿ ಭಾಗವಹಿಸಿದ್ದರು. ಚೈಲ್ಡ್ ರೈಟ್ಸ್ ಅಂಡ್ ಯು (ಸಿಆರ್‌ವೈ), ಕನ್ಸರ್ನ್ಡ್ ಫ಼ಾರ್ ವರ್ಕಿಂಗ್ ಚಿಲ್ಡ್ರನ್, ಯುನಿಸೆಫ಼್, ಜನಾಗ್ರಹ, ಕೇರ್‌ಇಂಡಿಯಾ ಇತ್ಯಾದಿ ಸಂಸ್ಥೆಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಸರಕಾರಿ ಆಯವ್ಯಯ ಪತ್ರಗಳನ್ನು ತಯಾರಿಸುವ ಪ್ರಕ್ರಿಯೆ, ಇಲ್ಲಿ ಬಳಕೆಯಾಗುವ ತಾಂತ್ರಿಕ ಪದಗಳು ಮತ್ತು ವಿವಿಧ ಬಾಧ್ಯಸ್ಥರ ಪಾತ್ರ ಇವುಗಳನ್ನು ಅರ್ಥ ಮಾಡಿಕೊಳ್ಳುವ ಮೂಲಕ ಒಂದು ನಿಗದಿತ ದೃಷ್ಟಿನೆಲೆಯಿಂದ ಆಯವ್ಯಯ ಪತ್ರವನ್ನು ವಿಶ್ಲೇಷಿಸುವುದು ಹೇಗೆ ಎಂಬುದನ್ನು ಕಾರ್ಯಶಿಬಿರದಲ್ಲಿ ಭಾಗಿಗಳಿಗೆ ಹೇಳಿಕೊಡಲಾಯಿತು.

## ಪರಿಣಾಮಕಾರಿ ಸಂವಹನ ಕೌಶಲ್ಯಗಳು

ಸಿಬ್ಬಂದಿಯ ಸಂವಹನ ಕೌಶಲ್ಯಗಳ ಸಂವರ್ಧನೆಗಾಗಿ 2015 ನವೆಂಬರ್ 3 ಮತ್ತು 4ರಂದು ಎರಡು ದಿನಗಳ 'ಸಂವಹನ ಕೌಶಲ್ಯಗಳು' ಕಾರ್ಯಶಿಬಿರವನ್ನು ಆಯೋಜಿಸಲಾಗಿತ್ತು. ಕೆಎಚ್‌ಪಿಟಿಯ ಬಾಲಸುಬ್ರಹ್ಮಣ್ಯಮ್ ಮತ್ತು ಸುನೀತಾಅವರು ಚಟುವಟಿಕೆಗಳನ್ನು ನಡೆಸಿಕೊಟ್ಟರು. ಕಾರ್ಯಶಿಬಿರದಲ್ಲಿ, ಸಂವಹನ ಪ್ರಕ್ರಿಯೆಯ ಮೂಲ ಪರಿಕಲ್ಪನೆಗಳು, ಸಂವಹನದ ಪ್ರಕಾರಗಳು, ದೃಷ್ಟಿ ಸಂಪರ್ಕ, ಆಲಿಸುವಿಕೆ, ನಿಗದಿತ ಗುರಿಯ ಸಂದೇಶ, ಪ್ರಶ್ನಿಸುವ ಕೌಶಲ್ಯ ಮತ್ತು ಸಂಧಾನ ಕೌಶಲ್ಯ ಇತ್ಯಾದಿ ಸಂವಹನ ಕೌಶಲ್ಯದ ವಿವಿಧ ಅಂಶಗಳನ್ನು ಅಭ್ಯಾಸ ಮಾಡಲಾಯಿತು. ತರಬೇತಿಯನ್ನು ವಾಸ್ತವ ಪ್ರಕರಣಗಳನ್ನು ಆಧರಿಸಿ ರೂಪಿಸಲಾಗಿತ್ತು. ತರಬೇತಿ ಕಾರ್ಯತಂತ್ರದಲ್ಲಿ ವ್ಯಕ್ತಿ-ವ್ಯಕ್ತಿ ಸಂವಹನ, ಸಮೂಹ ಚರ್ಚೆ, ಪಾತ್ರಾಭಿನಯ ಮತ್ತು ಪಿಪಿಟಿ ಮಂಡಣೆ ಇತ್ಯಾದಿ ಕೌಶಲ್ಯಗಳನ್ನು ಅಳವಡಿಸಿಕೊಳ್ಳಲಾಗಿತ್ತು.

## ಆಯವ್ಯಯ ಪತ್ರದ ಪರಿಕಲ್ಪನೆಗಳು ಮತ್ತು ವಿಶ್ಲೇಷಣೆ

ಆಯವ್ಯಯ ಪತ್ರಗಳು ಮತ್ತು ಕಾರ್ಯನೀತಿ ಸಂಶೋಧನೆ ಕುರಿತಾದ ಪರಿಕಲ್ಪನೆಗಳ ಕುರಿತು ಸಿಬ್ಬಂದಿಯ ಅರಿವನ್ನು ಹೆಚ್ಚಿಸುವ ಸಲುವಾಗಿ 2015 ನವೆಂಬರ್ 15ರಂದು ತರಬೇತಿಯೊಂದನ್ನು ಆಯೋಜಿಸಲಾಗಿತ್ತು. ಶ್ರುತಿ ರಾಮನ್ ಮತ್ತು ಶಿಬು ಶ್ವೇತಾ ಇದನ್ನು ನಡೆಸಿಕೊಟ್ಟರು. ಆಯವ್ಯಯ ಪತ್ರ ಪರಿಕಲ್ಪನೆಗಳು, ಬಜೆಟ್ ಸೈಕಲ್‌ನ ಆಡಳಿತ ಸಂಬಂಧಿ ಪ್ರಕ್ರಿಯೆ ಮತ್ತು ಆಯವ್ಯಯ ಪತ್ರವನ್ನು ತಯಾರಿಸುವಲ್ಲಿ ಅನುಸರಿಸುವ ವಿವಿಧ ಹಂತಗಳು- ಇವುಗಳನ್ನು ಕಾರ್ಯಶಿಬಿರದಲ್ಲಿ ಚರ್ಚಿಸಲಾಯಿತು. ಸಂಚಾಲಕರು ಮರುವಿತರಣ, ವಿತರಣ ಬಿಲ್ಲುಗಳು, ಆಯವ್ಯಯ ಅಂದಾಜುಗಳು, ಪರಿಷ್ಕೃತ ಅಂದಾಜುಗಳು, ಅನುದಾನಗಳಿಗಾಗಿ ಬೇಡಿಕೆ, ವೋಟೆಡ್ ಮತ್ತು ಚಾರ್ಜ್ಡ್ ವೆಚ್ಚಗಳು, ವಾರ್ಷಿಕ ಹಣಕಾಸು ತಃಖ್ತೆ, ಆದಾಯ ವೆಚ್ಚ, ಬಂಡವಾಳ ವೆಚ್ಚ, ಮನಿ ಬಿಲ್ ಇತ್ಯಾದಿ ಪರಿಕಲ್ಪನೆಗಳನ್ನು ವಿವರಿಸಲಾಯಿತು. ಸಿ ಅಂಡ್ ಎಜಿ, ಸಾರ್ವಜನಿಕ ಲೆಕ್ಕಪತ್ರ ಸಮಿತಿ ಮತ್ತು ಸಾರ್ವಜನಿಕ ಉದ್ಯಮಗಳ ಮೇಲಿನ ಸಮಿತಿ ಇವುಗಳ ಪಾತ್ರಗಳನ್ನು ಚರ್ಚಿಸಲಾಯಿತು. ವಿತ್ತೀಯ ಕೊರತೆ, ರಾಜ್ಯ ಪಟ್ಟಿ, ಕೇಂದ್ರ ಪಟ್ಟಿ, ಆದಾಯ ಕೊರತೆ, ಸಂಭವನೀಯ ಬಾಧ್ಯತೆಗಳು- ಇವುಗಳನ್ನೂ ವಿವರಿಸಲಾಯಿತು.

**'ಪರಿಣಾಮಕಾರಿ ತರಬೇತಿ ಕೌಶಲ್ಯಗಳು' ಕಾರ್ಯಶಿಬಿರ**

ಸಿಬ್ಬಂದಿಯ ತರಬೇತಿ ಕೌಶಲ್ಯಗಳ ಸಂವರ್ಧನೆಗಾಗಿ 2015 ಡಿಸೆಂಬರ್ 2 ಮತ್ತು 3ರಂದು "ಪರಿಣಾಮಕಾರಿ ತರಬೇತಿ ಕೌಶಲ್ಯ ಕಾರ್ಯಶಿಬಿರ"ವನ್ನು ನಡೆಸಲಾಯಿತು. ಪ್ರಖ್ಯಾತ ಅಭಿವೃದ್ಧಿ ಸಂವಹನ ತಜ್ಞ ಎಂ.ಅಬ್ದುಲ್ ರೆಹಮಾನ್ ಪಾಷರವರು ಈ ಶಿಬಿರವನ್ನು ಸಂಚಾಲಿಸಿದರು. ಕ್ಷೇತ್ರ ವಿಸ್ತರಣೆ ಕಾರ್ಯಕ್ರಮದ ಅಗತ್ಯಗಳನ್ನು ಆಧರಿಸಿ ಈ ಶಿಬಿರದ ರೂಪುರೇಖೆಗಳನ್ನು ರಚಿಸಲಾಗಿತ್ತು.

**ಕ್ಷೇತ್ರಕಾರ್ಯದಲ್ಲಿ ಪ್ರಕ್ರಿಯೆ ದಾಖಲೀಕರಣ**

ಅಭಿವೃದ್ಧಿಯನ್ನು ಒಂದು ಪ್ರಕ್ರಿಯೆ ಎಂದು ಪರಿಗಣಿಸಿ, ಯೋಜನೆ ಉದ್ದಕ್ಕೂ ಈ ಪ್ರಕ್ರಿಯೆಯನ್ನು ಸೂಕ್ತವಾಗಿ ದಾಖಲೀಕರಿಸುವುದರ ವಿವಿಧ ಪ್ರಯೋಜನಗಳು, ಅದನ್ನು ಮಾಡುವ ಸಾಧನ ಮತ್ತು ವಿಧಾನಗಳು ಇತ್ಯಾದಿಗಳ ಕುರಿತು ಶೈಕ್ಷಣಿಕ ಕಾರ್ಯತಂಡದವರಿಗಾಗಿ ಒಂದು ದಿನದ ತರಬೇತಿಯನ್ನು 2016 ಜನವರಿ 16ರಂದು ಆಯೋಜಿಸಲಾಗಿತ್ತು. ಕಾರ್ಯಕ್ರಮಗಳ ಅನುಷ್ಠಾನವನ್ನು ಹೆಚ್ಚು ಪರಿಣಾಮಕಾರಿಯಾಗಿಸುವ ಸಾಮರ್ಥ್ಯವನ್ನು ಕಾರ್ಯಕರ್ತರಿಗೆ ನೀಡುವ ಈ ಕಾರ್ಯಶಿಬಿರವನ್ನು ಅಭಿವೃದ್ಧಿ ಸಂವಹನ ತರಬೇತಿ ತಜ್ಞ ಎಂ.ಅಬ್ದುಲ್ ರೆಹಮಾನ್ ಪಾಷರವರು ಸಂಚಾಲಿಸಿದರು. ಇದರಲ್ಲಿ ಸಕಾಲಿಕ ಟಿಪ್ಪಣಿಗಳು, ಕ್ಷೇತ್ರ ದಿನಚರಿ, ಸಂದರ್ಶನಗಳು, ಪ್ರಕರಣ ಅಧ್ಯಯನಗಳು, ಧ್ವನಿ ಮುದ್ರಣ ಮತ್ತು ದೃಶ್ಯ ಚಿತ್ರೀಕರಣ, ಪತ್ರಿಕಾ ವರದಿಗಳ ಸಂಗ್ರಹ, ಸಾಕ್ಷ್ಯಚಿತ್ರಗಳ ನಿರ್ಮಾಣ ಇತ್ಯಾದಿ ಅಭಿವೃದ್ಧಿ ಪ್ರಕ್ರಿಯೆಯನ್ನು ದಾಖಲಿಸುವ ವಿವಿಧ ಸಾಧನ ವಿಧಾನಗಳ ಪರಿಚಯವನ್ನು ನೀಡಿದರು.

**ಆಯವ್ಯಯ ಪರಿಕಲ್ಪನೆಗಳು, ಪ್ರಕ್ರಿಯೆ, ವಿಶ್ಲೇಷಣೆ ಮತ್ತು ಸಮರ್ಥನೆ – ಸರಕಾರಿ ಆಯವ್ಯಯಗಳ ವಿಶದೀಕರಣ**

ಸಿಸಿಎಲ್ ಕಾರ್ಯತಂಡದ ಸಾಮರ್ಥ್ಯ ವರ್ಧನೆಯ ಅಂಗವಾಗಿ ಎರಡು ದಿನಗಳ "ಆಯವ್ಯಯ ಪರಿಕಲ್ಪನೆಗಳು, ಪ್ರಕ್ರಿಯೆ, ವಿಶ್ಲೇಷಣೆ ಮತ್ತು ಸಮರ್ಥನೆ – ಸರಕಾರಿ ಆಯವ್ಯಯಗಳ ವಿಶದೀಕರಣ" ಕಾರ್ಯಶಿಬಿರವನ್ನು 2016 ಫೆಬ್ರವರಿ 10 ಮತ್ತು 11ರಂದು ಎನ್‌ಎಲ್‌ಎಸ್‌ಐಯುನಲ್ಲಿ ನಡೆಸಿತು. ಸೆಂಟರ್ ಫಾರ್ ಬಜೆಟ್ ಅಂಡ್ ಪಾಲಿಸಿ ಸ್ಟಡೀಸ್ ಸಂಸ್ಥೆಯ ಜ್ಯೋತಿ ಝಾ, ಶ್ರೀನಿವಾಸ್ ಅಲಮಾರು ಮತ್ತು ಮಧುಸೂಧನ್ ರಾವ್ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ನಡೆಸಲಾದ ಒಟ್ಟು ಏಳು ಗೋಷ್ಠಿಗಳಲ್ಲಿ ಸರಕಾರಿ ಆಯವ್ಯಯ ಪತ್ರ – ಕಾನೂನು ಮತ್ತು ಸಾಂಸ್ಥಿಕ ಚೌಕಟ್ಟು; ಆಯವ್ಯಯ ಪತ್ರವನ್ನು ಅರ್ಥ ಮಾಡಿಕೊಳ್ಳುವುದು – ಸರಕಾರಿ ಲೆಕ್ಕಪತ್ರ ವಿಧಾನ ಇವುಗಳ ಚರ್ಚೆಯ ಜೊತೆಯಲ್ಲಿ ಆಯವ್ಯಯ ವಿಶ್ಲೇಷಣೆ ಅಭ್ಯಾಸಗಳು ಮತ್ತು ತಂಡದ ಸದಸ್ಯರಿಂದ ವಿಷಯ ಮಂಡನೆಗಳೂ ಇದ್ದವು.

**ಮಗು ಮತ್ತು ಕಾನೂನು ಕೇಂದ್ರ ಧ್ಯೇಯದರ್ಶನ ನಿರೂಪಣೆ**

ಸಿಸಿಎಲ್ 2016 ಜನವರಿ 20 ಮತ್ತು 21ರಂದು ಎರಡು ದಿನಗಳ 'ಧ್ಯೇಯದರ್ಶನ ನಿರೂಪಣೆ ಕಾರ್ಯಶಿಬಿರ'ವನ್ನು ಆಂಗನ–ದ ಕಂಟ್ರಿ ಇನ್‌ನಲ್ಲಿ ಆಯೋಜಿಸಿತ್ತು. ಅರಕಲಗೂಡು ರಾಮಪ್ರಸಾದ್‌ಅವರು ಮಗು ಮತ್ತು ಕಾನೂನು ಯೋಜನೆಯ ಧ್ಯೇಯ ಮತ್ತು ಉದ್ದೇಶಗಳ ಕರಡು ಚೌಕಟ್ಟನ್ನು ಮಂಡಿಸಿದರು; ಎನ್‌ಎಲ್‌ಎಸ್‌ಐಯುನ ಅತಿಥಿ ಉಪನ್ಯಾಸಕರಾದ ಚೇತನ್ ಸಿಂಗಾಯಿಅವರ ನೆರವಿನಿಂದ ಸಿಬ್ಬಂದಿ ಧ್ಯೇಯೋದ್ದೇಶಗಳ ಕರಡನ್ನು ರೂಪಿಸುವ ಪ್ರಯತ್ನವನ್ನು ಮಾಡಿತು. ತಜ್ಞರು ಮಂಡಿಸಿದ ಚೌಕಟ್ಟಿನಲ್ಲಿ ಒಳಗೊಂಡಿದ್ದ ವಿವಿಧ ಸಂಯೋಜನೆಗಳ ನೆರವಿನಿಂದ ಸಿಸಿಎಲ್‌ನ ಹಿಂದಿನ, ಇಂದಿನ ಮತ್ತು ಭವಿಷ್ಯದ 'ದೊಡ್ಡ ಚಿತ್ರ'ವನ್ನು ಚಿತ್ರಿಸಲು ಸಾಧ್ಯವಾಯಿತು. ಇದರ ಮೂಲಕ ಸಿಸಿಎಲ್ ಭವಿಷ್ಯಕ್ಕಾಗಿ ವ್ಯವಸ್ಥಿತವಾದ ಕಾರ್ಯತಂತ್ರ ಯೋಜನೆಯನ್ನು ರೂಪಿಸಲು ಅಗತ್ಯವಾದ ಪುರಾವೆ ಮತ್ತು ಅನುಭವಗಳ ಕುರಿತು ಕಾರ್ಯತಂಡವು ಚಿಂತನೆಯನ್ನು ನಡೆಸಲು ಸಹಾಯಕವಾಯಿತು. ಧ್ಯೇಯ, ಉದ್ದೇಶ ಮತ್ತು ಗುರಿಗಳ ಒಂದು ಕರಡನ್ನು ತಯಾರಿಸಲಾಯಿತು; ಇದನ್ನು 2016 ಜುಲೈ 27ರಂದು ಸಿಸಿಎ ಸಲಹಾ ಮಂಡಳಿಯ ಎದುರು ಪ್ರಸ್ತುತಪಡಿಸಲಾಯಿತು. ಸಿಸಿಎಲ್‌ಗಾಗಿ ಇದು ವರ್ಷಪೂರ್ತಿ ನಡೆಯುವ ಅಭ್ಯಾಸವಾಗಿರುತ್ತದೆ; ಸಿಸಿಎಲ್



# ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಕಾರ್ಯಕ್ರಮಗಳು ಮತ್ತು ಉಪನ್ಯಾಸಗಳು

### ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಅಧಿನಿಯಮದ ಕುರಿತು ಕಾನೂನು ಸಾಕ್ಷರತೆ ಕಾರ್ಯಕ್ರಮ

ಪರಸ್ಪರ ಪರಿಣಾಮಕಾರಿ ಚಟುವಟಿಕೆಗಳ ಅಂಗವಾಗಿ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (POCSO) ಅಧಿನಿಯಮದ ಕುರಿತು ಕಾನೂನು ಸಾಕ್ಷರತೆ ಕಾರ್ಯಕ್ರಮವನ್ನು 2015 ಜುಲೈ 24ರಂದು ಮಾಗಡಿ ತಾಲೂಕಿನ ಸರಕಾರಿ ಶಾಲೆಯೊಂದರಲ್ಲಿ ಆಯೋಜಿಸಲಾಯಿತು. ಮಾಗಡಿ ತಾಲೂಕಿನ ಬಿಇಒ ರಂಗಸ್ವಾಮಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ.ನಿರಂಜನಾರಾಧ್ಯಅವರು ಬುನಾದಿ ಉಪನ್ಯಾಸವನ್ನು ನೀಡಿದರು. ರಾಮನಗರ ಡಿಸಿಪಿಯು ಅಧಿಕಾರಿ ತಾಜುದ್ದೀನ್ ಖಾನ್ ಸುಮಾರು 120 ಮಕ್ಕಳು ಭಾಗವಹಿಸಿದ ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಅಧಿನಿಮಯದ ವಿವರಗಳನ್ನು ನೀಡಿದ ಅವರು ರಾಮನಗರ ಜಿಲ್ಲೆಯಲ್ಲಿ ವರದಿಯಾದ ಕೆಲವು ಪ್ರಕರಣಗಳ ವಿವರಗಳನ್ನು ನೀಡಿದರು.

### ಆರ್‌ಟಿಇ ಅಧಿನಿಮಯದ ಕುರಿತು ಭಿತ್ತಿಪತ್ರಗಳು

ಉಚಿತ ಮತ್ತು ಕಡ್ಡಾಯ ಶಿಕ್ಷಣದ ಮಕ್ಕಳ ಹಕ್ಕುಗಳ (ಆರ್‌ಟಿಇ) ಅಧಿನಿಮಯ, 2009ರ ಕುರಿತು ಜನಜಾಗೃತಿಯನ್ನು ಮೂಡಿಸುವ ಸಲುವಾಗಿ ಆರ್‌ಟಿಇ ತಂಡದವರು ಮೂರು ಬಗೆಯ ಗೋಡೆ ಮೇಲೆ ತೂಗುಹಾಕುವ ಭಿತ್ತಿಪತ್ರಗಳನ್ನು ರೂಪಿಸಿದ್ದಾರೆ. ಆರ್‌ಟಿಇ ಅಧಿನಿಯಮದ ಅಡಿಯಲ್ಲಿ ಬೇಕು ಮತ್ತು ಬೇಡಗಳು (ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ); ಆರ್‌ಟಿಇ ಅಡಿಯಲ್ಲಿ ನಿಗದಿಪಡಿಸಿರುವಂತೆ ಶಿಕ್ಷಕರ ಪಾತ್ರ ಮತ್ತು ಜವಾಬ್ದಾರಿಗಳು; ಆರ್‌ಟಿಇ ಅಡಿಯಲ್ಲಿ ನಿಗದಿಪಡಿಸಿರುವಂತೆ ಗ್ರಾಮ ಪಂಚಾಯತಿಗಳ ಪಾತ್ರ ಮತ್ತು ಜವಾಬ್ದಾರಿಗಳು. ಇವುಗಳನ್ನು ಮುದ್ರಿಸಿ ಶಿಕ್ಷಣ ಇಲಾಖೆ, ಡಿಎಸ್‌ಇಆರ್‌ಟಿ ಮತ್ತು 34 ಡಯಟ್‌ಗಳಿಗೆ ಹಂಚಲಾಗಿದೆ.

### ವೀಕ್ಷಣಾಲಯದಲ್ಲಿ ಸ್ವಾತಂತ್ರ್ಯ ದಿನಾಚರಣೆ

ಭಾರತದ 69ನೇ ಸ್ವಾತಂತ್ರ ದಿನಾಚರಣೆ ಅಂಗವಾಗಿ ಸಿಸಿಎಲ್ ಮತ್ತು ವೀಕ್ಷಣಾ ಗೃಹ, ಬೆಂಗಳೂರು ಜಂಟಿಯಾಗಿ ಆಗಸ್ಟ್ 15ರಂದು ಸ್ವಾತಂತ್ರ್ಯ ದಿನವನ್ನು ಆಚರಿಸಿದವು. ಮಕ್ಕಳು, ವೀಕ್ಷಣಾಲಯದ ಸಿಬ್ಬಂದಿ, ಸಿಸಿಎಸ್ ಸಿಬ್ಬಂದಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈಕಾಲಜಿಕಲ್ ರಿಸರ್ಚ್ (IIPR) ವಿದ್ಯಾರ್ಥಿಗಳು ಧ್ವಜಾರೋಹಣ ಸಮಾರಂಭದಲ್ಲಿ ಭಾಗವಹಿಸಿದರು. IIPR ಸಹಯೋಗದಲ್ಲಿ ಮಕ್ಕಳಿಗಾಗಿ ಮನೋರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

### "ಸಾವಿತ್ರಿಬಾಯಿ ಫುಲೆ : ಶಿಕ್ಷಣಕ್ಕೆ ಅವರ ಕೊಡುಗೆ" ಕುರಿತಂತೆ ಉಪನ್ಯಾಸ

ಮಂಗಳೂರು ವಿಜಯ 2015 ಸೆಪ್ಟೆಂಬರ್ 12ರಂದು 'ಸಾವಿತ್ರಿಬಾಯಿ ಫುಲೆ : ಶಿಕ್ಷಣಕ್ಕೆ ಅವರ ಕೊಡುಗೆ' ಎಂಬ ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು. ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಮತ್ತು ಸಾರ್ವಜನಿಕರು ಸೇರಿದಂತೆ ಸುಮಾರು 60 ಜನ ಭಾಗವಹಿಸಿದರು. ಮಹಾರಾಷ್ಟ್ರದಲ್ಲಿ ಜನಿಸಿ ಆಗಿನ ಬ್ರಿಟಿಷ್ ಸರಕಾರದಲ್ಲಿ ಮಹಿಳಾ ಹಕ್ಕುಗಳಿಗಾಗಿ ಹೋರಾಡಿದ ಸಾವಿತ್ರಿಬಾಯಿಯವರ ಜೀವನ ವೃತ್ತಾಂತ ಮತ್ತು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ನಡೆಸಿದ ತಮ್ಮ ಸಾಮಾಜಿಕ ಆಂದೋಲನಗಳಲ್ಲಿ ಅವರು ತಮ್ಮ ಪತಿ ಜ್ಯೋತಿರಾವ್ ಫುಲೆಯವರೊಂದಿಗೆ ಅನುಭವಿಸಿದ ಸಂಕಷ್ಟಗಳನ್ನು ವಿವರಿಸಿದರು.

### ಮಕ್ಕಳ ಹಕ್ಕುಗಳ ಕುರಿತು ಕಾನೂನು ಸಾಕ್ಷರತೆ ಕಾರ್ಯಕ್ರಮ

ಮಕ್ಕಳ ಹಕ್ಕುಗಳ ಕುರಿತು ಕಾನೂನು ಸಾಕ್ಷರತೆಯ ಕಾರ್ಯಕ್ರಮವನ್ನು 2015 ಅಕ್ಟೋಬರ್ 31ರಂದು ರಾಮನಗರ ತಾಲೂಕಿನ ಬಿಡದಿ ಹೋಬಳಿಯ ವಿಶ್ವಚೇತನ ಪ್ರೌಢ ಶಾಲೆಯಲ್ಲಿ ಆಯೋಜಿಸಲಾಗಿತ್ತು. ರಾಮನಗರ ಡಿಸಿಪಿಯು ಅಧಿಕಾರಿ ತಾಜುದ್ದೀನ್ ಖಾನ್ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಮಕ್ಕಳ ಹಕ್ಕುಗಳ ಬಗ್ಗೆ ಸಮಗ್ರವಾಗಿ ಮಾತಾಡಿದ ಅವರು ಮುಖ್ಯವಾಗಿ, ಪಾಲ್ಗೊಳ್ಳುವ ಹಕ್ಕು, ಅಭಿವೃದ್ಧಿಹೊಂದುವ ಹಕ್ಕು, ರಕ್ಷಣೆ ಪಡೆಯುವ ಹಕ್ಕು ಮತ್ತು ಬದುಕುಳಿಯುವ ಹಕ್ಕು ಹೀಗೆ ನಾಲ್ಕು ಪ್ರಮುಖ ಹಕ್ಕುಗಳ ಸಮೂಹದ ಕುರಿತು ವಿವರಿಸಿದರು.

## ವೀಕ್ಷಣಾಲಯದಲ್ಲಿ ಮಕ್ಕಳ ದಿನಾಚರಣೆ

ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದವರು ಎಂದು ಭಾವಿಸಲಾಗಿ ಬೆಂಗಳೂರಿನ ವೀಕ್ಷಣಾಲಯದಲ್ಲಿ ವಾಸಿಸುವ ಮಕ್ಕಳಿಗೆ ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ದುಪ್ಪಟ್ಟು ವಿನೋದ ಉಣಬಡಿಸಲಾಯಿತು. ಮೊದಲ ಕಾರ್ಯಕ್ರಮವನ್ನು ನವೆಂಬರ್ ತಿಂಗಳ 7ರಂದು ಜೆಜೆ ತಂಡದ ಬೆಂಬಲದೊಂದಿಗೆ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈಕಾಲಜಿಕಲ್ ರೀಸರ್ಚ್‌ನ ವಿದ್ಯಾರ್ಥಿಗಳು ಮತ್ತು ಬೋಧಕರು ನಡೆಸಿಕೊಟ್ಟರು. ಕಿರುಚಿತ್ರಗಳು, ಆಟಗಳು, ಸಾಂಸ್ಕೃತಿಕ ಕಾರ್ಯಕ್ರಮ ಇವೆಲ್ಲವನ್ನು ಒಳಗೊಂಡ ಚಟುವಟಿಕೆಯ ಕೊನೆಯಲ್ಲಿ ಬಹುಮಾನಗಳು ಮತ್ತು ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಎರಡನೇ ಕಾರ್ಯಕ್ರಮವನ್ನು ಜೆಜೆ ತಂಡದ ವತಿಯಿಂದ ಸಿ.ಕೆ.ಉಷಾಲೇಖಅವರ ನೇತೃತ್ವದಲ್ಲಿ ಅನಂತಅವರ ನೆರವಿನೊಂದಿಗೆ ನವೆಂಬರ್ 14ರಂದು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ನೃತ್ಯ, ಸಮೂಹ ಗಾಯನ, ಸ್ಪರ್ಧಾತ್ಮಕ ಆಟಗಳು, ಬಹುಮಾನಗಳು, ಪ್ರಮಾಣಪತ್ರಗಳು ಇವುಗಳೊಂದಿಗೆ ಸಿಸಿಎಲ್ ತಂಡ, ವೀಕ್ಷಣಾಲಯದ ಕಾರ್ಯಕರ್ತರು ಮತ್ತು ಮಕ್ಕಳ ನಡುವೆ ವಿನೋದ ಸಂಭಾಷಣೆಗಳು ಇದ್ದವು. ಪ್ರೊ.ಎಲಿಜಬೆತ್ ಮಕ್ಕಳಿಗೆ ಪ್ರೇರಣಾತ್ಮಕವಾದ ಕಿರು ಉಪನ್ಯಾಸವನ್ನು ನೀಡಿದರು. ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ ಎಲ್ಲ ಬಗೆಯ ಭೇದಗಳನ್ನು ಮರೆತು, ವಯಸ್ಸಿಗಿಂತ ಎಳೆಯರಾದ ಭಾವನೆಯನ್ನು ತಾಳಿದರು, ಪರಸ್ಪರರ ನಡುವೆ ಸೌಹಾರ್ದದ ಸಂಬಂಧ ಏರ್ಪಟ್ಟಿತು ಎಂದರೆ ಅತಿಶಯೋಕ್ತಿ ಆಗಲಾರದು.

### 'ನಮ್ಮ ಮಕ್ಕಳ ಹಕ್ಕುಗಳೊಂದಿಗೆ ನಾವು ಆಟ ಆಡುತ್ತಿದ್ದೇವೆಯೇ?'

'ನಮ್ಮ ಮಕ್ಕಳ ಹಕ್ಕುಗಳೊಂದಿಗೆ ನಾವು ಆಟ ಆಡುತ್ತಿದ್ದೇವೆಯೇ?'– ಇದು ಎನ್‌ಎಲ್‌ಎಸ್‌ಐಯುನಲ್ಲಿ ಪ್ರಾಧ್ಯಾಪಕರಾಗಿರುವ ಪ್ರೊ.ಬಾಬು ಮ್ಯಾಥ್ಯುಅವರು 2015 ನವೆಂಬರ್ 20ರಂದು ನೀಡಿದ ಉಪನ್ಯಾಸದ ವಿಷಯವಾಗಿತ್ತು. ಸಿಸಿಎಲ್ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 50 ಜನ ಉಪನ್ಯಾಸವನ್ನು ಆಲಿಸಿದರು. ಪ್ರೊ.ಮ್ಯಾಥ್ಯು ಅವರು ಎಷ್ಟು ವಯಸ್ಸಿನವರೆಗೆ ಮಗು ಎನ್ನಬಹುದು ಎನ್ನುವುದರ ಕುರಿತು ಇರುವ ವಾಗ್ವಾದಗಳ ಕುರಿತು ವಿವರಿಸಿ, ಮಗುವನ್ನು ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸುವ ವಿವಿಧ ಕಾನೂನುಗಳು ಮತ್ತು ಅಂತರ ರಾಷ್ಟ್ರೀಯ ಸಾಧನವಿಧಾನಗಳ ಕುರಿತು ಮಾಹಿತಿ ನೀಡಿದರು. ಜಾರಿಯಲ್ಲಿರುವ ಕಾನೂನುಗಳು ಮತ್ತು ಕಾರ್ಯನೀತಿಗಳು ತಮ್ಮ ಸ್ವಭಾವದಲ್ಲಿ ಮಕ್ಕಳ ಸ್ನೇಹಿಗಳಾಗಿರಬೇಕು ಎಂಬುದನ್ನು ಒತ್ತಿ ಹೇಳಿದರು.

### "ಹೆಣ್ಣು ಮಗುವಿನ ಶಿಕ್ಷಣ : ಸವಾಲುಗಳು ಮತ್ತು ಸಾಧ್ಯತೆಗಳು" ಕುರಿತು ಉಪನ್ಯಾಸ

ಪ್ರೊ.ನೇತ್ರಾವತಿ ಗೌಡ "ಹೆಣ್ಣು ಮಗುವಿನ ಶಿಕ್ಷಣ : ಸವಾಲುಗಳು ಮತ್ತು ಸಾಧ್ಯತೆಗಳು" ಕುರಿತು ಉಪನ್ಯಾಸವನ್ನು ನೀಡಿದರು. 2015 ನವೆಂಬರ್ 28ರಂದು ರಾಮನಗರದ ಎಸ್‌ಡಿಎಂಸಿಸಿಎಫ್ ಕಛೇರಿಯಲ್ಲಿ ಆಯೋಜಿಸಲಾಗಿದ್ದ ಈ ಉಪನ್ಯಾಸ ಕಾರ್ಯಕ್ರಮದಲ್ಲಿ 57 ಜನ ಭಾಗವಹಿಸಿದರು. ಹೆಣ್ಣುಮಕ್ಕಳು ಶಿಕ್ಷಣವನ್ನು ಪಡೆಯುವುದರಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಒಳನೋಟವನ್ನು ನೀಡಿದ ಪ್ರೊ.ನೇತ್ರಾವತಿಯವರು ಪ್ರಸ್ತುತ ಪಿತೃಪ್ರಧಾನ ಸಮಾಜದ ಮನೋಭಾವದಲ್ಲಿ ಬದಲಾವಣೆ ಬಾರದೇ ಹೆಣ್ಣುಮಕ್ಕಳು ಶಿಕ್ಷಿತರಾಗಲು ಸಾಧ್ಯವಾಗುವುದಿಲ್ಲ ಎಂದು ಆತಂಕವನ್ನು ವ್ಯಕ್ತಪಡಿಸಿದರು.

## ಇತರ ಚಟುವಟಿಕೆಗಳು

ನೇಪಾಳದ ಶಾಸಕಾಂಗ ಸಮಿತಿಯ ಗೌರವಾನ್ವಿತ ಸಂಸದರ ನಿಯೋಗ 2016 ಆಗಸ್ಟ್ 26ರಂದು CCL NLSIU ಗೆ ಭೇಟಿ ನೀಡಿತು. ಅರ್ಲಿನ್ ಮನೋಹರನ್ ಸಿಸಿಎಲ್ ಮತ್ತು ಕಾರ್ಯಕ್ರಮಗಳ ಕುರಿತು ಸಂಕ್ಷಿಪ್ತ ವಿವರಣೆಯನ್ನು ನೀಡಿದರು ಮತ್ತು ಸ್ಯಾಮುಅಲ್‌ಅವರು ಸಿಸಿಎಲ್ ಬಾಲಕಾರ್ಮಿಕತೆ ಕುರಿತು ಕೈಗೊಂಡ ಕೆಲಸಗಳು ಮತ್ತು ಸಿಎಲ್‌ಪಿಆರ್ ಅಧಿನಿಯಮದಲ್ಲಿ ಇತ್ತೀಚೆಗೆ ಆಗಿರುವ ತಿದ್ದುಪಡಿಗಳ ಕುರಿತು ವಿವರಿಸಿದರು. ದೆಹಲಿಯ ಐಎಲ್‌ಐ ಈ ಭೇಟಿಯ ಸಂಚಾಲನೆಯನ್ನು ಮಾಡಿತು.

## ಸಿಸಿಎಲ್ 20 ವರ್ಷಗಳ ವಿಶೇಷ ವಾರ್ತಾಪತ್ರದ ಬಿಡುಗಡೆ

ಸಿಸಿಎಲ್ ಎನ್‌ಎಲ್‌ಎಸ್‌ಐಯು 2016 ಏಪ್ರಿಲ್ 1ರಂದು ತನ್ನ ಅಸ್ತಿತ್ವದ 20 ವರ್ಷವನ್ನು ಮುಗಿಸಿತು. ಇದರ ಸವಿನೆನಪಿನಲ್ಲಿ ಒಂದು ವಿಶೇಷ ವಾರ್ತಾಪತ್ರವನ್ನು ಹೊರಡಿಸಲಾಯಿತು. 2016 ಆಗಸ್ಟ್ 28ರಂದು ನಡೆದ NLSIU ವಾರ್ಷಿಕ ಘಟಿಕೋತ್ಸವದ ಸಂದರ್ಭದಲ್ಲಿ ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರು ವಾರ್ತಾಪತ್ರವನ್ನು ಬಿಡುಗಡೆ ಮಾಡಿದರು; ಮೊದಲ ಪ್ರತಿಯನ್ನು ಗೌರವಾನ್ವಿತ ರಾಷ್ಟ್ರಾಧ್ಯಕ್ಷರಿಗೆ ಸಲ್ಲಿಸಲಾಯಿತು



### ಜಾಗತೀಕರಣ, ಕೃಷಿ ಬಿಕ್ಕಟ್ಟು ಮತ್ತು ಆಹಾರ ಭದ್ರತೆ ಕುರಿತು ತಜ್ಞ ಚರ್ಚೆ

ಜಾಗತೀಕರಣ, ಕೃಷಿ ಬಿಕ್ಕಟ್ಟು ಮತ್ತು ಆಹಾರ ಭದ್ರತೆ ಕುರಿತು ತಜ್ಞ ಚರ್ಚೆಯೊಂದನ್ನು 2015 ಡಿಸೆಂಬರ್ 23ರಂದು ಆಯೋಜಿಸಲಾಗಿತ್ತು. ಆಹಾರ ಭದ್ರತೆಯ ಕುರಿತು ಪರ್ಯಾಯ ಕಾನೂನು ಚೌಕಟ್ಟನ್ನು ಪರಿಕಲ್ಪಿಸುವ ನಿಟ್ಟಿನಲ್ಲಿ ಆಲೋಚಿಸಲಾಗಿರುವ ಕಾರ್ಯಕ್ರಮಗಳ ಸರಣಿಯಲ್ಲಿ ಇದು ಮೊದಲನೆಯದಾಗಿತ್ತು. ಬೆಂಗಳೂರಿನ ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್ಸ್‌ಟಿಟ್ಯೂಟ್‌ನ ಪ್ರೊ.ವಿ.ಕೆ.ರಾಮಚಂದ್ರನ್ ಮತ್ತು ಪ್ರೊ.ಮಧುರಾ ಸ್ವಾಮಿನಾಥನ್, ಕರ್ನಾಟಕ ಅಗ್ರಿಕಲ್ಚರಲ್ ಪ್ರೈಸ್ ಕಮಿಷನ್‌ನ ಪ್ರೊ.ಪ್ರಕಾಶ್ ಕಮ್ಮರಾಡಿ ಮತ್ತು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಎಸ್.ವರಲಕ್ಷ್ಮಿ ಇವರು ಮುಖ್ಯ ಭಾಗಿಗಳಾಗಿದ್ದರು. ಪ್ರೊ.ರಾಮಚಂದ್ರನ್ ಕೃಷಿ ಬಿಕ್ಕಟ್ಟು ಮತ್ತು ಆಹಾರ ಭದ್ರತೆ ನಡುವಿನ ಅಂತರ ಸಂಬಂಧದ ಕುರಿತು ಮಾತಾಡಿ, ಕೃಷಿ ಕ್ಷೇತ್ರದ ಪುನರುತ್ಥಾನಕ್ಕಾಗಿ ಗಮನ ಹರಿಸಬೇಕಾದ ಮೂಲಭೂತ ಅಂಶಗಳ ಕುರಿತು ಅರಿವನ್ನು ನೀಡಿದರು. ಪ್ರೊ.ಸ್ವಾಮಿನಾಥನ್ ಹಾಲಿ ಜಾರಿಯಲ್ಲಿರುವ ಕಾನೂನು ಚೌಕಟ್ಟು ಮತ್ತು ಆಹಾರ ಭದ್ರತೆಯ ಮೇಲೆ ಪರಿಣಾಮವನ್ನು ಬೀರುತ್ತಿರುವ, ಷರತ್ತುಬದ್ಧ ನಗದು ವರ್ಗಾವಣೆಗಳು, ಟಾರ್ಗೆಟಿಸ್ಮ್ ಮತ್ತು ಸಾಮಾಜಿಕ ಭದ್ರತೆಯ ಕುರಿತು ಆಯವ್ಯಯದಲ್ಲಿ ಕಡಿತ–ಇಂಥ ಆತಂಕಕಾರಿ ಪ್ರವೃತ್ತಿಗಳ ಕುರಿತು ಗಮನ ಸೆಳೆದರು. ಪ್ರೊ.ಕಮ್ಮರಾಡಿಯವರು ರೈತರ ಆತ್ಮಹತ್ಯೆಗೆ ಸಂಬಂಧಪಟ್ಟ ಅಂಶಗಳ ಕುರಿತು ಮಾತಾಡಿದರು. ಶ್ರೀಮತಿ ವರಲಕ್ಷ್ಮಿಯವರು ಕಳಿಸಿದ್ದ ಟಿಪ್ಪಣಿಯನ್ನು ಸಭೆಯಲ್ಲಿ ಓದಲಾಯಿತು; ಅದರಲ್ಲಿ ಮುಖ್ಯವಾಗಿ, ನವ ಉದಾರವಾದಿ ಕಾರ್ಯನೀತಿಗಳು ಐಸಿಡಿಎಸ್ ಮೇಲೆ ನಡೆಸುತ್ತಿರುವ ಆಕ್ರಮಣ ಮತ್ತು ಅಂಗನವಾಡಿಗಳು ಮತ್ತು ಅವುಗಳ ಕಾರ್ಯಾಚರಣೆಯ ಕುರಿತಾದ ವ್ಯವಸ್ಥೆಗೆ ಸಂಬಂಧಿಸಿದ ವಿಚಾರಗಳ ಕಡೆಗೆ ಗಮನ ಸೆಳೆಯಲಾಗಿತ್ತು. ಎನ್‌ಎಲ್‌ಎಸ್‌ಐಯುನ ಸಿಸಿಎಲ್ ಸಂಯೋಜಕರಾದ ಪ್ರೊ.ವಿ.ಎಸ್.ಎಲಿಜ಼ಬೆತ್ ಚರ್ಚೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಎನ್‌ಎಲ್‌ಎಸ್‌ಐಯು, ಬೆಂಗಳೂರು ವಿಶ್ವವಿದ್ಯಾಲಯ, ಐಎಸ್‌ಇಸಿ ಮತ್ತು ಎನ್‌ಐಎಎಸ್ ಸಂಸ್ಥೆಗಳ ಬೋಧಕರು, ಸಂಶೋಧನ ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

### • ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ

ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013 ಕುರಿತು ಜನಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ರಾಮನಗರ ತಾಲೂಕಿನ ಆವರಗೆರೆ ಗ್ರಾಮದಲ್ಲಿ 2016 ಫೆಬ್ರವರಿ 20ರಂದು ಕಾನೂನು ಸಾಕ್ಷರತೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಒಂದು ದಿನ ಮುಂಚೆ ಪ್ರತಿ ಕುಟುಂಬಕ್ಕೂ ರಾ.ಆ.ಭ.ಅಧಿನಿಯಮದ ಕುರಿತ ಕರಪತ್ರವನ್ನು ಹಂಚಲಾಗಿತ್ತು. ಕೃಷ್ಣ ಭಾರದ್ವಾಜ್ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಅಧಿನಿಯಮದಲ್ಲಿ ಬರುವ ಪ್ರಮುಖ ನಿಬಂಧನೆಗಳ ಬಗ್ಗೆ ಅವರು ವಿವರಿಸಿದರು. ಸುಮಾರು ನಲವತ್ತು ಜನ ಭಾಗವಹಿಸಿದರು. ಈ ಕಾರ್ಯಕ್ರಮವನ್ನು ಶಿಕ್ಷಣ ತಂಡ ಸಂಘಟಿಸಿತ್ತು.

### • ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ

ಅಚಿತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ರಾಮನಗರದಲ್ಲಿ 2016 ಮಾರ್ಚ್ 8ರಂದು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಅಧಿನಿಮಯ 2012 (POCSO) ಕುರಿತು ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಮಧ್ಯಾಹ್ನದ ಊಟದ ಕಾರ್ಯಕರ್ತರು ಮತ್ತು ಎಸ್‌ಡಿಎಂಸಿಸಿಎಫ್ ಸದಸ್ಯರು ಸಕ್ರಿಯವಾಗಿ ಭಾಗವಹಿಸಿದರು. ಜೆಜೆ ತಂಡದ ಅನುರೂಪಾ ಗಿಳಿಯಾಳ್ ಮತ್ತು ಅಂಜಲಿ ಶಿವಾನಂದ್ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಇಂಥದೇ ಇನ್ನೊಂದು ಕಾರ್ಯಕ್ರಮವನ್ನು ಸಿಸಿಎಲ್ ಕ್ಷೇತ್ರ ವಿಸ್ತರಣೆ ಕಛೇರಿಯಲ್ಲಿ 2016 ಜೂನ್ 11ರಂದು 18 ಜನ ಅಂಗನವಾಡಿ ಶಿಕ್ಷಕಿಯರಿಗಾಗಿ ಆಯೋಜಿಸಲಾಗಿತ್ತು. ಕನ್ನಡ ಸಾಕ್ಷ್ಯಚಿತ್ರ, 'ಕೋಮಲ್' ತೋರಿಸಲಾಯಿತು. ಈ ಚಿತ್ರದಲ್ಲಿ ಬಿಂಬಿಸಲಾದ ಐದು ಪ್ರಮುಖ ಸಮಸ್ಯೆಗಳನ್ನು ಗುರುತಿಸಲು ಭಾಗಿಗಳಿಗೆ ಹೇಳಲಾಯಿತು, ಇದರ ನಂತರ, ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನು ನಿಭಾಯಿಸಿದ ಅವರ ಅನುಭವ ಮತ್ತು ಅವರು ಹಂಚಿಕೊಂಡ ಉದಾಹರಣೆಗಳ ಆಧಾರದ ಮೇಲೆ ಅಧಿನಿಯಮದ ಪ್ರಮುಖ ಅಂಶಗಳು ಕುರಿತು ಚರ್ಚೆಯನ್ನು ನಡೆಸಲಾಯಿತು. ಈ ಸಾಕ್ಷರತಾ ಕಾರ್ಯಕ್ರಮವನ್ನು ಶಿಕ್ಷಣ ತಂಡ ಸಂಘಟಿಸಿತ್ತು.

### • ಬಾಲ ನ್ಯಾಯ

ಮಹಿಳೆ ಮತ್ತು ಕಾನೂನು ಕೇಂದ್ರ, ಎನ್‌ಎಲ್‌ಎಸ್‌ಐಯು ಮತ್ತು ಸೇಂಟ್ ಜೋಸೆಫ್ಸ್ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ ಕಾನೂನು ಸಾಕ್ಷರತೆ ಕಾರ್ಯಕ್ರಮದ ಅಂಗವಾಗಿ ಎನ್‌ಎಲ್‌ಎಸ್‌ಐಯುನಲ್ಲಿ 2016 ಜನವರಿ 26ರಂದು ಎನ್‌ಎಲ್‌ಎಸ್‌ಐಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಅನೀಶಾ ಜಾನಿ ಕಿರೋರ ನ್ಯಾಯ ಅಧಿನಿಯಮ, 2015ರ ಕುರಿತು ಗೋಷ್ಠಿಯನ್ನು ನಡೆಸಿದರು. ಸುಮಾರು 35 ವಿದ್ಯಾರ್ಥಿಗಳು ಇದರ ಲಾಭವನ್ನು ಪಡೆದರು. ಗೋಷ್ಠಿಯ ನಡುವೆ ತೋರಿಸಲಾದ ಹಿಂದಿ ಚಿತ್ರ 'ಏಕ್ ಥಾ ಬಚ್‌ಪನ್' ವಿದ್ಯಾರ್ಥಿಗಳಿಗೆ ದೇಶಾದ್ಯಂತ ಕಿರೋರ ನ್ಯಾಯ ವ್ಯವಸ್ಥೆಯ ಅಡಿಯಲ್ಲಿ ವೀಕ್ಷಣಾ ಗೃಹಗಳಲ್ಲಿ ಇರುವ ಮಕ್ಕಳ ಬದುಕಿನ ಆಳವಾದ ಒಳನೋಟವನ್ನು ನೀಡಲು ಸಹಾಯಕವಾಯಿತು

### • ಬಾಲ ವಿವಾಹ ನಿಷೇಧ ಅಧಿನಿಮಯ

ಕನಕಪುರ ತಾಲೂಕಿನ ದೊಡ್ಡ ತಾಂಡ್ಯ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ 2016 ಏಪ್ರಿಲ್ 6ರಂದು ಬಾಲ ವಿವಾಹ ನಿಷೇಧ ಅಧಿನಿಯಮ, 2006ರ ಕುರಿತು ಕಾನೂನು ಸಾಕ್ಷರತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಆ್ಯಕ್ಷನ್ ಏಡ್‌ನ ಪ್ರಮೋದ್ ನೈಕೋಡಿಯವರು ಸಂಪನ್ಮೂಲ ವ್ಯಕ್ತಿಯಾಗಿದ್ದರು. ಗ್ರಾಮ ಪಂಚಾಯತಿ ಸದಸ್ಯರು, ಎಸ್‌ಡಿಎಂಸಿ ಸದಸ್ಯರು ಮತ್ತು ಗ್ರಾಮದ ಯುವಜನರು ಸಕ್ರಿಯವಾಗಿ ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಕನ್ನಡ ಸಾಕ್ಷ್ಯಚಿತ್ರ 'ಅಕ್ರಮ'ವನ್ನು ಪ್ರದರ್ಶಿಸಿ ಚರ್ಚೆಯನ್ನು ನಡೆಸಲಾಯಿತು. ಈ ಕಾರ್ಯಕ್ರಮವನ್ನು ಶಿಕ್ಷಣ ತಂಡ ಸಂಘಟಿಸಿತ್ತು.

### • ಬಾಲ ಕಾರ್ಮಿಕ ಮತ್ತು ಮಾನವ ಕಳ್ಳಸಾಗಣೆ

ಮಕ್ಕಳನ್ನು ಉದ್ದೇಶಿಸಿ ಬಾಲ ಕಾರ್ಮಿಕ ಮತ್ತು ಮಾನವ ಕಳ್ಳಸಾಗಣೆ ಸಮಸ್ಯೆ ಕುರಿತು ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ರಾಯಚೂರು ಜಿಲ್ಲೆಯಲ್ಲಿ 2016 ಮೇ 11ರಂದು ಹಮ್ಮಿಕೊಳ್ಳಲಾಗಿತ್ತು. ಸುಮಾರು 70 ಮಕ್ಕಳು ಭಾಗವಹಿಸಿದ ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿ ಸ್ಯಾಮುಅಲ್ ಸತ್ಯಶೀಲನ್ ಆಗಿದ್ದರು. ಬಾಲ ಕಾರ್ಮಿಕರು ಮತ್ತು ಮಾನವ ಕಳ್ಳಸಾಗಣೆ ಕುರಿತಾದ ಸಾಕ್ಷ್ಯಚಿತ್ರದ ಪ್ರದರ್ಶನದಿಂದ ಗೋಷ್ಠಿಯ ಆರಂಭ, ನಂತರ ಚರ್ಚೆ. ನಂತರ ಮಕ್ಕಳು, "ಬಾಲ ದುಡಿಮೆಯನ್ನು ನಿಭಾಯಿಸುವ ಮಾರ್ಗಗಳು" ಎನ್ನುವ ವಿಷಯದ ಸುತ್ತ ಕಥೆ ಬರೆಯುವುದು, ಚಿತ್ರ ಬರೆಯುವುದು ಇತ್ಯಾದಿ ಕಲಿಕಾ ಚಟುವಟಿಕೆಗಳಲ್ಲಿ ಭಾಗವಹಿಸಿದರು; ತಾವು ಕಾನೂನು ಸಾಕ್ಷರತಾ ಕಾರ್ಯಕ್ರಮದಲ್ಲಿ ಕಲಿತ ಅಂಶಗಳನ್ನು ಮರುಮನನ ಮಾಡಿಕೊಳ್ಳಲು ಈ ಚಟುವಟಿಕೆಗಳು ನೆರವಾದವು. ಈ ಕಾರ್ಯಕ್ರಮವನ್ನು ಶಿಕ್ಷಣ ತಂಡದ ಎಸ್.ಡಿ.ಎಮ್.ಸಿ. ಸಂಚಾಲಕರಾದ ಹಫೀಸ್ ಜುಲ್ಲಾ ಸಂಘಟಿಸಿದ್ದರು.

### • ಶಿಕ್ಷಣದ ಹಕ್ಕು ಮತ್ತು ಬಾಲ ದುಡಿಮೆ ಕುರಿತು ಬೀದಿ ನಾಟಕ

ಲೀಗಲ್ ಸರ್ವಿಸಸ್ ಕ್ಲಿನಿಕ್, ಎನ್‌ಎಲ್‌ಎಸ್‌ಐಯು ಮತ್ತು ಕೆಎಸ್‌ಸಿಪಿಸಿಆರ್ ಸಹಯೋಗದೊಂದಿಗೆ ಮಕ್ಕಳ ಶಿಕ್ಷಣದ ಹಕ್ಕು ಮತ್ತು ಬಾಲ ದುಡಿಮೆಯ ಕುರಿತು ಬೀದಿ ನಾಟಕವನ್ನು 2016 ಮೇ 20ರಂದು ಪ್ರದರ್ಶಿಸಲಾಯಿತು. ಎನ್‌ಎಲ್‌ಎಸ್‌ಐಯು ವಿದ್ಯಾರ್ಥಿಗಳು ಪ್ರದರ್ಶಿಸಿದ ಈ ಬೀದಿ ನಾಟಕವು ಶಿಕ್ಷಣದ ಹಕ್ಕು ಅಧಿನಿಮಯದ ನಿಬಂಧನೆಗಳು, ಬಾಲ ದುಡಿಮೆ ಸಮಸ್ಯೆಗಳು, ಬಾಲೆಯರ ಶಿಕ್ಷಣ ಮತ್ತು ಈ ಹಿನ್ನೆಯಲ್ಲಿ ಶಿಕ್ಷಣದ ಮಹತ್ವ ಇವುಗಳ ಕುರಿತು ಪ್ರೇಕ್ಷಕರ ಗಮನವನ್ನು ಸೆಳೆಯಿತು. ಕೆಎಸ್‌ಸಿಪಿಸಿಆರ್ ತನ್ನ 'ಶಾಲೆ ಕಡೆ ನನ್ನ ನಡೆ' ಹಾಜರಾತಿ ಆಂದೋಲನದಲ್ಲಿ ವೇದಿಕೆಯನ್ನು ಒದಗಿಸಿದರು. ಕುಮಾರಸ್ವಾಮಿ ಟಿ ಸಂಚಾಲಕರಾಗಿದ್ದ ಕಾರ್ಯಕ್ರಮದಲ್ಲಿ ಸುಮಾರು 45 ಜನ ಭಾಗವಹಿಸಿದ್ದರು. ಪ್ರದರ್ಶಿಸಲಾದ ಬೀದಿ ನಾಟಕದ ವಿಡಿಯೋ ನೋಡಲು ಲಿಂಕ್: https://youtu.be/aGYdQDp_n3o.

### • ಆಹಾರದ ಹಕ್ಕು (RTF) ಮತ್ತು ಅದರ ಅನುಲಾಭಗಳು

ಆರ್‌ಟಿಎಫ್ ತಂಡದ ಡಾ.ನೀತು ಶರ್ಮಾ ಮತ್ತು ಜ಼ರಾ ಕೈಸರ್ 2016 ಜೂನ್ 14ರಂದು, ಸೇಂಟ್ ಜೋಸೆಫ್ಸ್ (ಸ್ವಾಯತ್ತ) ಕಾಲೇಜಿನ ಮೊದಲ ವರ್ಷದ ಸ್ನಾತಕೋತ್ತರ ಸಮಾಜಕಾರ್ಯ ವಿದ್ಯಾರ್ಥಿಗಳಿಗಾಗಿ ಕಾನೂನು ಸಾಕ್ಷರತೆಯ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಗೋಷ್ಠಿಯಲ್ಲಿ ಆಹಾರದ ಹಕ್ಕು, ಅದರ ವಿವಿಧ ಅಂಗಗಳು, ಅದರ ಅನುಷ್ಠಾನ ಸಾಧ್ಯವಾಗಬೇಕಾದರೆ ಅಗತ್ಯವಾದ ಅಧಿಕಾರಗಳು ಮತ್ತು ಅದರ ಪ್ರಗತಿಪರ ಸಾಕ್ಷಾತ್ಕಾರದಲ್ಲಿ ಇರುವ ಸಮಸ್ಯೆಗಳು ಇವುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸಮಗ್ರ ಪರಿಕಲ್ಪನೆಯ ಕುರಿತು ಶಿಕ್ಷಣ ನೀಡಲಾಯಿತು. ವಿದ್ಯಾರ್ಥಿಗಳನ್ನು ಗೋಷ್ಠಿಯಲ್ಲಿ ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013ರ ಸ್ಥೂಲ ಪರಿಚಯ ಮತ್ತು ಅದರ ಮೌಲ್ಯಾಂಕನವನ್ನು ನೀಡಲಾಯಿತು. ಇದರ ನಂತರ ನಡೆದ ವಿಚಾರ ವಿನಿಮಯದಲ್ಲಿ ಅನುಷ್ಠಾನದಲ್ಲಿರುವ ವಾಸ್ತವ ಸಮಸ್ಯೆಗಳು, ಲೋಪದೋಷಗಳು ಮತ್ತು ಕಾರ್ಯನೀತಿಯಲ್ಲಿರುವ ಕೊರತೆಗಳು, ದೇಶದೊಳಗೆ ಆಹಾರದ ಹಕ್ಕನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಅವುಗಳನ್ನು ಸರಿಪಡಿಸಬೇಕಾದ ಅಗತ್ಯಗಳು– ಇವುಗಳು ಚರ್ಚೆಗೆ ಒಳಗಾದುವು.



## ಮಕ್ಕಳಲ್ಲಿ ವೈಜ್ಞಾನಿಕ ಮನೋವೃತ್ತಿ : ಪೋಷಕರ ಪಾತ್ರ

ಮಂಡ್ಯದಲ್ಲಿರುವ ಶಿಕ್ಷಣ ತಂಡವು 2016 ಮಾರ್ಚ್ 19ರಂದು ಮಂಡ್ಯದ ಸರಕಾರಿ ಕಾಲೇಜಿನ ಮನೋವಿಜ್ಞಾನ ವಿಭಾಗದ ಸಹಯೋಗದಲ್ಲಿ 'ಮಕ್ಕಳಲ್ಲಿ ವೈಜ್ಞಾನಿಕ ಮನೋವೃತ್ತಿ: ಪೋಷಕರ ಪಾತ್ರ' ಎಂಬ ವಿಷಯದ ಕುರಿತು ಕಾರ್ಯಶಿಬಿರವನ್ನು ಹಮ್ಮಿಕೊಂಡಿತ್ತು. ಕರ್ನಾಟಕ ವೈಜ್ಞಾನಿಕ ಮನೋವೃತ್ತಿ ಆಂದೋಲನದ ಕಾರ್ಯದರ್ಶಿ ಎಂ.ಅಬ್ದುಲ್ ರೆಹಮಾನ್ ಪಾಷಾರವರು ಪಿಪಿಟಿ ಮಂಡನೆಯ ಸಹಿತವಾಗಿ ಸಹಭಾಗಿ ಗೋಷ್ಠಿಯನ್ನು ನಡೆಸಿಕೊಟ್ಟರು. ಎಪ್ಪತ್ತು ಜನ ಪೋಷಕರು, ಎಸ್‌ಡಿಎಂಸಿ ಸದಸ್ಯರು ಭಾಗವಹಿಸಿದ್ದ ಗೋಷ್ಠಿಯು ಮಾಹಿತಿ ಮತ್ತು ಸ್ಫೂರ್ತಿದಾಯಕವಾಗಿತ್ತು.

## ಪುನಶ್ಚೈತನ್ಯಕಾರಿ ನ್ಯಾಯ ಮತ್ತು ಕಿಶೋರರು: ಭಾರತದ ಯುವಜನರಿಗಾಗಿ ಹೊಸ ಪ್ರಕ್ರಿಯೆಗಳ ಅನುಷ್ಠಾನ

ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕದ ಮಿಸ್ಸೌರಿ ವೆಸ್ಟರ್ನ್ ಸ್ಟೇಟ್ ಯುನಿವರ್ಸಿಟಿಯ, ಡಿಪಾರ್ಟ್‌ಮೆಂಟ್ ಆಫ್ ಕ್ರಿಮಿನಲ್ ಜಸ್ಟಿಸ್, ಲೀಗಲ್ ಸ್ಟಡೀಸ್ ಅಂಡ್ ಸೋಶಿಯಲ್ ವರ್ಕ್ ವಿಭಾಗದ ಕಾನೂನು ಅಧ್ಯಯನ ಪ್ರಾಧ್ಯಾಪಕರಾದ ಪ್ರೊ.ಜೋಆನ್ ಕಾಜ್, 'ಪುನಶ್ಚೈತನ್ಯಕಾರಿ ನ್ಯಾಯ ಮತ್ತು ಕಿಶೋರರು: ಭಾರತದ ಯುವಜನರಿಗಾಗಿ ಹೊಸ ಪ್ರಕ್ರಿಯೆಗಳ ಅನುಷ್ಠಾನ' ಎಂಬ ವಿಷಯದ ಕುರಿತು ಸಾರ್ವಜನಿಕ ಉಪನ್ಯಾಸವನ್ನು ನೀಡಿದರು. ಎಸ್‌ಎಲ್‌ಎಸ್‌ಐಯುನಲ್ಲಿ 2016 ಜನವರಿ 14ರಂದು ನಡೆದ ಈ ಕಾರ್ಯಕ್ರಮದಲ್ಲಿ ಎನ್ಫೋಲ್ಡ್, ನಿಮ್ಹಾನ್ಸ್, ಜಸ್ಟೀಸ್ ಅಂಡ್ ಕೇರ್, ಪೀಸ್‌ಮೇಕರ್ಸ್, ಎಎಲ್‌ಎಫ್, ಎಸ್‌ಎಲ್‌ಎಸ್‌ಐಯು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಪರಾಧ ನ್ಯಾಯ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಮತ್ತು ಭಾರತದ ಸಂದರ್ಭದಲ್ಲಿ ಪುನಶ್ಚೈತನ್ಯಕಾರಿ ನ್ಯಾಯದ ವಿಧಾನಗಳನ್ನು ಅಳವಡಿಸಿಕೊಳ್ಳುವ ಸಾಧ್ಯತೆಗಳ ಕುರಿತು ಅರ್ಥಪೂರ್ಣವಾದ ಚರ್ಚೆಗೆ ಉಪನ್ಯಾಸವು ಚಾಲನೆ ನೀಡಿತು.

## ಪುನಶ್ಚೈತನ್ಯಕಾರಿ ನ್ಯಾಯ

ಜೆಜೆ ತಂಡ ಪುನಶ್ಚೈತನ್ಯಕಾರಿ ನ್ಯಾಯದ ಕುರಿತು ಇಂತಹದೇ ಇನ್ನೊಂದು ಉಪನ್ಯಾಸ ಕಾರ್ಯಕ್ರಮವನ್ನು 2016 ಫೆಬ್ರವರಿ 3ರಂದು ಬಾಸ್ಕೊದಲ್ಲಿ ಏರ್ಪಡಿಸಿತ್ತು. ಈ ಸಾರ್ವಜನಿಕ ಉಪನ್ಯಾಸವನ್ನು ಯುಎಸ್‌ಎನ ಇಂಪ್ಯಾಕ್ಟ್ ಜಸ್ಟಿಸ್‌ನ ಸುಜಾತ ಬಾಳಿಗ ನಡೆಸಿಕೊಟ್ಟರು. ಅರ್ಪಣ್, ಎಪಿಎಸ್‌ಎ, ಚೈಲ್ಡ್ ಲೈನ್, ಸಿಎಸ್‌ಜೆ, ಸೇವ್ ದ ಚಿಲ್ಡ್ರನ್, ಪರಿವರ್ತನ್, ತುಳಿರ್–ಚಿಪಿಎಚ್‌ಸಿಎಸ್‌ಎ, ಜಸ್ಟಿಸ್ ಅಂಡ್ ಕೇರ್ ಸದಸ್ಯರು, ಯುನಿಸೆಫ್–ಇಂಡಿಯಾದ ನೀನಾ ನಾಯಕ್ ಮುಂತಾದವರು ಭಾಗವಹಿಸಿದ್ದರು. ಮುಖ್ಯವಾಗಿ ಅಪರಾಧ ನ್ಯಾಯ ವ್ಯವಸ್ಥೆಯ ಸೋಲಿನ ಹಿನ್ನೆಲೆಯಲ್ಲಿ ಪುನಶ್ಚೈತನ್ಯಕಾರಿ ನ್ಯಾಯ ವಿಧಾನಗಳನ್ನು ಅಳವಡಿಸಿಕೊಳ್ಳುವ ಸಾಧ್ಯತೆ ಮತ್ತು 'ಸರ್ಕಲ್ಸ್' ಕುರಿತು ಕೆಲಸವನ್ನು ಆರಂಭಿಸುವ ಕುರಿತು ವಿಚಾರ ವಿನಿಮಯ ನಡೆಯಿತು.

## ಶಿಕ್ಷಣ ಹಕ್ಕು ಅಧಿನಿಯಮ ಮತ್ತು ಸಮಕಾಲೀನ ಸನ್ನಿವೇಶ

ಸಿಸಿಎಲ್ ಶಿವಮೊಗ್ಗ ಜಿಲ್ಲೆಯಲ್ಲಿ 2016 ಏಪ್ರಿಲ್ 30ರಂದು ಉಪನ್ಯಾಸವನ್ನು ಏರ್ಪಡಿಸಿತ್ತು. 'ಆರ್‌ಟಿಇ ಅಧಿನಿಯಮ ಮತ್ತು ಸಮಕಾಲೀನ ಸನ್ನಿವೇಶ' ಕುರಿತು ಚಂದ್ರಗುತ್ತಿಯವರು ನೀಡಿದ ಉಪನ್ಯಾಸ–ಸಂವಾದ ಕಾರ್ಯಕ್ರಮದಲ್ಲಿ ಸುಮಾರು 285 ಜನ ಭಾಗವಹಿಸಿದ್ದರು.

## ಮಕ್ಕಳ ಮೇಲೆ ಶಿಕ್ಷಣ ವ್ಯವಸ್ಥೆಯ ಶೈಕ್ಷಣಿಕ ಹೊರೆ

ಆರ್‌ಟಿಇ ತಂಡವು ಬೆಂಗಳೂರಿನಲ್ಲಿ 2016 ಜೂನ್ 25ರಂದು ಸಾರ್ವಜನಿಕ ಉಪನ್ಯಾಸವನ್ನು ಏರ್ಪಡಿಸಿತ್ತು. ನಿಮ್ಹಾನ್ಸ್‌ನ ಮಗು ಮತ್ತು ಕಿಶೋರ ಮನೋವೈದ್ಯ ವಿಜ್ಞಾನ ವಿಭಾಗದ ಡಾ.ಚೈತ್ರಾ ಜಿ. ಕೃಷ್ಣ ಮತ್ತು ಚಂಪಾ ಸಹಾಅವರು ಉಪನ್ಯಾಸವನ್ನು ನೀಡಿದರು. ಶೀರ್ಷಿಕೆಯೇ ಹೇಳುವಂತೆ ಉಪನ್ಯಾಸವು ಇಂದಿನ ಮಕ್ಕಳು ತಮ್ಮ ದೈನಂದಿನ ಬದುಕಿನಲ್ಲಿ ಹೆಣಗಾಡಬೇಕಾದ ಶೈಕ್ಷಣಿಕ ಒತ್ತಡಗಳು ಮತ್ತು ನಿರೀಕ್ಷೆಗಳ ಕುರಿತು ಗಮನ ಸೆಳೆಯಿತು ಮತ್ತು ಪೋಷಕರು, ಸ್ನೇಹಿತರು ಮತ್ತು ಸಮಾಜ ಎಲ್ಲರೂ ತಾವು ಪ್ರತಿಯೊಂದು ರೀತಿಯಲ್ಲಿಯೂ ಯಾವಾಗಲೂ ಉತ್ಕೃಷ್ಟವಾಗಿರಬೇಕು ಎಂಬ ನಿರೀಕ್ಷೆ ಹೆಚ್ಚುತ್ತಿರುವ ಪ್ರವೃತ್ತಿಯ ಕುರಿತು ಚರ್ಚೆ ನಡೆಯಿತು. ಶೈಕ್ಷಣಿಕವಾಗಿ ಯಶಸ್ಸನ್ನು ಸಾಧಿಸಲೇ ಬೇಕು ಎಂಬ ಒತ್ತಡ ಮಕ್ಕಳ ಮೇಲೆ ಎಷ್ಟಿದೆ ಎಂದರೆ ಅಕಸ್ಮಾತ್ತಾಗಿ ಮಕ್ಕಳು ಎದುರಿಸಬೇಕಾಗಿ ಬರುವ ಅಯಶಸ್ಸು ಅತ್ಯಂತ ಹೀನ ಎನ್ನುವ ರೀತಿಯಲ್ಲಿ ನೋಡಲಾಗುತ್ತಿದೆ. ಸಂವಾದದ ರೂಪದಲ್ಲಿದ್ದ ಈ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾಮಾಜ ಕಾರ್ಯಕರ್ತರು, ಮಕ್ಕಳ ಹಕ್ಕುಗಳ ಕಾರ್ಯಕರ್ತರು, ಶಿಕ್ಷಕರು, ಶಾಲೆ ಕಾಲೇಜುಗಳ ವಿದ್ಯಾರ್ಥಿಗಳು, ಮಾಧ್ಯಮದವರು ಹೀಗೆ ಸುಮಾರು 54 ಜನ ಭಾಗವಹಿಸಿದ್ದರು. ಅವರೆಲ್ಲರೂ ಉಪನ್ಯಾಸದಲ್ಲಿ ವ್ಯಕ್ತವಾದ ವಾಸ್ತವಾಂಶ ಮತ್ತು ವಸ್ತುನಿಷ್ಠ ದೃಷ್ಟಿಕೋನವನ್ನು ಮೆಚ್ಚಿಕೊಂಡರು.

# ಮಕ್ಕಳ ಹಕ್ಕುಗಳ ಕುರಿತಾದ ಸಂಶೋಧನಾ ಕೇಂದ್ರಗಳ ಉತ್ತೇಜನ ಮತ್ತು ಸಾಂಸ್ಥೀಕರಣ

## ಚಾಣಕ್ಯ ನ್ಯಾಷನಲ್ ಲಾ ಯುನಿವರ್ಸಿಟಿಯಿಂದ ಭೇಟಿ

ಎನ್‌ಎಲ್‌ಎಸ್‌ಐಯುನ ಸಿಸಿಎಲ್‌ನ ಟಾಟಾ ಟ್ರಸ್ಟ್ ಅನುದಾನಿತ, “ಇತರ ವಿಶ್ವವಿದ್ಯಾಲಯಗಳಲ್ಲಿ ಮಕ್ಕಳ ಹಕ್ಕುಗಳ ಕುರಿತಾದ ಸಂಸೋಧನಾ ಕೇಂದ್ರಗಳನ್ನು ಉತ್ತೇಜಿಸುವುದು ಮತ್ತು ಸಾಂಸ್ಥೀಕರಿಸುವುದು” ಚಟುವಟಿಕೆಯ ಅಂಗವಾಗಿ ಬಿಹಾರದ ಚಾಣಕ್ಯ ನ್ಯಾಷನಲ್ ಲಾ ಯುನಿವರ್ಸಿಟಿಯ ಉಪಕುಲಪತಿ ಪ್ರೊ.(ಡಾ.) ಎ.ಲಕ್ಷ್ಮಿನಾಥ್ ಮತ್ತು ಕುಲಸಚಿವರಾದ ಪ್ರೊ.(ಡಾ.)ಎಸ್.ಪಿ.ಸಿಂಗ್ 2015 ಆಗಸ್ಟ್ 4ರಂದು ಎನ್‌ಎಲ್‌ಎಸ್‌ಐಯುನ ಸಿಸಿಎಲ್‌ಗೆ ಭೇಟಿ ನೀಡಿದ್ದರು.

ಈ ಭೇಟಿಯ ಸಂದರ್ಭದಲ್ಲಿ ಚಾಣಕ್ಯ ನ್ಯಾಷನಲ್ ಲಾ ಯುನಿವರ್ಸಿಟಿಯಲ್ಲಿ ಮಕ್ಕಳ ಹಕ್ಕುಗಳ ಕೇಂದ್ರವನ್ನು ಸ್ಥಾಪಿಸುವ ಮತ್ತು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ನೀಡಬಹುದಾದ ಸಹಯೋಗದ ಕುರಿತು ಚರ್ಚಿಸಲಾಯಿತು. ಈ ಚರ್ಚೆಗಳಲ್ಲಿ, ಎನ್‌ಎಲ್‌ಎಸ್‌ಐಯು ವತಿಯಿಂದ ಉಪಕುಲಪತಿಗಳಾದ ಪ್ರೊ.(ಡಾ.) ಆರ್ ವೆಂಕಟ ರಾವ್, ಕುಲಸಚಿವರಾದ ಪ್ರೊ.(ಡಾ.) ಒ.ವಿ.ನಂದಿಮಠ್, ಎನ್‌ಎಲ್‌ಎಸ್‌ಐಯುನ ಸಿಸಿಎಲ್ ಅಧ್ಯಾಪಕ ವರ್ಗದ ಸಂಯೋಜಕರಾದ ಪ್ರೊ.(ಡಾ.)ಅಶೋಕ್ ಆರ್. ಪಾಟಿಲ್ ಮತ್ತು ಸಿಸಿಎಲ್ ಕಾರ್ಯಕ್ರಮ ಸಿಬ್ಬಂದಿ ಭಾಗವಹಿಸಿದ್ದರು. ಸಿಸಿಎ, ಎನ್‌ಎಲ್‌ಎಸ್‌ಐಯು ಮತ್ತು ಸಿಎನ್‌ಎಲ್‌ಯು ನಡುವೆ ಬೆಂಬಲ ಮತ್ತು ಸಹಯೋಗ ಸಾಧ್ಯವಿರುವ ಕ್ಷೇತ್ರಗಳು ಮತ್ತು ಅದರ ಸ್ವಭಾವದ ವಿವರಗಳಿಗೆ ಕಾರ್ಯಕ್ರಮ ಮುಖ್ಯಸ್ಥರೊಂದಿಗೆ ಅಂತಿಮರೂಪ ಕೊಡಲಾಯಿತು. ಬಿಹಾರದ ಸಿಎನ್‌ಎಲ್‌ಯು ಕಡೆಯಿಂದ ಪ್ರೊ.(ಡಾ.) ಎ.ಲಕ್ಷ್ಮೀಕಾಂತ್ ಮತ್ತು ಡಾ.ಎಸ್.ಪಿ.ಸಿಂಗ್ ಹಾಗೂ ಎನ್‌ಎಲ್‌ಎಸ್‌ಐಯು ಕಡೆಯಿಂದ ಫ್ಯಾಕಲ್ಟಿ ಕೊಆರ್ಡಿನೇಟರ್ ಪ್ರೊ.(ಡಾ.)ಅಶೋಕ್ ಆರ್.ಪಾಟಿಲ್ ಮತ್ತು ಸಿಸಿಎಲ್ ಪ್ರತಿನಿಧಿಯಾಗಿ ಅರ್ಲಿನ್ ಮನೋಹರನ್ ನಡುವೆ, ಬಿಹಾರದ ಸಿಎನ್‌ಎಲ್‌ಯುನಲ್ಲಿ ಮಕ್ಕಳ ಹಕ್ಕುಗಳ ಕೇಂದ್ರವನ್ನು ಸ್ಥಾಪಿಸುವ ಕುರಿತು ಒಂದು ಒಡಂಬಡಿಕೆಯನ್ನು ಸಹಿ ಮಾಡಲಾಯಿತು.

ಬಿಹಾರದ ಚಾಣಕ್ಯ ನ್ಯಾಷನಲ್ ಲಾ ಯುನಿವರ್ಸಿಟಿ ಉಪಕುಲಪತಿ ಪ್ರೊ.(ಡಾ.)ಲಕ್ಷ್ಮೀಕಾಂತ್ ಮತ್ತು ಕುಲಸಚಿವ ಪ್ರೊ.(ಡಾ.)ಎಸ್.ಪಿ.ಸಿಂಗ್ 2015 ಆಗಸ್ಟ್ 4ರಂದು ಬಿಡದಿಯಲ್ಲಿರುವ ಶಿಕ್ಷಣ ಹಕ್ಕುಗಳ ಕ್ಷೇತ್ರ ವಿಸ್ತರಣಾ ಕಾರ್ಯಕ್ರಮಕ್ಕೆ ಭೇಟಿ ನೀಡಿದರು. ಅತಿಥಿಗಳು ಬೈರಾಗಿ ಕಾಲನಿ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿನ ಎಸ್‌ಡಿಎಂಸಿ, ಬಾಲವಿಕಾಸ ಮತ್ತು ಸಮುದಾಯದ ಸದಸ್ಯರೊಂದಿಗೆ ಮಾತುಕತೆ ಆಡಿದರು. ನಂತರ ಅವರು ಆವರಗೆರೆ ಗ್ರಾಮದಲ್ಲಿರುವ “ನನ್ನ ಜಗ ನನ್ನ ಕಲಿಕೆ ಕೇಂದ್ರ” ಕೇಂದ್ರಕ್ಕೆ (ಮೈ ಸ್ಪೇಸ್ ಮೈ ಲರ್ನಿಂಗ್ ಸೆಂಟರ್) ಭೇಟಿ ನೀಡಿ, ಅಲ್ಲಿನ ಮಕ್ಕಳ ಜೊತೆಯಲ್ಲಿ ಮಾತಾಡಿದರು. ಭೇಟಿಯ ಕೊನೆಯಲ್ಲಿ ಅವರು ಕ್ಷೇತ್ರದಲ್ಲಿ ನಡೆದಿರುವ ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ತಾವು ಮಕ್ಕಳು ಮಕ್ಕಳು ಸಮುದಾಯದವರೊಂಗಿದೆ ನಡೆಸಿದ ಮಾತುಕತೆಯ ಗುಣಮಟ್ಟದ ಕುರಿತು ಅತ್ಯಂತ ತೃಪ್ತಿಯನ್ನು ವ್ಯಕ್ತಪಡಿಸಿದರು.

## ಅಸ್ಸಾಮ್‌ನ ನ್ಯಾಷನಲ್ ಲಾ ಯುನಿವರ್ಸಿಟಿ ಅಂಡ್ ಜುಡಿಶಿಯಲ್ ಅಕ್ಯಾಡಮಿ (NLUJA) ಭೇಟಿ

ಈ ಅವಧಿಯಲ್ಲಿ ಉಪಕುಲಪತಿಗಳಾದ ಪ್ರೊ.(ಡಾ.)ವಿಜೇಂದ್ರ ಕುಮಾರ್ ಮತ್ತು ಡಾ. ವಿಜಯ ಪ್ರತಾಪ್ ತಿವಾರಿಯವರು ಎರಡು ಬಾರಿ CCL NLSIUಗೆ ಭೇಟಿ ನೀಡಿದರು. NLUJA “ಸೆಂಟರ್ ಫಾರ್ ಚೈಲ್ಡ್ ರೈಟ್ಸ್” ಸ್ಥಾಪನೆ ಮಾಡಿದ್ದು ಅದರ ಉಸ್ತುವಾರಿಯನ್ನು ಡಾ.ವಿಜಯ್ ಪ್ರತಾಪ್ ತಿವಾರಿ ನೋಡಿಕೊಳ್ಳುತ್ತಿದ್ದಾರೆ. NLUJA ಮತ್ತು CCL ನಡುವೆ ಸಂಭವವಿರುವ ಸಹಯೋಗದ ಸ್ವರೂಪದ ಕುರಿತು ಆರಂಭಿಕ ಚರ್ಚೆಯನ್ನು ಮಾಡಲಾಯಿತು; 2015 ಜುಲೈ 16ರಂದು ನಡೆದ ಸಭೆಯಲ್ಲಿ ಒಂದು ಕರಡು ಒಡಂಬಡಿಕೆಯನ್ನು ಹಂಚಿಕೊಳ್ಳಲಾಯಿತು. 2015 ಅಕ್ಟೋಬರ್ 16ರಂದು CCL ಮತ್ತು NLUJA ನಡುವೆ ಔಪಚಾರಿಕ ಒಡಂಬಡಿಕೆಯನ್ನು ಸಹಿ ಮಾಡಲಾಯಿತು. ಸಿಸಿಎಲ್ ತಂಡ ಮತ್ತು NLUJAನ ಇತರ ಸದಸ್ಯರ ಸಮ್ಮುಖದಲ್ಲಿ NLSIU ಉಪಕುಲಪತಿ ಪ್ರೊ.(ಡಾ.)ಆರ್.ವೆಂಕಟರಾವ್ ಮತ್ತು ಪ್ರೊ.(ಡಾ.)ವಿಜೇಂದ್ರ ಕುಮಾರ್ ಒಡಂಬಡಿಕೆಯನ್ನು ಸಹಿ ಮಾಡಿದರು.

## ಗುಜರಾತ್ ನ್ಯಾಷನಲ್ ಲಾ ಯುನಿವರ್ಸಿಟಿ (GNLU) ಪ್ರತಿನಿಧಿಗಳಿಂದ ಭೇಟಿ

ಗುಜರಾತ್ ನ್ಯಾಷನಲ್ ಲಾ ಯುನಿವರ್ಸಿಟಿಯ ಡಾ.ಸೌರಭ್ ನಾಯಕತ್ವದಲ್ಲಿ ಗುಜರಾತ್ ಚೈಲ್ಡ್ ಪ್ರೊಟೆಕ್ಷನ್ ಯುನಿಟ್ ಮತ್ತು ಗುಜರಾತಿನ ಯುನಿಸೆಫ್ ಕಛೇರಿಯ ಪ್ರತಿನಿಧಿಗಳನ್ನು ಒಳಗೊಂಡ ನಿಯೋಗವು 2015 ಡಿಸೆಂಬರ್ 21ರಂದು CCL NLSIU ಕ್ಕೆ ಭೇಟಿ ನೀಡಿತು. ಸಿಸಿಎಲ್‌ನ ಪ್ರತಿಯೊಂದು ತಂಡದ ಪ್ರತಿನಿಧಿಗಳು ವಿಷಯ ಮಂಡನೆ ಮಾಡಿದರು ಮತ್ತು CCL NLSIU ಸಂಯೋಜಕರಾದ ಪ್ರೊ.ಎಲಿಜ಼ಬೆತ್‌ಅವರೊಂದಿಗೆ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು GNLU ನಲ್ಲಿ ಮಕ್ಕಳ ಹಕ್ಕುಗಳ ಕೇಂದ್ರವನ್ನು ಆರಂಭಿಸುವಲ್ಲಿ ಸಾಧ್ಯ ಸಹಯೋಗದ ಕುರಿತು ಚರ್ಚಿಸಲಾಯಿತು.






ಡಿಸೆಂಬರ್ 2, 3 ಮತ್ತು 4 ರಂದು ರಾಯಚೂರಿನಲ್ಲಿ ನಡೆದ 82 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸರಕಾರಿ ಶಾಲೆಗಳ ಅಳಿವು ಉಳಿವಿನ ಭಾಗವಾಗಿ ನಡೆದ ' ಸಮಾನ ಶಾಲಾ ಶಿಕ್ಷಣ: ಸಾಧ್ಯತೆ ಹಾಗು ಸವಾಲುಗಳು' ಗೋಷ್ಠಿಯ ಅಧ್ಯಕ್ಷತೆಯನ್ನು ಡಾ.ವಿ.ಪಿ.ನಿರಂಜನಾರಾಧ್ಯ ಅವರು ವಹಿಸಿದ್ದರು. ಈ ಗೋಷ್ಠಿಯಲ್ಲಿ ಸಮ್ಮೇಳನದ ಸರ್ವಾಧ್ಯಕ್ಷರಾದ ನಾಡೋಜ ಪ್ರೊ .ಬರಗೂರು ರಾಮಚಂದ್ರಪ್ಪ ಉಪಸ್ಥಿತರಿದ್ದರು.


| | |
|---|---|
| **ಸಂಪಾದನೆ ಮತ್ತು ಸಂಗ್ರಹ:** | ಡಾ.ನಿರಂಜನಾರಾಧ್ಯ.ವಿ.ಪಿ |
| **ಕಾರ್ಯಕ್ರಮವಾರು ಮಾಹಿತಿ ಮತ್ತು ಸಹಾಯ:** | ಅನುರೂಪ ಗಿಳಿಯಾಲ್, ಕುಮಾರಸ್ವಾಮಿ, ಝೂರಾ ಫಾತಿಮಾ ಕೈಸರ್, ಮತ್ತು ಸ್ಯಾಮ್ಯುಯಲ್ ಸತ್ಯಶೀಲನ್ |
| **ಪ್ರಕಟಣೆ:** | ಸಂಯೋಜಕರು, ಮಗು ಮತ್ತು ಕಾನೂನು ಕೇಂದ್ರ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ ನಾಗರಬಾವಿ, ಅಂಚೆ ಪೆಟ್ಟಿಗೆ ಸಂಖ್ಯೆ–7201, ಬೆಂಗಳೂರು–560 242 |

**ವೆಬ್ ಸೈಟ್ :** www.nls.ac.in/ccl, **ಇಮೈಲ್:** ccl@nls.ac.in, **ಟೆಲಿಫ್ಯಾಕ್ಸ್ :** 080-23160528

**ಪ್ರಸ್ತುತಿ ಮತ್ತು ವಿನ್ಯಾಸ:** ಡಾ. ಟಿ.ಎಸ್. ವಿವೇಕಾನಂದ